ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಭಾನುವಾರ 2025

46

ಸಂಪುಟ: 46 | ಸಂಚಿಕೆ: 243 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

13ನೇ ವರ್ಷದ ಚಿರಸ್ಮರಣೆ



ಶ್ರೀ ಕೆ.ಮಹದೇವಪ್ರಸಾದ್ (ಮಧು) ಎಂ.ಎಸ್
ಅಸಿಸ್ಟೆಂಟ್ ಮ್ಯಾನೇಜರ್, ಇ.ಐ.ಟಿ ಪ್ರೈ ಲಿ., ಬೆಂಗಳೂರು
21.12.2025ಕ್ಕೆ 13ನೇ ವರ್ಷದ ಪುಣ್ಯದಿನ ನಿನ್ನ ಆತ್ಮಕ್ಕೆ ದೇವರು ನೆಮ್ಮದಿ ಮತ್ತು ಶಾಂತಿಯನ್ನು ನೀಡಲೆಂದು ಪ್ರಾರ್ಥಿಸುವ ಹಾಗೂ ಸದಾ ನಿನ್ನ ನೆನಪಿನಲ್ಲಿರುವ
ತಂದೆ : ಶ್ರೀ ಜಿ.ಕೆಂಪಯ್ಯ, ನಿವೃತ್ತ ನಗರ ಹಾಗೂ ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ತಾಯಿ: ಎಸ್.ಪುಟ್ಟಗೌರಮ್ಮ, ಅಣ್ಣ, ಅತ್ತಿಗೆ ಹಾಗೂ ಮಕ್ಕಳು, ಅಕ್ಕ, ತಂಗಿಯರು, ಭಾವನವರುಗಳು ಹಾಗೂ ಬಂಧುಮಿತ್ರರು.

2026ರ ಟಿ–20 ವಿಶ್ವಕಪ್ ಟೂರ್ನಿಗೆ ಟೀಂ ಇಂಡಿಯಾ ಪ್ರಕಟ

- ನ್ಯೂಜಿಲೆಂಡ್ ವಿರುದ್ಧದ ಸರಣಿಗೂ ಇದೇ ತಂಡ
- ಶುಭ್ಮನ್ ಗಿಲ್ ಔಟ್, ಸೂರ್ಯಕುಮಾರ್ ನಾಯಕ



ಮುಂಬೈ,ಡಿ.20–2026ರ ಫೆಬ್ರವರಿ–ಮಾರ್ಚ್‌ನಲ್ಲಿ ನಡೆಯಲಿರುವ ಪುರುಷರ ಟಿ20 ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಗಾಗಿ ಭಾರತೀಯ ಕ್ರಿಕೆಟ್ ತಂಡವನ್ನು ಪ್ರಕಟಿಸಲಾಗಿದೆ.

ಮುಂಬೈನಲ್ಲಿರುವ ಭಾರತೀಯ ಕ್ರಿಕೆಟ್ ತಂಡದ (ಬಿಸಿಸಿಐ) ಕೇಂದ್ರ ಕಚೇರಿಯಲ್ಲಿ ಡಿ.20ರಂದು ನಡೆದ ತಂಡದ ಆಯ್ಕೆ ಮಂಡಳಿ ಸಭೆಯಲ್ಲಿ ತಂಡದ ಆಯ್ಕೆಯನ್ನು ಮಾಡಲಾಯಿತು. ಸಭೆಯ ನಂತರ ತಂಡವನ್ನು ಪ್ರಕಟಿಸಲಾಗಿದೆ. ಇದೇ ತಂಡ ಟಿ20 ವಿಶ್ವಕಪ್ ಪಂದ್ಯಾವಳಿಗೂ ಮುನ್ನ ಜನವರಿ– ಫೆಬ್ರವರಿಯಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ಭಾರತ–ನ್ಯೂಜಿಲೆಂಡ್ ನಡುವಿನ 5 ಟಿ20 ಪಂದ್ಯಗಳ ಸರಣಿಯಲ್ಲಿ ಭಾಗವಹಿಸಲಿದೆ. ಅದೇ ಪ್ರವಾಸದಲ್ಲಿ ಭಾರತ– ನ್ಯೂಜಿಲೆಂಡ್ ನಡುವೆ ಮೂರು ಏಕದಿನ ಪಂದ್ಯಗಳ ಸರಣಿಯೂ ನಡೆಯಲಿದ್ದು ಅದಕ್ಕಾಗಿ ಪ್ರತ್ಯೇಕ ತಂಡವನ್ನು ಪ್ರಕಟಿಸಲಾಗುತ್ತದೆ.

ತಂಡ ಇಂತಿದೆ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ತಿಲಕ್ ವರ್ಮಾ, ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ಅಕ್ಷರ್ ಪಟೇಲ್ (ಉಪನಾಯಕ), ರಿಂಕು ಸಿಂಗ್, ಕುಲದೀಪ್‌ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ, ವಾಷಿಂಗ್ಟನ್ ಸುಂದರ್.

ಶುಭ್ಮನ್ ಗಿಲ್ ಅವರನ್ನು ಕೈಬಿಡಲು ಕಾರಣ ಅವರು ಫಾರ್ಮ್‌ನಲ್ಲಿ ಇಲ್ಲದಿರುವುದು. ಅವರ ಸ್ಥಾನಕ್ಕೆ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರನ್ನು ಉಪನಾಯಕನನ್ನಾಗಿ ನೇಮಿಸಲಾಗಿದೆ. ಫಾರ್ಮ್‌ನಲ್ಲಿರುವ ಇಶಾನ್ ಕಿಶನ್ ಅವರನ್ನು ತಂಡಕ್ಕೆ ಮತ್ತೆ ಆಹ್ವಾನಿಸಲಾಗಿದೆ. ಜಿತೇಶ್ ಶರ್ಮಾ, ವಿಕೆಟ್ ಕೀಪರ್ ಆಗಿರುವ ಸಂಜು ಸ್ಯಾಮ್ಸನ್ ಅವರೂ ತಂಡದಲ್ಲಿದ್ದಾರೆ.

ಅಜಿತ್ ಅಗರ್ಕರ್ ವಿವರಣೆ: ಗಿಲ್ ಅವರನ್ನು ತಂಡದಿಂದ ಕೈಬಿಟ್ಟಿದ್ದಕ್ಕೆ ಸ್ಪಷ್ಟನೆ ಕೊಟ್ಟಿರುವ ಅಜಿತ್ ಅಗರ್ಕರ್, ಶುಭ್ಮನ್ ಗಿಲ್ ಅವರು ಫಾರ್ಮ್‌ನಲ್ಲಿಲ್ಲ. ಹಾಗಾಗಿ ಅವರಿಗೆ ವಿಶ್ವಕಪ್‌ನಂತಹ ಮಹತ್ವದ ಪಂದ್ಯಾವಳಿಗೆ ಅವಕಾಶವಿಲ್ಲ ಎಂದು ಅಗರ್ಕರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಈ ಹಿಂದೆ ಭಾರತದ ಏಷ್ಯಾ ಕಪ್ ವಿಜೇತ ತಂಡದ ಭಾಗವಾಗಿದ್ದ ರಿಂಕು ಸಿಂಗ್, ಜಿತೇಶ್ ಬದಲಿಗೆ ನಿಯೋಜಿತ ಫಿನಿಷರ್ ಆಗಿ ತಂಡಕ್ಕೆ ಮರಳಿದ್ದಾರೆ ಬ್ಯಾಕಪ್ ವಿಕೆಟ್ ಕೀಪರ್ ಆಗಿರುವುದರ ಜೊತೆಗೆ ಇಶಾನ್ ಅವರನ್ನು ಮೀಸಲು ಆರಂಭಿಕ ಆಟಗಾರನಾಗಿ ಆಯ್ಕೆ ಮಾಡಲಾಗಿದೆ.

ಗಿಲ್ ಕೈ ಬಿಟ್ಟಿದ್ದಕ್ಕೆ ಗವಾಸ್ಕರ್ ಅಚ್ಚರಿ: ನಾಯಕ ಶುಭ್ಮನ್ ಗಿಲ್ ಅವರನ್ನು ಟಿ20 ವಿಶ್ವಕಪ್ ತಂಡದಿಂದ ಕೈಬಿಟ್ಟಿರುವುದಕ್ಕೆ ಮಾಜಿ ಕ್ರಿಕೆಟಿಗ ಸುನಿಲ್ ಗವಾಸ್ಕರ್ ಅವರು ಅಚ್ಚರಿ ವ್ಯಕ್ತಪಡಿಸಿದ್ದಾರೆ. ಶುಭ್ಮನ್ ಗಿಲ್ ಅವರನ್ನು ಕೈಬಿಟ್ಟಿರುವುದು ಅಚ್ಚರಿ ಮೂಡಿಸಿದೆ. ಗುಣಮಟ್ಟದ ಬ್ಯಾಟರ್ ಅವರು. ಅವರು ಕೆಲವು ಪಂದ್ಯಗಳಿಗೆ ಕಷ್ಟಪಟ್ಟಿದ್ದಾರೆಂದು ನನಗೆ ತಿಳಿದಿದೆ. ಇತ್ತೀಚೆಗೆ ಅವರು ತಮ್ಮ ಆಟದಲ್ಲಿ ಲಯ ಕಳೆದುಕೊಂಡಿದ್ದಾರೆಂಬುದು ಅಷ್ಟೇ ಸತ್ಯ. ತಮ್ಮನ್ನು ತಂಡದಿಂದ ಕೈಬಿಟ್ಟಿರುವುದನ್ನು ಶುಭ್ಮನ್ ಗಿಲ್ ಅದನ್ನು ಸರಿಯಾದ ಮನೋಭಾವದಿಂದ ತೆಗೆದುಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದಿದ್ದಾರೆ.

ರಾಜ್ಯದಲ್ಲಿ 5 ವರ್ಷಗಳಲ್ಲಿ 24,139 ಮಾನವ ಹಕ್ಕು ಉಲ್ಲಂಘನೆ

ಬೆಂಗಳೂರು, ಮೈಸೂರಲ್ಲೇ ಅಧಿಕ ಪ್ರಕರಣ

ಬೆಂಗಳೂರು, ಡಿ.20– ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಕಳೆದ ಐದು ವರ್ಷಗಳಲ್ಲಿ 24,139 ಪ್ರಕರಣಗಳು ವರದಿಯಾಗಿದ್ದು, ಬೆಂಗಳೂರು ನಗರ ಮತ್ತು ಮೈಸೂರಿನಲ್ಲಿ ಅತೀ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆ.

ರಾಜ್ಯದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದ ಕಲಂ 21 ಅಡಿಯಲ್ಲಿ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಜಾರಿಯಲ್ಲಿದೆ. ಈ ಆಯೋಗ ಇಂತಹ ಪ್ರಕರಣಗಳನ್ನು ದಾಖಲು ಮಾಡಿ ತನಿಖೆ ನಡೆಸುತ್ತದೆ.

ವಿಚಾರಣೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಕಂಡು ಬಂದಲ್ಲಿ ಅಂತಹ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಆಯೋಗ ಶಿಸ್ತು ಕ್ರಮ ಕೈಗೊಳ್ಳುತ್ತಿದೆ.

ಯಾವ ಜಿಲ್ಲೆಯಲ್ಲಿ ಎಷ್ಟು ಪ್ರಕರಣ : ಬೆಂಗಳೂರು ನಗರ–8676, ಬೆಂಗಳೂರು ಗ್ರಾಮಾಂತರ–606, ಬಾಗಲಕೋಟೆ–332, ಬಳ್ಳಾರಿ–483, ಬೆಳಗಾವಿ–928, ಬೀದರ್–422, ಚಾಮರಾಜನಗರ–269, ಚಿಕ್ಕಬಳ್ಳಾಪುರ –353, ಚಿಕ್ಕಮಗಳೂರು–484, ಚಿತ್ರದುರ್ಗ–319, ದಕ್ಷಿಣ ಕನ್ನಡ–604, ದಾವಣಗೆರೆ–464, ಧಾರವಾಡ–590, ಗದಗ–218, ಹಾಸನ–667, ಹಾವೇರಿ–285, ಕಲಬುರ್ಗಿ–628, ಕೊಡಗು–230, ಕೋಲಾರ–603, ಕೊಪ್ಪಳ–317, ಮಂಡ್ಯ–586, ಮೈಸೂರು–1449, ರಾಯಚೂರು–352, ರಾಮನಗರ–477, ಶಿವಮೊಗ್ಗ–675, ತುಮಕೂರು–1331, ಉಡುಪಿ–299, ಉತ್ತರ ಕನ್ನಡ–485, ವಿಜಯನಗರ–265, ವಿಜಯಪುರ–537, ಯಾದಗಿರಿ–205.

ಏನೇನು ಕ್ರಮ: ಸ್ವಯಂಪ್ರೇರಿತವಾಗಿ ಅಥವಾ ಸಂಕಷ್ಟಕ್ಕೊಳಗಾದ ವ್ಯಕ್ತಿ ಅಥವಾ ಅವರ ಪರವಾಗಿ ಯಾವುದೇ ವ್ಯಕ್ತಿಯು ಮಾನವ ಹಕ್ಕುಗಳ ಉಲ್ಲಂಘನೆ ಅಥವಾ ಅದಕ್ಕೆ ದುಷ್ಪ್ರೇರಣೆ ಬಗ್ಗೆ ನೀಡಿದ ದೂರನ್ನು ದಾಖಲಿಸಿ ದೂರಿನ ಕುರಿತು ವಿಚಾರಣೆ ಕೈಗೊಂಡು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಮಾನವ ಹಕ್ಕುಗಳ ಉಲ್ಲಂಘನೆ ಸಾಬೀತಾದ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಪಾವತಿಸಲು ಆಯೋಗವು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಇಂತಹ ಉಲ್ಲಂಘನೆಗಳಿಗೆ ಕುಮ್ಮಕ್ಕು ಕೊಟ್ಟ ನೌಕರನಿಂದ– ಉಲ್ಲಂಘನೆಯನ್ನು ತಡೆಯುವಲ್ಲಿ ಆದ ನಿರ್ಲಕ್ಷ್ಯದ ಬಗೆಗಿನ ದೂರಿನ ವಿಚಾರಣೆ ನಡೆಸುತ್ತದೆ ಮತ್ತು ತಪ್ಪಿತಸ್ಥ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ. ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಕೈಗೊಳ್ಳುವ ರಾಜ್ಯ ವ್ಯಾಪ್ತಿ ಪ್ರವಾಸ (ಸಿಟ್ಟಿಂಗ್ಸ್) ದಲ್ಲಿ ಸಾರ್ವಜನಿಕರಿಂದ ಮಾನವ ಹಕ್ಕುಗಳು ಉಲ್ಲಂಘನೆಗೆ ಸಂಬಂಧಿಸಿದಂತೆ ದೂರುಗಳನ್ನು ಸ್ವೀಕರಿಸಲಾಗುತ್ತದೆ ಎಂದು ಕಾನೂನು ಸಚಿವರು ತಿಳಿಸಿದ್ದಾರೆ.

ಕಾಮನ್ ಲಾ ಅಡ್ಮಿಷನ್ ಟೆಸ್ಟ್‌ನಲ್ಲಿ ಮೈಸೂರಿನ ರೋಹನ್ ವಿ.ಗಂಗಡ್ಕರ್ ರಾಜ್ಯಕ್ಕೆ ದ್ವಿತೀಯ; ರಾಷ್ಟ್ರಕ್ಕೆ 36ನೇ ರ್ಯಾಂಕ್

ಮೈಸೂರು, ಡಿ.20– ರಾಷ್ಟ್ರ ಮಟ್ಟದ 'ಕಾಮನ್ ಲಾ ಅಡ್ಮಿಷನ್ ಟೆಸ್ಟ್'ನಲ್ಲಿ ಮೈಸೂರಿನ ಕಾನೂನು ವಿದ್ಯಾರ್ಥಿ ರೋಹನ್ ವಿ.ಗಂಗಡ್ಕರ್ ರಾಜ್ಯಕ್ಕೆ ಎರಡನೇ ಹಾಗೂ ರಾಷ್ಟ್ರಕ್ಕೆ 36ನೇ ರ್ಯಾಂಕ್ ಪಡೆದಿದ್ದಾರೆ.

ರಾಜ್ಯಕ್ಕೆ 10 ಸೇರಿದಂತೆ ದೇಶದಲ್ಲಿ ಒಟ್ಟು 737 ಸೀಟುಗಳಿಗೆ ನಡೆದ ಪರೀಕ್ಷೆಯಲ್ಲಿ ವಿವಿಧ ರಾಜ್ಯಗಳ ಸಾವಿರಾರು ಕಾನೂನು ವಿದ್ಯಾರ್ಥಿಗಳು ಹಾಜರಾಗಿದ್ದರು. ರೋಹನ್ ವಿ.ಗಂಗಡ್ಕರ್, ಲಾಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕರೂ ಆದ ಮೈಸೂರಿನ ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್ ಹಾಗೂ ಕೆಎಎಸ್ ಅಧಿಕಾರಿ ಮಂಜುಳಾ ದಂಪತಿ ಪುತ್ರ.



ರೋಹನ್ ವಿ.ಗಂಗಡ್ಕರ್

ರೋಹನ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಗಳಿಸಿದ್ದರು. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 600 ಅಂಕ ಗಳಿಸಿದ್ದರು. ಸದ್ಯ ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಇವರು, ರಾಷ್ಟ್ರಮಟ್ಟದ ಮೂಟ್ ಕೋರ್ಟ್ ಸ್ಪರ್ಧೆಯಲ್ಲಿ ಮೊದಲ ಸ್ಥಾನ ಗಳಿಸಿ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಹೈಕೋರ್ಟ್, ಸುಪ್ರೀಂಕೋರ್ಟ್, ಜಿಲ್ಲಾ ಹಾಗೂ ರಾಜ್ಯ ಪೊಲೀಸ್ ಸೈಬರ್ ಕಚೇರಿಯಲ್ಲಿ ಇಂಟರ್ನ್‌ಶಿಪ್ ಮಾಡಿ ಮೆಚ್ಚುಗೆ ಪಡೆದಿದ್ದಾರೆ. ಇವರ ತಂದೆ ಹೆಚ್.ಎನ್.ವೆಂಕಟೇಶ್ ಅವರ ಲಾಗೈಡ್ ಪತ್ರಿಕೆಯನ್ನು ಆನ್‌ಲೈನ್ ಸ್ವರೂಪದಲ್ಲೂ ಜನ ಸಾಮಾನ್ಯರಿಗೆ ತಲುಪಿಸಿ, ಕಾನೂನು ಮಾಹಿತಿ ಹಾಗೂ ಮಹತ್ವದ ತೀರ್ಪುಗಳ ಸಂಬಂಧಿತ ಲೇಖನಗಳನ್ನು ಪ್ರಕಟಿಸುವಲ್ಲೂ ಮಹತ್ವದ ಪಾತ್ರ ವಹಿಸಿದ್ದಾರೆ. ರೋಹನ್, ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸುವ ಆಕಾಂಕ್ಷೆ ಹೊಂದಿದ್ದಾರೆ.

ಡಿ.24ಕ್ಕೆ ಹೆಬ್ಬಾಳು ಸ್ಕೇಟಿಂಗ್ ಗ್ರೌಂಡ್‌ನಲ್ಲಿ 'ರೈತರ ಹಬ್ಬ'

ಮೈಸೂರು, ಡಿ.20(ಎಂಟಿವೈ)– ಮೈಸೂರಿನ ಹೆಬ್ಬಾಳ್ ಬಡಾವಣೆಯ ಸ್ಕೇಟಿಂಗ್ ಗ್ರೌಂಡ್‌ನಲ್ಲಿ ಡಿ.24ರಂದು ಬೆಳಗ್ಗೆ 11ಕ್ಕೆ ರಾಷ್ಟ್ರೀಯ ರೈತರ ದಿನಾಚರಣೆ ಅಂಗವಾಗಿ 'ರೈತರ ಹಬ್ಬ' ಆಯೋಜಿಸಲಾಗಿದೆ ಎಂದು ಕರುನಾಡು ರೈತ ರಕ್ಷಣಾ ಪಡೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಂ.ಕೆ.ಸಂಜಯ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಹಬ್ಬದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಂಸದ ಯದುವೀರ್ ಒಡೆಯರ್, ಸಚಿವರಾದ ಜಮೀರ್ ಅಹಮದ್, ಎನ್. ಚಲುವರಾಯಸ್ವಾಮಿ, ಮಾಜಿ ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ ಇನ್ನಿತರರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈ ವೇಳೆ ದಿವಂಗತ ಸಾಲುಮರದ ತಿಮ್ಮಕ್ಕ ಅವರಿಗೆ ನುಡಿನಮನ ಇನ್ನಿತರ ಕಾರ್ಯಕ್ರಮ ನಡೆಯಲಿವೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವರ್ತೂರು ಸಂತೋಷ್‌ಕುಮಾರ್ ವಹಿಸಲಿದ್ದಾರೆ ಎಂದರು. ರೈತರ ಹಬ್ಬದ ಅಂಗವಾಗಿ ಅಂದು ಬೆಳಗ್ಗೆ 10ಕ್ಕೆ ವಿಜಯನಗರ ವಾಟರ್ ಟ್ಯಾಂಕ್ ವೃತ್ತದಿಂದ ಸಭಾ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಭವ್ಯ ಮೆರವಣಿಗೆ ಇರಲಿದ್ದು, 10 ಜೊತೆ ಹಳ್ಳಿಕಾರ್ ಹಸುಗಳು ಪಾಲ್ಗೊಳ್ಳಲಿವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರುನಾಡು ರೈತ ರಕ್ಷಣಾ ಪಡೆ ಇನ್ನಿತರ ಪದಾಧಿಕಾರಿಗಳಾದ ಯತೀಶ್ ಪಟೇಲ್, ಕೆ.ಎಂ.ಶಿವಕುಮಾರ್, ಕೆ.ಜೆ.ಪರಮೇಶ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಆಂತರಿಕ ಶಾಂತಿ ಮತ್ತು ವೈಶ್ವಿಕ ಸಾಮರಸ್ಯಕ್ಕಾಗಿ ವಿಶ್ವಸಂಸ್ಥೆಯ ಆಶಯದಂತೆ ವಿಶ್ವಧ್ಯಾನದಿನ ಆಚರಣೆ, ಸಾನ್ನಿಧ್ಯ: ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಪ್ರಾಚಾರ್ಯ ಡಾ.ವೆಂಕಟಕೃಷ್ಣ, ಡಾ.ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಬಯಲುರಂಗಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 6ರಿಂದ.

■ **ಒಕ್ಕಲಿಗ ಯುವ ಬ್ರಿಗೇಡ್ :** ರಾಷ್ಟ್ರಕವಿ ಕುವೆಂಪು ಅವರ 121ನೇ ಜಯಂತ್ಯೋತ್ಸವ ಪ್ರಯುಕ್ತ ನಿರ್ಮಲ ಸಹಾಯಹಸ್ತ ಕಾರ್ಯಕ್ರಮ, ಸ್ಥಳ: ಭೋಗಾದಿ ರಿಂಗ್ ರಸ್ತೆ, ಬೆಳಗ್ಗೆ 8ಕ್ಕೆ.

■ **ಕ್ರೀಡಾ ಭಾರತಿ :** ಗಣ್ಯರ ಕಬಡ್ಡಿ ಆಟ, ಚಾಲನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಜಿಎಸ್‌ಎಸ್‌ಎಸ್ ಶಾಲಾ ಆವರಣ, ಬೆಳಗ್ಗೆ 8.30ಕ್ಕೆ.

■ **ಚಾಮರಾಜನಗರದ ದೀನಬಂಧು ಟ್ರಸ್ಟ್:** ಶ್ರೀ ಗುರು ಗಾನಯೋಗಿ ಸ್ವರ ಸಂಗೀತ ವಿದ್ಯಾಲಯದ ದ್ವಿತೀಯ ವಾರ್ಷಿಕೋತ್ಸವ ಹಾಗೂ ಸಂಗೀತ ಸಮಾರಾಧನೆ, ಅಧ್ಯಕ್ಷತೆ: ಚಾಮರಾಜನಗರದ ದೀನಬಂಧು ಟ್ರಸ್ಟ್‌ನ ಕಾರ್ಯದರ್ಶಿ ಜಿ.ಎಸ್.ಜಯದೇವ್, ಮುಖ್ಯ ಅತಿಥಿಗಳು: ಕರ್ನಾಟಕ ಸಂಗೀತ ಗಾಯಕ ವಿದ್ವಾನ್ ಮೈಸೂರು ಎನ್.ಶ್ರೀನಾಥ್, ಬಿಲ್ಡರ್ ಅಸೋಸಿಯೇಷನ್‌ನ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಉಮೇಶ್, ರಂಗಭೂಮಿ ಕಲಾವಿದ, ಮೈಸೂರು ಮೈಮ್ ಟೀಮ್‌ನ ಸಂಸ್ಥಾಪಕ ಮೈಮ್ ಗೌತಮ್, ಶ್ರೀ ಗುರು ಗಾನಯೋಗಿ ಸ್ವರ ಸಂಗೀತ ವಿದ್ಯಾಲಯ ಮೈಸೂರು ಹಾಗೂ ಹುಣಸೂರು, ದೀನಬಂಧು ಆಶ್ರಮದ ವಿದ್ಯಾರ್ಥಿಗಳಿಂದ ಹಿಂದೂಸ್ಥಾನಿ ಗಾಯನ ವಚನ, ಸಂಗೀತ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಕಾಮಾಕ್ಷಿ ಆಸ್ಪತ್ರೆ ಸಮೀಪ, ಸರಸ್ವತಿಪುರಂ, ಬೆಳಗ್ಗೆ 9ರಿಂದ ರಾತ್ರಿ 9ರವರೆಗೆ

■ **ಶ್ರೀ ಶ್ರೀ ಕೈವಾರ ಯೋಗಿ ನಾರೇಯಣ ಯತೀಂದ್ರರ ಬಲಿಜ (ಬಣಜಿಗ) ಸಂಘ:** 18ನೇ ವರ್ಷದ ಶ್ರೀ ಸತ್ಯನಾರಾಯಣಸ್ವಾಮಿ ಪೂಜಾ ಮಹೋತ್ಸವ, ಕ್ಯಾಲೆಂಡರ್ ಬಿಡುಗಡೆ ಹಾಗೂ ಪ್ರತಿಭಾ ಪುರಸ್ಕಾರ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಕುವೆಂಪುನಗರ, ಬೆಳಗ್ಗೆ 9.30ಕ್ಕೆ

■ **ಮಹರ್ಷಿ ಧ್ಯಾನ ಮತ್ತು ವ್ಯಕ್ತಿ ವಿಕಾಸ ಕೇಂದ್ರ:** ವಿಶ್ವ ಧ್ಯಾನ ದಿನ ಮತ್ತು ಭಗವಾನ್ ಬ್ರಹ್ಮಾನಂದ ಸರಸ್ವತಿಯವರ ಜನ್ಮ ದಿನೋತ್ಸವ, ಉಪಸ್ಥಿತರು: ಕೇಂದ್ರದ ಅಧ್ಯಕ್ಷ ಎಂ.ಎಸ್.ನಟೇಶ್, ಪಾಲಿಕೆ ಅಧೀಕ್ಷಕ ಅಭಿಯಂತರ (ನಿವೃತ್ತ) ಬಿ.ಕೆ.ಸುರೇಶ್‌ಬಾಬು, ಸಂಸ್ಕೃತ ವಿದ್ವಾಂಸ ಗುರುಪಾದ ಕೆ.ಹೆಗಡೆ, ಪ್ರೊ.ಕೆ.ಆರ್.ಜಗನ್ನಾಥಯ್ಯ ಶೆಟ್ಟಿ, ಪ್ರಿನ್ಸಿಪಾಲ್ ಆರ್.ಶಾಂತಕುಮಾರಿ, ಸ್ಥಳ: ರಂಗರಾವ್ ಧ್ಯಾನ ಸಭಾಂಗಣ, ಶಾರದಾದೇವಿನಗರ, ಬೆಳಗ್ಗೆ 10ಕ್ಕೆ

■ **ರೋಟರಿ ಬೆಂಗಳೂರು ಸೌತ್ ಪರೇಡ್, ರೋಟರಿ ಮೈಸೂರು ಮೆಟ್ರೋ:** ಅಮೃತವರ್ಷಿಣಿ ಕಾರ್ಯಕ್ರಮ, ಉಪಸ್ಥಿತರು: ಬಿ.ಆರ್.ಶ್ರೀಧರ್, ಪಿ.ಕೆ. ರಾಮಕೃಷ್ಣ, ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ.ಕೆ.ಆರ್. ದಾಕ್ಷಾಯಿಣಿ, ರೋಟರಿ ಸುನೀಲ್‌ಕುಮಾರ್, ಡಿ.ಆರ್.ಸತೀಶ್, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಆರ್.ಸುಧಾ, ರೋಟರಿ ಮೈಸೂರು ಮೆಟ್ರೋ ಅಧ್ಯಕ್ಷ ಎಂ.ಪಿ. ಗೋಪಾಲಕೃಷ್ಣ, ಕಾರ್ಯದರ್ಶಿ ಮೋಹನ್ ಗುರುಮೂರ್ತಿ, ಸ್ಥಳ: ಚೆಲುವಾಂಬ ಆಸ್ಪತ್ರೆ, ಬೆಳಗ್ಗೆ 10ಕ್ಕೆ


■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘ:** ಸಂತಶ್ರೇಷ್ಠ ಶ್ರೀ ಕನಕದಾಸರ 538ನೇ ಜಯಂತ್ಯೋತ್ಸವ, ಸಾನ್ನಿಧ್ಯ: ಶ್ರೀ ಶಿವಾನಂದಪುರಿ ಸ್ವಾಮೀಜಿ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಅಧ್ಯಕ್ಷತೆ : ಸಂಸದ ಸುನೀಲ್ ಬೋಸ್, ಜ್ಯೋತಿ ಬೆಳಗಿಸುವವರು: ಶಾಸಕ ಡಿ.ರವಿಶಂಕರ್, ಉಪಸ್ಥಿತರು: ಶಾಸಕರಾದ ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಹೆಚ್.ಡಿ. ಗಣೇಶ್, ನಿಖಿತ್‌ರಾಜ್ ಮೌರ್ಯ, ಡಾ.ಪಿ.ಎಸ್.ಲೋಹಿತ್, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ಗಂಟೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀಸೂತ್ರ ಆಯುರ್ಧಾಮ :** ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ :** ಬೆಳಗ್ಗೆ 10 ರಿಂದ ಸಮಿತಿಯ ರಜತ ಮಹೋತ್ಸವ, ಸಾನ್ನಿಧ್ಯ: ಡಾ. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಪ್ರಾಸ್ತಾವಿಕ ನುಡಿ : ಕೆ.ಎಸ್. ಗೋಪಾಲಕೃಷ್ಣ, ಉದ್ಘಾಟನೆ: ಕರ್ನಾಟಕ ಸಂಸ್ಕೃತ ವಿವಿ ಉಪಕುಲಪತಿ ಡಾ.ಎಸ್. ಅಹಲ್ಯ, ಮುಖ್ಯ ಅತಿಥಿಗಳು : ಭಾರತೀ ಯೋಗಧಾಮ ಸಂಸ್ಥಾಪಕ ಡಾ.ಕೆ.ಎಲ್. ಶಂಕರನಾರಾಯಣ ಜೋಯಿಸ್, ಪ್ರಾಂತ ವಿಸ್ತಾರ ಪ್ರಮುಖ ಎಂ. ರೆಡ್ಡಯ್ಯರಾಜು, ಅಧ್ಯಕ್ಷತೆ: ಸಮಿತಿ ಕೋಶಾಧ್ಯಕ್ಷ ಎನ್.ಎಸ್.ಮಹೇಶ್, ಮಧ್ಯಾಹ್ನ 1 ರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಉದ್ಘಾಟನೆ: ಸಮಿತಿ ಉಪಾಧ್ಯಕ್ಷ ಎನ್. ಚನ್ನಬಸಪ್ಪ, ಉಪಾಧ್ಯಕ್ಷೆ ಶ್ರೀಮತಿ ಹೆಚ್.ಟಿ.ಪುಷ್ಪ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.



ಇಂದಿನ ಪಂಚಾಂಗ

21.12.2025 ಭಾನುವಾರ, ಮಳೆ ನಕ್ಷತ್ರ: ಮೂಲ, 16.12.2025 ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಪೂಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಸುವರ್ಣ ರಾಜ್ಯ ಶಿವಾರ್ಚಕ ಪ್ರಗತಿಪರ ಸಂಘ :** ಕನ್ನಡ ರಾಜ್ಯೋತ್ಸವ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಸಾನ್ನಿಧ್ಯ: ಶಿವಾರ್ಚಕ ನಿಂಗಪ್ಪ, ಸಮ್ಮುಖ: ಡಾ. ಕೆ.ಎಸ್.ಎನ್.ದೀಕ್ಷಿತ್, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಬನ್ನೂರು ನಾಗರಾಜು, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಆಶಯ ನುಡಿ : ಆರ್. ರಘು (ಕೌಟಿಲ್ಯ), ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಬ್ರಾಹ್ಮಣ ಧರ್ಮ ಸಹಾಯ ಸಭಾ :** 98ನೇ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಭಾ ಅಧ್ಯಕ್ಷ ಎನ್. ಶ್ರೀನಿವಾಸ, ಸ್ಥಳ: ಬ್ರಾಹ್ಮಣ ಧರ್ಮ ಸಹಾಯ ಸಭಾ, ಕಲ್ಯಾಣ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** ಶ್ರೀ ಸುಬ್ರಹ್ಮಣ್ಯಸ್ವಾಮಿ ಷಷ್ಠಿ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಮೈಸೂರು ವೀರಶೈವ ಸಜ್ಜನ ಸಂಘ, ವಿಶ್ವೇಶ್ವರನಗರ, ಬೆಳಗ್ಗೆ 11ಕ್ಕೆ.

■ **ಮಾನವ ಹಕ್ಕುಗಳ ಸೇವಾ ಸಮಿತಿ :** ಕಾನೂನು ಅರಿವು –ನೆರವು ಕಾರ್ಯಕ್ರಮ, ವಿವಿಧ ಕ್ಷೇತ್ರದ ಕಲಾವಿದರಿಗೆ ಹಾಗೂ ಸಾಧಕರಿಗೆ ಮಾನವರತ್ನ ರಾಜ್ಯ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಹಿರಿಯ ಸಿವಿಲ್ ನ್ಯಾಯಾಧೀಶ ಅಮರ್‌ನಾಥ್, ಅಧ್ಯಕ್ಷತೆ: ಸಮಿತಿ ರಾಜ್ಯಾಧ್ಯಕ್ಷ ಡಾ.ಸೀತಾರಾಮೇಗೌಡ, ವಿಶೇಷ ಆಹ್ವಾನಿತರು: ಡಾ. ನಾಗರಾಜ್ ವಿ. ಭೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೆ.ಬಿ.ಲಿಂಗರಾಜು, ಶ್ರೀಮತಿ ರೇಣುಕಾಂಬ, ಕೃಷ್ಣ ಪೂಜಾರಿ, ಶ್ರೀಮತಿ ಎಂ.ಸಿ. ಚೋಂದಮ್ಮ ಪೊನ್ನಚ್ಚ, ಸತ್ಯಪ್ರಕಾಶ್, ಹೆಚ್.ಟಿ. ಪಾರ್ವತಿ, ಸ್ಥಳ: ರೋಟರಿ ಸಭಾಂಗಣ, ಮುಡಾ ಎದುರು, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.

■ **ವಿಶ್ವಮಾನವ ಯೋಗ ಶಿಕ್ಷಣ ಸಂಸ್ಥೆ :** ಬೆಳಗ್ಗೆ 11.30ಕ್ಕೆ ರಾಷ್ಟ್ರ ಮಟ್ಟದ ಯೋಗಾಸನ ಚಾಂಪಿಯನ್‌ಶಿಪ್, ಉಪಸ್ಥಿತರು : ಶ್ರೀಶಿರಡಿ ಸಾಯಿ ಭಿಕ್ಷಾ ಕೇಂದ್ರ, ಬೆಂಗಳೂರು ಸಂಸ್ಥಾಪಕ ಡಾ. ಲಕ್ಷ್ಮೀ ಶ್ರೀನಿವಾಸ ಗುರೂಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಗೋವಿಂದೇಗೌಡ, ಮುಖ್ಯ ಅತಿಥಿಗಳು: ಶಾಸಕ ಜಿ.ಟಿ. ದೇವೇಗೌಡ, ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಹರಿದ್ವಾರಕಾನಾಥ್, ಎಸ್.ಕೆ. ರಾಜೇಗೌಡ, ಡಾ. ಪಿ.ಎನ್. ಗಣೇಶ್‌ಕುಮಾರ್, ಡಾ.ಸಿ. ರೇಣುಕಾದೇವಿ, ಕೆ.ಜಿ. ದೇವರಾಜು, ಡಾ. ಸಿ. ರಮೇಶ್‌ಶೆಟ್ಟಿ, ಸಂಜೆ 5ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಅಧ್ಯಕ್ಷತೆ : ಆರ್‌ಆರ್ ಕಲ್ಯಾಣ ಮಂಟಪ ಮಾಲೀಕ ನಾರಾಯಣರಾವ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಕೋಟೆ ಶಿವಣ್ಣ, ಡಾ. ಶಶಿರೇಖಾ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ.ದಯಾನಂದ, ಟಿ. ಜಲೇಂದ್ರಕುಮಾರ್, ಎನ್. ಅನಂತ, ಟಿ. ಶಾಂತಾರಾಮ್, ಡಾ.ಬಿ.ಪಿ. ಮೂರ್ತಿ, ಬಿ. ರವಿ, ಎಸ್. ಮಹದೇವೇಗೌಡ, ಸ್ಥಳ: ಜಗನ್ಮೋಹನ ಅರಮನೆ.

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಮೈಸೂರು ಯೋಗ ಉತ್ಸವ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಉಪಸ್ಥಿತರು : ಹರಿವಾಡ್ಲಮಣಿ, ಡಾ.ವಿನಯಚಂದ್ರ ಬಾನಾವತಿ, ಡಾ.ಎ. ಸುಬ್ರಮಣಿಯನ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ ಮೊದಲನೇ ಹಂತ, ಮಧ್ಯಾಹ್ನ 12.45ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 66ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ, ಮುಖ್ಯ ಅತಿಥಿಗಳು: ಮೋಹನ್ ವೆರ್ನೇಕರ್, ಭಾರತೀಯ ಶಾಸ್ತ್ರೀಯ ನೃತ್ಯಗಳಾದ ಸತ್ರಿಯ, ಕೂಚುಪುಡಿ, ಕಥಕ್ ಹಾಗೂ ಭರತನಾಟ್ಯ ನೃತ್ಯ ಪ್ರಕಾರಗಳ ನೃತ್ಯ ಕಾರ್ಯಕ್ರಮ, ಅಮೆರಿಕದಿಂದ ಮತ್ತು ದುಬೈನ ಶ್ರೀಮತಿ ಶ್ರೀದೇವಿ ಜಗನ್ನಾಥ್ ಮತ್ತು ಶ್ರೀಮತಿ ರೋಹಿಣಿ ಅನಂತ ಅವರಿಂದ ಸತ್ರಿಯ ನೃತ್ಯ ಕಾರ್ಯಕ್ರಮ, ಆಂಧ್ರಪ್ರದೇಶದ ಹೈದರಾಬಾದ್‌ನ ಶ್ರೀಮತಿ ಪದ್ಮಶ್ರೀ ಬಲು ಉರಿ ಮತ್ತು ಇವರ ಶಿಷ್ಯರಿಂದ ಕೂಚುಪುಡಿ ನೃತ್ಯ ಪ್ರದರ್ಶನ, ಬೆಂಗಳೂರಿನ ವಿದುಷಿ ಶ್ರೀಮತಿ ಸೀಮಾ ಕೃಷ್ಣನ್ ಮತ್ತು ಶಿಷ್ಯರಿಂದ ಕಥಕ್ ನೃತ್ಯ ಕಾರ್ಯಕ್ರಮ, ಮಂಗಳೂರಿನ ಡಾ. ರಾಧಿಕಾ ಕಲ್ಲೂರಾಯ ಮತ್ತು ಶಿಷ್ಯರಿಂದ ಭರತನಾಟ್ಯ ನೃತ್ಯ ಕಾರ್ಯಕ್ರಮ, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 2.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಶಾಂತ ನಾಗರಾಜ್, 6.15 ಗೀತಾ ರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಡಾ.ಎಂ.ಎ. ಜ್ಯೋತಿ, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪರ 'ದೂರ ಸರಿದರು' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.40 ನಮ್ಮ ಆರೋಗ್ಯ ಒನ್ ಹೆಲ್ತ್ ಸಮಗ್ರ ಆರೋಗ್ಯ ಕುರಿತು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಸುಮಂತ್ ಎಂ.ಎಂ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ, ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ–ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಉದಯೋನ್ಮುಖ ಈಜುಗಾರ್ತಿ ಪನಿಷ್ಕ.ಕೆ ಹಾಗೂ ಅವರ ತಂದೆ ಕುಮಾರಸ್ವಾಮಿ. ಎಸ್.ಎನ್ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್, 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಕೊಳ್ಳೇಗಾಲ ತಾಲೂಕು ಸತ್ತೇಗಾಲದ ಶಿವಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನ ಮಂತ್ರಿ ಉದ್ಯೋಗ ಆಧಾರಿತ ಪ್ರೋತ್ಸಾಹಧನ ಯೋಜನೆ ಕುರಿತು ಮಾಹಿತಿ, 1.20 ಭಾವಗೀತೆಗಳು–ಪಿ.ಸುಮನಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ– ಸಿನಿಸೆಲೆಬ್ರಿಟಿಗಳೊಂದಿಗೆ ಮಾತುಕತೆ – ಖ್ಯಾತಗಾಯಕಿ ಡಾ.ಶಮಿತಾ ಮಲ್ನಾಡ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಶ್ರೀಮಾನ್ ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ, ತಾಳಮದ್ದಲೆ, ಪ್ರಸಂಗ–ಗುರುದಕ್ಷಿಣೆ, ಪ್ರಸ್ತುತಿ–ಶ್ರೀಧರ್ಮಸ್ಥಳ ಮಂಜುನಾಥ ಕೃಪಾ ಪೋಷಿತ ಯಕ್ಷಗಾನ ಮಂಡಲಿ ಸದಸ್ಯರು, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಭಾರತೀಯ ಸಂಸ್ಕೃತಿ ಈ ಕುರಿತು ಮಾತನಾಡುತ್ತಾರೆ ಉತ್ತರ ಕನ್ನಡ ಜಿಲ್ಲೆ ಸಿರ್ಸಿಯ ಸುರೇಶ್. ಜಿ. ಕಡೇಮನಿ, 8.00 ಫಸ್ಟ್ ಫಿಲ್ಮ್– ಪ್ರಸ್ತುತಿ–ಶ್ರೀಮಾನ್ ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 9.30 ರಾಷ್ಟ್ರೀಯ ಕಾರ್ಯಕ್ರಮದಲ್ಲಿ ರೂಪಕ, 10.00 ರವಿವಾರದ ಅಖಿಲ ಭಾರತದ ಸಂಗೀತ ಸಭಾ–ಪಂಡಿತ್ ಕಿಶೋರ್ ಬ್ಯಾನರ್ಜಿ– ತಬಲಾ ವಾದನ ಹಾಗೂ ಶ್ರೀ ಸದ್ಗುರು ಚರಣ್–ಮೃದಂಗ ವಾದನ

■ **ಎಂಪವರ್ಡ್ ಜರ್ನೀಸ್ 2025:** ಇನ್‌ಫ್ಲೂಯೆನ್ಸರ್ ಅವಾರ್ಡ್ಸ್–2025, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಒಡೆಯರ್, ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ವ್ಯವಸ್ಥಾಪಕ ನಿರ್ದೇಶಕ ಧನಂಜಯ ಸುಧನ್ವ, ಅಪರ ಜಿಲ್ಲಾಧಿಕಾರಿ ಶಿವರಾಜ್, ಎಸಿಪಿ ಎಂ.ಶಿವಶಂಕರ, ರಂಗಸನ್ಸ್ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ, ಡಾ.ಸಾಯಿ ಕವಿತಾ ಕೃಷ್ಣ ಅಯ್ಯಂಗಾರ್, ಅಕ್ಷತ್ ಚೌಧರಿ, ಸ್ಥಳ: ಸದರನ್ ಸ್ಟಾರ್ ಹೋಟೆಲ್, ಮಧ್ಯಾಹ್ನ 3.30 ರಿಂದ.

■ **ಮೈಸೂರು ಅರಮನೆ ಮಂಡಳಿ:** ಮಾಗಿ ಉತ್ಸವ, ಅರಮನೆ ಫಲಪುಷ್ಪ ಪ್ರದರ್ಶನ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಉಪಸ್ಥಿತರು: ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್ ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಸಂಸದರಾದ ಯದುವೀರ್ ಒಡೆಯರ್ ಹಾಗೂ ಸುನೀಲ್ ಬೋಸ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ರವಿಶಂಕರ್ ಡಿ., ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ.ಯತಿಂದ್ರ ಎಸ್., ಕೆ. ವಿವೇಕಾನಂದ ಮತ್ತು ಕೆ. ಶಿವಕುಮಾರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಹಾಗೂ ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಮೈಸೂರು ಪೇಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಎಚ್.ಬಿ. ಗಣೇಶ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಬೆಂಗಳೂರಿನ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷ ರಾಮಪ್ಪ. ಎಂ., ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಪ್ಯಾರಿಜಾನ್, ಡಾ. ಶಾಲಿನಿ ರಜನೀಶ್, ಸ್ಥಳ: ಅರಮನೆ ಆವರಣ, ಸಂಜೆ 4ಕ್ಕೆ.

■ **ಪಾವನ ಮ್ಯೂಸಿಕಲ್ ಇವೆಂಟ್ಸ್ :** ಚಲನಚಿತ್ರ ಗೀತೆಗಳ ಮಧುರ ಸಂಗೀತ ಸಂಭ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 4.30 ರಿಂದ.

■ **ಸ್ವರ ಮಾಧುರ್ಯ ಟ್ರಸ್ಟ್, ಸಾಂಸ್ಕೃತಿಕ ಕಲಾ ಸಂಘ :** ಧ್ವನಿ ಸುರುಳಿ ಬಿಡುಗಡೆ, ಪ್ರಶಸ್ತಿ ಪ್ರದಾನ ಸಮಾರಂಭ, ಸಮೂಹ ಗೀತ ಗಾಯನ, ಉಪಸ್ಥಿತರು: ಗಾಯಕಿ ಶ್ರೀಮತಿ ಸಾವಿತ್ರಿ ಪ್ರಭಾಕರ್, ಶಾಸಕ ಟಿ.ಎಸ್. ಶ್ರೀವತ್ಸ, ಡಾ.ನಾಗರಾಜ್ ವಿ.ಭೈರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ

■ **ಶ್ರೀ ನಿಮಿಷಾಂಬ ಡ್ಯಾನ್ಸ್ ಪ್ರಮೋಟರ್ಸ್:** ಹೆಜ್ಜೆ ಗೆಜ್ಜೆ ಸಂಭ್ರಮ, ಸುಮಾರು 200 ಕಲಾವಿದರಿಂದ ಶಿವ ತಾಂಡವ ನೃತ್ಯೋತ್ಸವ, ಅತಿಥಿಗಳು: ರಂಗಕರ್ಮಿ ಡಾ.ಗಿರಿಜಾ ಲೋಕೇಶ್, ಚಿತ್ರ ನಟ ಸೃಜನ್ ಲೋಕೇಶ್, ವಿದುಷಿ ಪೂಜಾ ಲೋಕೇಶ್, ವಿದುಷಿ ಗ್ರೀಷ್ಮಾ ಸೃಜನ್ ಲೋಕೇಶ್, ವಿದುಷಿ ವಿದ್ಯಾ ವೆಂಕಟರಾಮು ಮತ್ತು ತಂಡ, ವಿದ್ವಾನ್ ನಿಧಾಗ್ ಕರುನಾಡ್ ವಿದುಷಿ ರಚನಾ ಕರಣಿಕ್ ಮತ್ತು ತಂಡ, ವಿದುಷಿ ಮಧುಲಿತ ಮಹೋಪಾತ್ರ ಮತ್ತು ತಂಡ, ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 5ಕ್ಕೆ

■ **ಅರ್ಕ ಫೌಂಡೇಷನ್ ಮತ್ತು ಅರ್ಕಧಾಮ :** ಉಪಸ್ಥಿತರು : ಯೋಗಿ ಶ್ರೀನಿವಾಸ ಅರ್ಕ, ವಿದ್ವಾನ್ ಮಾಣಿಕ್ಕಂ ಯೋಗೇಶ್ವರನ್ ಅವರಿಂದ ಶಾಸ್ತ್ರೀಯ ಸಂಗೀತ ಕಛೇರಿ, ವಿದ್ವಾನ್ ಮಧುಸೂದನ್–ಪಿಟೀಲು, ವಿದ್ವಾನ್ ಎಂ.ಆರ್. ಮಂಜುನಾಥ್–ಮೃದಂಗ, ವಿದ್ವಾನ್ ಎಂ.ಎಸ್. ಜಯರಾಮ್–ಖಂಜಿರಾ, ವಿದ್ವಾನ್ ಎಂ.ಎಸ್. ಕಿರಣ್‌ಕುಮಾರ್–ಘಟಂ, ವಿದ್ವಾನ್ ಎಂ.ಆರ್. ಮೋಹನ್–ಮೋರ್ಸಿಂಗ್, ವಿದ್ವಾನ್ ಆರ್. ರವೀಂದ್ರ–ತಂಬೂರ, ಸ್ಥಳ: ಅರ್ಕಧಾಮ ಸಭಾಂಗಣ, ಕಣಿಯನಹುಂಡಿ ಗೇಟ್, ಮಧ್ಯಾಹ್ನ 3 ರಿಂದ.

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಸಂಜೆ 5.30ಕ್ಕೆ ನವೀನ್ ಕುಮಾರ್ ಮತ್ತು ತಂಡ, ಕಡೂರು ಅವರಿಂದ ವೀರಗಾಸೆ, ಸಂಜೆ 7ಕ್ಕೆ ಶ್ರೀರಂಗಪಟ್ಟಣ ನಿರ್ದಿಗಂತ ತಂಡದಿಂದ ದಾರಿಯೋ ಫೋ ಅವರ 'ಕಾಂಟ್ ಪೇ ವೊಂಟ್ ಪೇ' ಆಧಾರಿತ ಕೊಡಲ್ಲ ಅಂದ್ರೆ ಕೊಡಲ್ಲ ನಾಟಕ ಪ್ರದರ್ಶನ, ಸಂಗೀತ : ಅನುಷ್ ಶೆಟ್ಟಿ, ನಿರ್ದೇಶನ : ಶಕೀಲ್ ಅಹ್ಮದ್, ಸ್ಥಳ: ಕಿರು ರಂಗಮಂದಿರ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 65ನೇ ವಾರ್ಷಿಕ ಪೂಜಾ ಮಹೋತ್ಸವ, 26ನೇ ವಾರ್ಷಿಕ ಧ್ವಜಾರೋಹಣ ಮಹೋತ್ಸವ, ಸಂಜೆ 6 ರಿಂದ ಧ್ವಜಾರೋಹಣ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಾಲಯ, ಚಾಮುಂಡಿಬೆಟ್ಟದ ಪಾದ.

■ **ಕೊಂಕಣಿ ಕ್ರಿಶ್ಚಿಯನ್ ಅಸೋಸಿಯೇಷನ್:** ಕೊಂಕಣಿ ಭಾಷಿಕರ ಕುಟುಂಬಗಳ ಕ್ರಿಸ್ಮಸ್ ಸಮ್ಮಿಲನ ಕಾರ್ಯಕ್ರಮ, ಕ್ರಿಸ್ಮಸ್ ಸಂದೇಶ ನೀಡುವ ಕಾರ್ಯಕ್ರಮ, ರಂಗರಾವ್ ಸ್ಮಾರಕ ವಿಶೇಷ ಚೇತನ ಮಕ್ಕಳಿಂದ ನೃತ್ಯರೂಪಕ, ಸ್ಥಳ: ಕೊಂಕಣ್ ಭವನ (ವಾಲ್ಮೀಕಿ ಭವನದ ಹತ್ತಿರ), ವಿಜಯನಗರ ಮೊದಲನೇ ಹಂತ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ರಾಷ್ಟ್ರೀಯ ಗೊಂಬೆಯಾಟ ಉತ್ಸವದ ಸಮಾರೋಪ, ಗೌರವ ಅತಿಥಿಗಳು : ಉದ್ಯಮಿ ಆರ್. ಗುರು, ಸ್ಥಳ: ಹಾರ್ಡ್ವಿಕ್ ಶಾಲಾ ಆವರಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ರಂಗಾಯಣ:** ರಂಗಾಯಣ ನಾಟಕ ಉತ್ಸವ, ದಾವಣಗೆರೆ ರಂಗಾಯಣ ತಂಡದಿಂದ ಪ್ರತಿ ಗಂಧರ್ವ ನಾಟಕ ಪ್ರದರ್ಶನ, ರಚನೆ : ಡಾ.ರಾಜಪ್ಪ ದಳವಾಯಿ, ಸಂಗೀತ : ರವಿ ಮೂರುರು, ನಿರ್ದೇಶನ: ಮಾಲತೇಶ್ ಬಡಿಗೇರ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30ರಿಂದ.

■ **ಸಾಧನಾ ಮಂದಿರ:** ಸರಸ್ವತಿ ಪೂಜೆ ವಿಶೇಷ ತರಬೇತಿ, ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಮತ್ತು ವಿಧಾನಗಳೊಂದಿಗೆ, ಸ್ಥಳ: ಸಂಜೆ 6.30ಕ್ಕೆ ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಬಿಇಎಂಎಲ್ ನಗರ, ಶ್ರೀರಾಮಪುರ, ಸಂಜೆ 7.30ಕ್ಕೆ ಮೈಸೂರು ಮೃಗಾಲಯ, ಎಸ್‌ವಿಎಂ ಲೇಔಟ್, ಕೆನರಾ ಬ್ಯಾಂಕ್ ಹಿಂಭಾಗ, ವಿವೇಕಾನಂದನಗರ.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ಧನುರ್ಮಾಸ ವಿಶೇಷ ಪೂಜೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಡಿಸೆಂಬರ್ 21 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 243 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಹೊಟ್ಟೆಯೊಳಗೆ ಹಲ್ಲಿ ಹೋಗೋ ತನಕ ನಿನಗೆ ಗೊತ್ತಾಗಲೇ ಇಲ್ವಾ?

ಗುಂಡ : ಅದಕ್ಕೂ ಮೊದಲು ಒಂದು ನೊಣ ಹೋಗಿತ್ತು. ನೊಣ ಹಿಡಿಯಲು ಹಲ್ಲಿ ಹೋಗುತ್ತಿರಬಹುದು ಎಂದುಕೊಂಡು ಸುಮ್ಮನಿದ್ದೆ!

ಮೈಸೂರು ಮಿತ್ರ

ಭಾನುವಾರ, 21 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಮತ್ತೊಬ್ಬರು ನಿನ್ನನ್ನು ತೆಗಳಿದಾಗ ಸ್ವೀಕರಿಸುವ ಗುಣವಿದ್ದರೆ... ಅದು ಪರಿಪೂರ್ಣತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಯಲೆಲ್ಲಾ ವೇದಾಂತ, ಮಾಡುವುದೆಲ್ಲಾ ರಾದ್ಧಾಂತ.

ನಿಮ್ಮ ಪತ್ರಗಳು

ಅತಿಥಿಗಳಿಂದ ಪ್ರೊ.ಎಂ.ಕೃಷ್ಣೇಗೌಡರ ಗುಣಗಾನ

ಮಾನ್ಯರೆ,

ಅನಿಕೇತನ ಟ್ರಸ್ಟ್ ಹಾಗೂ ವಿಸ್ಮಯ ಬುಕ್ ಹೌಸ್ ಸಂಸ್ಥೆ ಏರ್ಪಡಿಸಿದ್ದ ಪ್ರೊ.ಎಂ.ಕೃಷ್ಣೇಗೌಡರ ನಾಲ್ಕು ಕೃತಿಗಳ ಅನಾವರಣ ಕಾರ್ಯಕ್ರಮದಲ್ಲಿ ಕರ್ನಾಟಕ ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರಾದ ಕೆ.ಆರ್.ರಮೇಶ್ ಕುಮಾರ್ ಅವರು ಮಾತನಾಡಿ, ಅನ್ಯಾಯದ ವಿರುದ್ಧ ಸಿಡಿದೇಳುವ ಸಾರ್ವಜನಿಕ ಸಿಟ್ಟು ಇಂದು ಇಲ್ಲವಾಗಿದೆ. ಪ್ರಸ್ತುತ ಸಮಾಜದಲ್ಲಿ ಈಗ ಹಂಗು ಬಹಳ ಅನಿವಾರ್ಯವಾಗಿದೆ. ಯಾರ ಹಂಗಿಗೂ ಒಳಗಾಗಬಾರದು ಎಂದು ನಿರ್ಭೀತಿಯಿಂದ ಬದುಕುವವರಿಗೆ ಇಂದು ನೆಮ್ಮದಿ ಇಲ್ಲವಾಗಿದೆ. ಕೈ ಕುಲುಕುತ್ತಾ ಸುಳ್ಳುಗಳನ್ನೇ ಹೇಳುತ್ತಲೇ ಇಂದು ಸಮಾಜ ಆತ್ಮವಂಚನೆಯಲ್ಲಿ ಬದುಕುವಂತಾಗಿದೆ. ಈಗ ಗ್ರಾಮ ಪಂಚಾಯಿತಿಯಿಂದ ಹಿಡಿದು ಪ್ರಧಾನಮಂತ್ರಿ ಕಚೇರಿಯವರೆಗೆ ಹೊಗಳು ಭಟ್ಟರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸುಳ್ಳನ್ನೇ ಸತ್ಯವೆಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ. ಕೃಷ್ಣೇಗೌಡರ ಎಲ್ಲಾ ಕೃತಿಗಳು ಹೃದಯಕ್ಕೆ ಸಂಬಂಧಿಸಿದ್ದಾಗಿವೆ. ಅವುಗಳ ಶೀರ್ಷಿಕೆ (ಹೊಳೆಯ ಮರಳು, ಹೊಂಗೆಯ ನೆರಳು, ಯಾಲಕ್ಕಿ ಗೊನೆ, ಅವರೆಯ ಸೊನೆ) ಯಿಂದ ಅದನ್ನು ಅರ್ಥಮಾಡಿಕೊಳ್ಳಬಹುದು ಎಂದು ಹೇಳಿರುವುದು ಶ್ಲಾಘನೀಯ. ಪ್ರೊ ಕೃಷ್ಣೇಗೌಡರು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ರಾಯಭಾರಿಗಳಲ್ಲಿ ಒಬ್ಬರಾಗಿದ್ದು ಅವರೊಬ್ಬ ಸತ್ವಪೂರ್ಣ ಬರಹಗಾರರು ಎಂದು ಪ್ರೊ.ನೀಲಗಿರಿ ತಳವಾರ ಅವರು ಹೇಳಿರುವುದು ನಿಜ ಸಂಗತಿ. ಅಮೇರಿಕಾದ ಅಕ್ಕ ಸಮ್ಮೇಳನದಲ್ಲಿ ಪ್ರೊ.ಕೃಷ್ಣೇಗೌಡರ ಹಾಸ್ಯಭರಿತ ವಿಷಯಾಧಾರಿತ ಕನ್ನಡದ ಮಾತುಗಳನ್ನು ಕೇಳಿ ಸಭಾಂಗಣದಲ್ಲಿದ್ದ ಹತ್ತು ಸಾವಿರ ಮಂದಿ ಎದ್ದು ನಿಂತು ಕರತಾಡನ ಮಾಡಿದ್ದು ನನ್ನ ಕಣ್ಣ ಮುಂದೆ ಇನ್ನೂ ಇದೆ ಎಂದು ಡಾ ನಾಗತಿಹಳ್ಳಿ ಚಂದ್ರಶೇಖರ್ ಅವರು ಹೇಳಿರುವುದು ಸ್ವಾಗತಾರ್ಹ. ಪ್ರತಿಯೊಬ್ಬ ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಸುಳ್ಳು ಹೇಳದೇ ಇರಲು ಸಾಧ್ಯವೇ ಇಲ್ಲ. ಸತ್ಯಹರಿಶ್ಚಂದ್ರ ಕೂಡ ಮಹಾರಾಜನಾಗಿದ್ದಾಗ ಒಬ್ಬ ಸುಳ್ಳುಗಾರ. ನಂತರ ಅವನು ಸತ್ಯವಂತನಾದ ಎಂದು ಹರಿಶ್ಚಂದ್ರ ಮಹಾಕಾವ್ಯದಲ್ಲಿ ಇದೆ ಎಂದು ಪ್ರೊ. ಕೃಷ್ಣೇಗೌಡ ಅವರು ತಮ್ಮ ನಾಲ್ಕು ಕೃತಿಗಳ ಅನಾವರಣ ಕಾರ್ಯಕ್ರಮದಲ್ಲಿ ಹೇಳಿರುವುದು ಪ್ರತಿಯೊಬ್ಬರೂ ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸಚಿವ ವಿ.ಸೋಮಣ್ಣನವರ ಕ್ರಮಕ್ಕೆ ಕನ್ನಡಿಗರ ಮೆಚ್ಚುಗೆ

ಮಾನ್ಯರೆ,



ವಿ.ಸೋಮಣ್ಣ

ರೈಲ್ವೆ ಇಲಾಖೆ ಸೇರಿದಂತೆ ಕೇಂದ್ರ ಸರ್ಕಾರದ ಎಲ್ಲ ಇಲಾಖೆಗಳ ಸಿಬ್ಬಂದಿ ನೇಮಕಾತಿ ಮತ್ತು ಸಿಬ್ಬಂದಿಗಾಗಿ ನಡೆಯುವ ಬಡ್ತಿ ಪರೀಕ್ಷೆಗಳನ್ನು ತ್ರಿಭಾಷಾ ಸೂತ್ರದ ಅನ್ವಯ ಕನ್ನಡದಲ್ಲೂ ಬರೆಯುವ ಅವಕಾಶವಿದೆ. ಆದರೆ ನೈರುತ್ಯ ರೈಲ್ವೆ ವಲಯದಲ್ಲಿ ವಿವಿಧ ಹುದ್ದೆಗಳ ಬಡ್ತಿಗಾಗಿ ನಡೆಯುತ್ತಿರುವ ಪರೀಕ್ಷೆಯಲ್ಲಿ ಕನ್ನಡವನ್ನು ಕೈ ಬಿಟ್ಟಿರುವುದನ್ನು ಗಮನಿಸಿದ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಗಳನ್ನು ತರಾಟೆಗೆ ತೆಗೆದು ಕೊಂಡಿದ್ದಾರೆ. ಇದು ಕಣ್ತಪ್ಪಿನಿಂದಾದ ಎಡವಟ್ಟು ಎಂದು ರೈಲ್ವೆ ಅಧಿಕಾರಿಗಳು ಜಾಣತನದಿಂದ ಉತ್ತರಿಸಿದ್ದಾರೆ. ಈಗ ಮರು ಪರೀಕ್ಷೆ ನಡೆಸಲು ಹಿರಿಯ ಅಧಿಕಾರಿಗಳು ಒಪ್ಪಿದ್ದಾರೆ. ಹಿರಿಯ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿಯೇ ಹೀಗೆ ಮಾಡಿರ ಬಹುದು. ಕನ್ನಡ ವಿರೋಧಿ ಅಧಿಕಾರಿಗಳ ವಿರುದ್ಧ ಸಚಿವರು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಸಚಿವರು ಈ ಲೋಪವನ್ನು ಈಗಲೇ ಪತ್ತೆ ಹಚ್ಚದೇ ಹೋಗಿದ್ದರೆ ರೈಲ್ವೇ ಇಲಾಖೆಯಲ್ಲಿ ಕನ್ನಡಿಗರು ಬಡ್ತಿ ಹೊಂದುವ ಅವಕಾಶ ಕಳೆದುಕೊಳ್ಳುತ್ತಿದ್ದರು. ಸಚಿವ ವಿ.ಸೋಮಣ್ಣನವರ ಈ ಕ್ರಮ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಮಸುಕಾಗುತ್ತಿರುವ ವೈವಾಹಿಕ ಸಂಬಂಧಗಳು

ಮಾನ್ಯರೆ,

ಸಮಾಜದಲ್ಲಿ ಕೌಟುಂಬಿಕ ಕಲಹಗಳಿಗೆ ಸಂಬಂಧಿಸಿದ ಅಪರಾಧಗಳು ದಿನೇ ದಿನೆ ಹೆಚ್ಚುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಇದರ ಜೊತೆ ಜೊತೆಗೆ ಅನೈತಿಕ ಸಂಬಂಧಗಳಿಂದ ಉಂಟಾಗುತ್ತಿರುವ ಅಪರಾಧಗಳು ಸಹ ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿವೆ. ಹೆಂಡತಿಯನ್ನು ಕೊಲ್ಲಲು ಗಂಡನೇ ಸುಪಾರಿ ನೀಡುವುದು, ಗಂಡನನ್ನು ಕೊಲ್ಲಿಸಲು ಹೆಂಡತಿಯೇ ಸಂಚು ರೂಪಿಸುವುದು, ಪರಸಂಗದ ವ್ಯಾಮೋಹದಿಂದ ಮಮಕಾರವನ್ನು ಮರೆತು ಹೆತ್ತ ಮಕ್ಕಳನ್ನೇ ಕೊಲ್ಲುವುದು ಇತ್ಯಾದಿ ಇತ್ಯಾದಿ ಪೈಶಾಚಿಕ ಕೃತ್ಯಗಳು ದಿನ ಬೆಳಗಾದರೆ ಎಲ್ಲಾದರೊಂದು ಕಡೆ ನಡೆಯುತ್ತಲೇ ಇರುತ್ತವೆ. ಗ್ರಾಮೀಣ ಪ್ರದೇಶಗಳು ಕೂಡ ಇದಕ್ಕೆ ಹೊರತಾಗಿಲ್ಲ. ವೈವಾಹಿಕ ಸಂಬಂಧಗಳು ಮಸುಕಾಗುತ್ತಿವೆ. ಮಾನವೀಯ ಸಂಬಂಧಗಳು ಅರ್ಥಹೀನವಾಗುತ್ತಿವೆ. ಇವಕ್ಕೆಲ್ಲಾ ಕೊನೆ ಎಂದು?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಇಷ್ಟಕ್ಕೂ ರಾಜಕೀಯ ಭಾಷಣಗಳೆಂದರೆ

ಮಾನ್ಯರೆ,

ದ್ವೇಷ ಭಾಷಣ ಮಸೂದೆ ಪಾಸ್ (ಸುದ್ದಿ)
ನಮ್ಮ ರಾಜಕೀಯ ನಾಯಕರುಗಳ
ರಾಜಕೀಯ ಭಾಷಣಗಳೆಂದರೆ.....
ಪ್ರತಿಪಕ್ಷಗಳನ್ನು ಹೀಯ್ಯಾಳಿಸುವುದು
ಅವರ ಹುಳುಕನ್ನು ಎತ್ತಿ ತೋರಿಸುವುದು
ಅವರನ್ನು ಹೋದಲ್ಲೆಲ್ಲಾ ಜರಿಯುತ್ತಾ,
ತಾನು ಶ್ರೇಷ್ಠ, ಇತರರು ಕನಿಷ್ಠ ಎಂದು
ಕೇಳುಗರ ಮುಂದೆ ಬಡ ಬಡಿಸುವುದು,
ನನ್ನ ಪಕ್ಷದ ಸಾಧನೆಗಳ ಮುಂದೆ
ಇತರೆ ಪಕ್ಷಗಳ ಕೆಲಸಗಳು ಏನೇನು ಇಲ್ಲ
ಎಂದು ಜನತೆಯನ್ನ ನಂಬಿಸುವುದು...
ಇವೆಲ್ಲಾ ವಿವಿಧ ರಾಜಕೀಯ ನಾಯಕರ ಭಾಷಣಗಳ ಕಲೆ!
ಇದನ್ನು ಹೊರತಾಗಿ ಭಾಷಣ ಮಾಡಿದರೆ,
ಕೇಳುವರು ಯಾರು? ನೋಡುವವರು ಯಾರು?
ಎಂಬುದೇ ಯಕ್ಷಪ್ರಶ್ನೆಯಾಗಿದೆ!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಹೀಗೊಂದು ವ್ಯಥೆಯ ಕತೆ

ಇದು, ಒಂದು ತಲೆಮಾರು ಹಿಂದಿನಕತೆ. ಆಗ ಸತ್ಯ, ಧರ್ಮ, ಕರುಣೆ, ನ್ಯಾಯ, ನಿಷ್ಠೆ ಮುಂತಾದ ಮೌಲ್ಯಗಳು ಇನ್ನೂ ಸವಕಲು ನಾಣ್ಯಗಳಾಗಿರದಿದ್ದ ಕಾಲ. ಎಂದಿನಂತೆ ಮಧ್ಯಮ ಕುಟುಂಬಗಳಿಂದ ಇವುಗಳು ಹೆಚ್ಚಾಗಿ ಪಾಲಿಸಲ್ಪಡುತ್ತಿದ್ದುವು. ಮನೆತನದ ಮರ್ಯಾದೆಗೆ ಅಗ್ರ ಸ್ಥಾನ. ಹೀಗೆ, ಗೌರವದ ಬದುಕಿಗೆ ಬಡತನದ ಬೇಗೆಯಲ್ಲೂ ಅತೀ ಬೆಲೆಯನ್ನು ಕೊಡುತ್ತಿದ್ದ ಒಂದು ಬಡ ಕುಟುಂಬ. ಬಡ ಎಂದ ಮೇಲೆ ಕೇಳಬೇಕೆ, ಏಳೆಂಟು ಜನ ಮಕ್ಕಳು. ತಂದೆ ಎನಿಸಿಕೊಂಡವನು ಕೇವಲ ಮನೆ ಪಾಠಗಳನ್ನು ಹೇಳಿ ಸಂಪಾದಿಸುತ್ತಿದ್ದ ವ್ಯಕ್ತಿ. ಅವನ ಸಂಪಾದನೆಯನ್ನು ಜಾಣತನದಿಂದ ವ್ಯಯಿಸಿ, ಎರಡೂ ಕೊನೆಗಳನ್ನು ಮುಟ್ಟಿಸಲು ಯತ್ನಿಸುವ ಪತ್ನಿ. ಮೊದಲು ಹೊಟ್ಟೆಯ ಚಿಂತೆ. ನಂತರ ಮಕ್ಕಳ ಓದು, ಬಟ್ಟೆ–ಬರೆ ಇತ್ಯಾದಿಗಳು. ಒಂದು ವೇಳೆ ತಂದೆಗೆ ಆ ತಿಂಗಳು ಯಾವುದಾದರೂ ಕಾರಣದಿಂದ ಪಾಠದ ಮನೆಗಳು ಕಡಿಮೆಯಾದರೆ, ಆ ಕುಟುಂಬದ ಗೋಳು ಹೇಳತೀರದು. ಅನೇಕ ಸಲ ಹಾಗೆ ಆಗಿದ್ದುದುಂಟು. ಎಷ್ಟೇ ಬಡತನ ಇದ್ದರೂ ಅದು ಕಟ್ಟುನಿಟ್ಟಾಗಿ ಮನೆಯ ಒಳಗೇ ಇರುವಂಥದು. ಪಕ್ಕದ ಮನೆಗೂ ಅದರ ಸುಳಿವು ಗೊತ್ತಾಗದಿರುವಂತೆ ತಾಯಿ ನೋಡಿಕೊಳ್ಳುತ್ತಿದ್ದಳು. ಮನೆಯ ಮರ್ಯಾದೆಯನ್ನು, ಗೌರವನ್ನು ಕಾಪಾಡಿಕೊಳ್ಳುವುದಕಿಂತ ಹೆಚ್ಚಿನದು ಏನೂ ಇಲ್ಲ ಎಂಬುದನ್ನು ತಾಯಿ ಮಕ್ಕಳ ತಲೆಗೆ ತುಂಬಿದ್ದಳು. ಎಷ್ಟೇ ಬಡತನ ಇದ್ದರೂ ಅದು ಹೊಸ್ತಿಲ ಒಳಗೇ ಇರತಕ್ಕದ್ದು ಎಂಬ ಬೋಧನೆ ಎಲ್ಲ ಮಕ್ಕಳಿಗೂ ಆಗಿರುತ್ತಿತ್ತು. ಹಬ್ಬ ಹರಿದಿನಗಳಲ್ಲಿ ಪಾಯಸದ ಊಟ ಎನ್ನುವುದು ಆ ಕುಟುಂಬಕ್ಕೆ ಕನಸಿನ ಮಾತೇ ಸರಿ. ಆಟ ಆಡಲು ಹೊರಗೆ ಹೋದ ಮಕ್ಕಳನ್ನು ಅಕ್ಕಪಕ್ಕದವರು ಮಾತನಾಡಿಸಿ, ನಿಮ್ಮ ಮನೆಯಲ್ಲಿ ಏನು ಅಡಿಗೆ ಮಾಡಿದ್ದರು ಎಂದು ಕೇಳಿದರೆ, ಅವು, ತೊವ್ವೆ, ಪಾಯಸ, ಚಿತ್ರಾನ್ನ, ಮಜ್ಜಿಗೆಹುಳಿ ಎಂದು ಹೇಳುತ್ತಾ ಅಲ್ಲಿಂದ ಓಡಿ ಹೋಗಿಬಿಡುವಷ್ಟು ಅವರಿಗೆ ತಯಾರಿ ಆಗಿರುತ್ತಿತ್ತು.

ಆ ತಾಯಿಯ ಸಹೋದರಿ ಒಬ್ಬಾಕೆ ಪಕ್ಕದ ಹಳ್ಳಿಯಲ್ಲಿ ಇರುತ್ತಿದ್ದರು. ಬಡತನದ ಬೇಗೆ ತೀರಾ ಹೆಚ್ಚಾದಾಗ ಈಕೆ ಅಲ್ಲಿ ಹೋಗಿ ಸುಮ್ಮನೇ ಕುಳಿತುಕೊಳ್ಳುತ್ತಿದ್ದಳು. ಬಾಯಿಬಿಟ್ಟು ಏನನ್ನೂ ಹೇಳದಿದ್ದರೂ ಆ ಅಕ್ಕನಿಗೆ ಅರ್ಥವಾಗಿ, ಏನಾದರೂ ಪದಾರ್ಥಗಳನ್ನು ತಂಗಿಗೆ ಕೊಟ್ಟು ಮಕ್ಕಳಿಗೆ ಕೊಡು ಎಂದು ಹೇಳಿ ಕಳುಹಿಸುತ್ತಿದ್ದಳು. ಹಾಗೆ ತಂದ ಒಂದು ಕುಂಬಳಕಾಯಿಯಲ್ಲೋ ಅಥವಾ ಕಡಲೇಪುರಿಯಲ್ಲೋ ಒಪ್ಪತ್ತು ಊಟವನ್ನು ಮುಗಿಸಿದ ದಿನಗಳೂ ಇದ್ದುವು. ಬಡತನಕ್ಕೆ ಹಸಿವು ಹೆಚ್ಚು ಎನ್ನುತ್ತಾರೆ. ಆಕೆಯ ಹಿರಿಯ ಮಗನಿಗೆ ತೋಳದಂಥ ಹಸಿವು. ಅಮ್ಮ ಕೊಡುತ್ತಿದ್ದ ಅಲ್ಪಸ್ವಲ್ಪ ಊಟ ಅವನಿಗೆ ಏನೇನೂ ಸಾಕಾಗುತ್ತಿರಲಿಲ್ಲ. ಮನೆಯಲ್ಲಿ ಹಟ ಮಾಡಿದರೂ ಏನೂ ಸಿಗುವುತ್ತಿಲ್ಲವೆಂಬುದು ತಿಳಿದಿದ್ದ ಸಂಗತಿ. ಮೊದಮೊದಲು ಅಮ್ಮನಿಗೆ ಗೊತ್ತಾಗದಂತೆ ಮನೆಯ ಹತ್ತಿರದಲ್ಲೇ ಇದ್ದ ಛತ್ರದಲ್ಲಿ ಯಾವುದಾದರೂ ಮದುವೆ ಮುಂಜಿ ನಡೆಯುತ್ತಿದ್ದರೆ, ಮೆಲ್ಲನೆ ಹೋಗಿ ಅಲ್ಲಿ ಉಂಡು ಬಂದುಬಿಡುತ್ತಿದ್ದ. ಅದು ನಿತ್ಯವೂ ಆಗುತ್ತಿರಲಿಲ್ಲವಲ್ಲ! ಆಗ ಅವನ ಪಾಡು ಹೇಳತೀರದು. ಅವನ ಹಸಿವಿನ ಹಾಹಾಕಾರ ಹೆತ್ತ ಕರುಳಿಗೆ ಗೊತ್ತಾಗುತ್ತಿತ್ತು. ಆದರೆ ಇದ್ದುದರಲ್ಲೇ ಆಕೆ ಏಳೆಂಟು ಹೊಟ್ಟೆಗಳನ್ನೂ ತಣಿಸಬೇಕಿತ್ತಲ್ಲ



> “ಒಮ್ಮೆ ಹೋಟೆಲಿನ ರುಚಿ ಕಂಡ ಅವನಿಗೆ ಅದರ ಸೆಳೆತ, ಕೊನೆಗೆ ಹೊಟ್ಟೆ ತುಂಬ ಸಿಗುತ್ತಿದ್ದ ತಿನಿಸುಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ನಾಕು ದಿನ ತೆಪ್ಪಗೆ ಇದ್ದ ಅವನು ಮತ್ತೆ ಮತ್ತೆ ಮನೆಬಿಟ್ಟು ಹೋಗುವುದನ್ನು ರೂಢಿಸಿಕೊಂಡ. ಅವನು ಹೋಗುವುದು, ತಾಯಿ ಅವನನ್ನು ಪತ್ತೆಹಚ್ಚಿ ಹಿಂದೆ ಕರೆತರುವುದು ಮಾಮೂಲಾಯಿತು. ತಾಯಿಗೆ ಒಂದೇ ಒಂದು ಆಸೆ ಇದ್ದಿತು. ತನ್ನ ಮಕ್ಕಳನ್ನು ಪದವೀಧರರನ್ನಾಗಿ ಮಾಡಬೇಕೆಂದು. ಅವಳ ಸುಪ್ತ ಮನಸ್ಸಿನಲ್ಲಿ ಇದು ಬೇರೂರಿತ್ತು. ಅದಕ್ಕಾಗಿ ಎಂತಹ ತ್ಯಾಗಕ್ಕೂ ಅವಳು ಸಿದ್ಧಳಿದ್ದಳು.

ಅವಳ ಅಸಹಾಯಕತೆ ಅವಳಿಗೇ ಗೊತ್ತು. ಗಂಡನಿಗೆ ಇದನ್ನು ಹೇಳಿ ಏನೂ ಪ್ರಯೋಜನ ಇಲ್ಲವೆಂದು ಅವಳಿಗೆ ಗೊತ್ತಿತ್ತು. ಸಿಟ್ಟು ತಲೆಗೇರಿಸಿಕೊಂಡು ಮಕ್ಕಳನ್ನು ಚಚ್ಚುವುದೊಂದೇ ಆತನಿಗೆ ಗೊತ್ತಿದ್ದ ಉಪಶಮನ. ಆ ಹಿರಿ ಮಗನಿಗೆ ಬರುಬರುತ್ತಾ ಅಪ್ಪನ ಕೈಯ್ಯಲ್ಲಿ ಹೊಡೆಸಿಕೊಳ್ಳುವುದು, ಹಸಿವನ್ನು ತಡೆದುಕೊಳ್ಳುವುದು ಎರಡೂ ಆಗದ ಕೆಲಸಗಳಾಗಿ ತೋರಹತ್ತಿದುವು. ಹದಿವಯಸ್ಸು. ಹುಂಬ ಧೈರ್ಯ. ಒಂದು ದಿನ ಮನೆಬಿಟ್ಟು ಓಡಿಯೇ ಹೋದ. ಅವನು ಎಲ್ಲಿ ಹೋಗಿದ್ದಾನೆ ಎಂಬುದನ್ನು ಅದು ಹೇಗೆ ಪತ್ತೆ ಹಚ್ಚಿತೋ ಆ ಮಾತೃ ಹೃದಯ, ಗಂಡ ಇಂತಹ ಕೆಲಸಗಳಿಗೆ ನೆರವಾಗನೆಂದು ತನ್ನ ಭಾವನನ್ನು ಕರೆದುಕೊಂಡು ಹೋಗಿ ಒಂದು ಹೋಟೆಲಿನಲ್ಲಿ ಸಪ್ಲೆಯರ್ ಕೆಲಸಕ್ಕೆ ಸೇರಿದ್ದ ಮಗನನ್ನು ಹಿಡಿದು, ವಾಪಸ್ ಕರೆತಂದಳು. ಮನೆಯ ಮರ್ಯಾದೆಯ ಬಗ್ಗೆ ಅವನಿಗೆ ಮತ್ತೆ ಬೋಧನೆ ಆಯಿತು.

ಒಮ್ಮೆ ಹೋಟೆಲಿನ ರುಚಿ ಕಂಡ ಅವನಿಗೆ ಅದರ ಸೆಳೆತ, ಕೊನೆಗೆ ಹೊಟ್ಟೆ ತುಂಬ ಸಿಗುತ್ತಿದ್ದ ತಿನಿಸುಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ನಾಕು ದಿನ ತೆಪ್ಪಗೆ ಇದ್ದ ಅವನು ಮತ್ತೆ ಮತ್ತೆ ಮನೆಬಿಟ್ಟು ಹೋಗುವುದನ್ನು ರೂಢಿಸಿಕೊಂಡ. ಅವನು ಹೋಗುವುದು, ತಾಯಿ ಅವನನ್ನು ಪತ್ತೆಹಚ್ಚಿ ಹಿಂದೆ ಕರೆತರುವುದು ಮಾಮೂಲಾಯಿತು. ತಾಯಿಗೆ ಒಂದೇ ಒಂದು ಆಸೆ ಇದ್ದಿತು. ತನ್ನ ಮಕ್ಕಳನ್ನು ಪದವೀಧರರನ್ನಾಗಿ ಮಾಡಬೇಕೆಂದು. ಅವಳ ಸುಪ್ತ ಮನಸ್ಸಿನಲ್ಲಿ ಇದು ಬೇರೂರಿತ್ತು. ಅದಕ್ಕಾಗಿ ಎಂತಹ ತ್ಯಾಗಕ್ಕೂ ಅವಳು ಸಿದ್ಧಳಿದ್ದಳು.

ಆದರೆ ಇಂಗ್ಲೀಷಿನ ಗಾದೆಯಂತೆ ಕುದುರೆಯನ್ನು ನೀರಿನ ಬಳಿ ಕರೆದೊಯ್ಯಬಹುದು, ಆದರೆ ನೀರು ಕುಡಿಯುವಂತೆ ಮಾಡಲಾಗುವುದಿಲ್ಲವಲ್ಲ? ಅದನ್ನು ಕುದುರೆಯೇ ಮಾಡಬೇಕು. ಆ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಹುಟ್ಟಿ, ತಾವೇ ಓದಬೇಕೇ ಹೊರತು, ಅದನ್ನು ಬೇರೆಯವರು ಅವರ ತಲೆಗೆ ಬಲವಂತದಿಂದ ತುಂಬಲು ಸಾಧ್ಯವೇ ತಾಯಿಯ ಮನೋಭೀಷ್ಟವನ್ನು ಅರಿತುಕೊಂಡು ಅದಕ್ಕೆ ಸ್ಪಂದಿಸಿದವರು ಹೆಣ್ಣುಮಕ್ಕಳು ಮಾತ್ರ. ಸರ್ಕಾರಿ ಶಾಲೆಗಳಲ್ಲಿ ಓದು ಎಂಬುದು ಆಗ ತೀರಾ ಕಡಿಮೆ ಖರ್ಚಿನಲ್ಲಿ ಆಗುತ್ತಿತ್ತು. ಹಿರಿಯ ಮಗಳೊಬ್ಬಳನ್ನು ಉಳಿದು, ಮಿಕ್ಕ ಹೆಣ್ಣು ಮಕ್ಕಳು ಓದಿನಲ್ಲಿ ಚುರುಕಾಗಿದ್ದರು. ತಾಯಿಗೆ ಅದೇ ಸಮಾಧಾನ.

ಹಿರಿಯ ಮಗ ಮನೆಯಲ್ಲಿದ್ದರೆ ತಾನೇ ಓದುವುದು, ಶಾಲೆಗೆ ಹೋಗುವುದು ಹಿರಿಮಗನದು ಈ ಕತೆಯಾದರೆ ಹಿರಿಯ ಮಗಳು ವಯಸ್ಸಿಗೆ ಬರತೊಡಗಿದಂತೆ ಅವಳ ಮನಸ್ಸಿನಲ್ಲಿ ಸಹಜವಾಗಿ ರಂಗುರಂಗಿನ ಕನಸುಗಳು ಮೂಡತೊಡಗಿದುವು. ಹಾಗೂ ಹೀಗೂ ಎಸ್ಸೆಸ್ಸೆಲ್ಸಿಯವರೆಗೆ ಬಂದು, ಅದನ್ನು ದಾಟಲು ಸಾಧ್ಯವೇ ಇಲ್ಲ ಎಂಬಂತೆ ಅಲ್ಲಿ ಪ್ರತಿಷ್ಠಿತಳಾದಳು ಅವಳು. ತನ್ನ ಮುಂದಿನ ಬದುಕು ಸುಂದರವಾಗಿ ಇರಬೇಕೆಂಬ ಬಯಕೆ ಅವಳದು. ತನ್ನ ತಾಯಿ ಮನೆಯಂತೆ ಅಲ್ಲಿ ಬಡತನ ಇರಕೂಡದು, ಉಡಲು, ಧರಿಸಲು ಬೇಕಾದಷ್ಟು ಇರಬೇಕು. ಎಲ್ಲಕಿಂತ ಹೆಚ್ಚಾಗಿ ಸುಂದರನಾದ ಗಂಡ ತನ್ನವನಾಗಿರಬೇಕು ಇತ್ಯಾದಿ ಕನಸುಗಳನ್ನು ಕಾಣುತ್ತಾ ಕೂರುವುದೆಂದರೆ, ಅವಳಿಗೆ ಬಲು ಇಷ್ಟ. ಮನೆಯಲ್ಲಿ ತನ್ನ ಮದುವೆಯ ಬಗ್ಗೆ ಯಾರೂ ತಲೆ ಕೆಡಸಿಕೊಂಡಂತೆ ಕಾಣಲಿಲ್ಲ. ಅಪ್ಪನ ದುಡಿಮೆ ಹೊಟ್ಟೆ ಬಟ್ಟೆಗೇ ಸಾಲುತ್ತಿಲ್ಲ, ಇನ್ನು ಇವರು ನನ್ನ ಮದುವೆಯನ್ನು ಹೇಗೆ ಮಾಡುತ್ತಾರೆ ಎಂಬುದು ಅವಳನ್ನು ಕಾಡತೊಡಗಿತು. ತನ್ನ ಗೆಳತಿಯರನ್ನು ನೋಡಿ ತನ್ನನ್ನು ಅವರೊಡನೆ ಹೋಲಿಸಿಕೊಳ್ಳುವುದು ಅವಳಿಗೆ ಮಾಮೂಲಾಯಿತು. ಅವರಿಗಿಂತ ತಾನು ಚಂದವಿದ್ದೇನೆ ಎಂಬುದನ್ನೂ ಕನ್ನಡಿ ಸಾರಿ ಹೇಳುತ್ತಿತ್ತು. ಮನೆಯ ಬಡತನ ಅವಳನ್ನು ಕಂಗಾಲಾಗಿಸುತ್ತಿತ್ತು.

ಅವಳ ಗೆಳತಿಯರಲ್ಲಿ ಒಬ್ಬಳು ಗುಡ್ಡಿ ಎಂಬುವಳು ಅವಳಿಗೆ ತುಂಬಾ ಹತ್ತಿರದವಳಾದಳು. ಅವಳ ಅಣ್ಣನೊಬ್ಬ ವಿಜಯ್ ಸಿಂಗ್ ಎನ್ನುವವನು ಅವಳಿಗೆ ತುಸು ಹೆಚ್ಚಿನ ಸಹಾನುಭೂತಿಯನ್ನೇ ತೋರುತ್ತಿದ್ದ. ಅವರ ಪರಿವಾರವು ಅವಳಿಗೆ ಹತ್ತಿರವಾದಂತೆ ಅವರು ಹಿಂದೂಗಳಲ್ಲ ಎಂಬುದು ಗೊತ್ತಾದರೂ ಅವರ ಸಖ್ಯವು ಅವಳಿಗೆ ಆಪ್ಯಾಯ ಎನಿಸಿತು. ಬಗೆಬಗೆಯ ಚೂಡಿದಾರ್ ಗಳನ್ನು ಧರಿಸುತ್ತಿದ್ದ ಅವರು ಅವಳ ಕಣ್ಣಿಗೆ ಭವ್ಯವಾಗಿ ಕಾಣಿಸುತ್ತಿದ್ದರು. ಒಂದುದಿನ ಹಿರಿ ಮಗಳು ಮನೆಗೇ ಬಾರದಿದ್ದಾಗ ತಾಯಿ ಹೌಹಾರಿದಳು. ಅಕ್ಕಪಕ್ಕದವರಿಗೆ, ನೆಂಟರಿಷ್ಟರಿಗೆ ಏನೆಂದು ಉತ್ತರಿಸುವುದು ಎಂದು ಪರದಾಡಿದಳು. ಮಗನನ್ನು ಹಿಂದಿರುಗಿ ತಂದು ತಂದು ಅಭ್ಯಾಸವಿದ್ದ ಅವಳಿಗೆ ಮಗಳ ಜಾಡು ಹಿಡಿಯುವುದು ಅಂತಹ ಕಷ್ಟವೇನಾಗಲಿಲ್ಲ. ಆ ವಿಜಯ್ ಸಿಂಗ್ ನಾಮಾಂಕಿತ ಅನ್ಯ ಜಾತಿಯವನೊಂದಿಗೆ ಮಗಳು ಬೊಂಬಾಯಿಗೆ ಹೋಗಿರುವ ಸುದ್ದಿಯನ್ನು ಪತ್ತೆ ಹಚ್ಚಿದ ಅವಳು ನೇರವಾಗಿ ಅಲ್ಲಿಗೇ ಪಯಣಿಸಿದಳು. ಯಾವುದೇ ಕಾರಣಕ್ಕೂ ಮಗಳು ಜಾತಿಭ್ರಷ್ಟಳಾಗುವುದನ್ನು, ಅವಳ ಬಾಳು ಹಾಳಾಗುವುದನ್ನು, ಸಹಿಸದಾಯಿತು ಆ ಮಾತೃಹೃದಯ. ಕೊನೆಗೆ, ಮಗಳು ಮಾರಾಟವಾಗಿದ್ದಾಳೆ ಎಂಬ ವಿಷಯ ತಿಳಿದು ಅಲ್ಲಿಯೇ ಕುಸಿದುಬಿದ್ದ ಅವಳನ್ನು ಸಂತೈಸಲು ಯಾರೂ ಇರಲಿಲ್ಲ.

ಫುಟ್‌ಪಾತ್‌ಗಳಲ್ಲಿ ದಿಢೀರ್ ಪ್ರತ್ಯಕ್ಷವಾಗುತ್ತಿರುವ ಅಂಗಡಿಗಳು!

● ಸದ್ಯ ವಾಟರ್ ವರ್ಕ್ಸ್ ಎದುರು ತಲೆಯೆತ್ತಿದ್ದ ಅಂಗಡಿ ತೆರವು ● ಹಲವೆಡೆ ನಿಯಮ ಧಿಕ್ಕರಿಸಿ ವ್ಯಾಪಾರ-ವಹಿವಾಟು

ಮೈಸೂರು, ಡಿ.20– ಮೈಸೂರು ನಗರದಲ್ಲಿ ಫುಟ್‌ಪಾತ್ ಅತಿಕ್ರಮಣಕ್ಕೆ ಕಡಿವಾಣ ಬಿದ್ದಿಲ್ಲ. ಈ ನಡುವೆ ಪ್ರಮುಖ ರಸ್ತೆಗಳಲ್ಲೇ ದಿಢೀರ್ ಅಂಗಡಿಗಳು ಪ್ರತ್ಯಕ್ಷವಾಗುತ್ತಿವೆ. ಆದರೆ, ಸದಾ ವಾಹನ ದಟ್ಟಣೆ ಇರುವ ಕೆಆರ್‌ಎಸ್ ರಸ್ತೆ ಬದಿಯಲ್ಲಿ ದಿಢೀರ್ ಪ್ರತ್ಯಕ್ಷವಾದ ಅಂಗಡಿಯನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸುವ ಮೂಲಕ ಸಾರ್ವಜನಿಕರ ಆಕ್ರೋಶದಿಂದ ಪಾರಾಗಿದ್ದಾರೆ.

ನಗರದ ಕೆಆರ್‌ಎಸ್ ರಸ್ತೆ, ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ಸಿಎಫ್‌ಟಿಆರ್‌ಐ ಕಡೆಗೆ ದಿಢೀರ್ ತಲೆ ಎತ್ತಿದ್ದ ಎರಡು ಅಂಗಡಿಯನ್ನು ಪಾಲಿಕೆ ವಲಯ ಕಚೇರಿ 6ರ ಅಧಿಕಾರಿಗಳು ಶುಕ್ರವಾರ ಬೆಳಗ್ಗೆ ತೆರವುಗೊಳಿಸಿದ್ದಾರೆ. ಪಾಲಿಕೆ ಆಯುಕ್ತರ ಆದೇಶದ ಮೇರೆಗೆ ಈ ಕಾರ್ಯಾಚರಣೆ ನಡೆಸಲಾಗಿದೆ ಎಂಬ ಮಾಹಿತಿ ಹೊರತಾಗಿ ಅಲ್ಲಿ ಯಾರು, ಯಾವಾಗ ಅಂಗಡಿ ಸ್ಥಾಪಿಸಿದ್ದರು ಎಂಬುದು ಯಾರಿಗೂ ತಿಳಿದಿಲ್ಲ. ಈ ಬಗ್ಗೆ ಪ್ರತಿಕ್ರಿಯೆಗೆ ಪಾಲಿಕೆ ಆಯುಕ್ತರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.



ಮೈಸೂರಿನ ಕೆಆರ್‌ಎಸ್ ರಸ್ತೆ ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ತಲೆಯೆತ್ತಿದ್ದ ಅಂಗಡಿ.

ಸಾರ್ವಜನಿಕರ ಆಕ್ರೋಶ: ಮೈಸೂರು, ಸ್ವಚ್ಛ–ಸುಂದರ ನಗರ ಎನ್ನುವುದು ಕೇಳುವುದಕ್ಕಷ್ಟೇ ಹಿತವಾಗಿದೆ. ಅಂತಹ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆ ಯಾವುದೇ ಗಂಭೀರ ಪ್ರಯತ್ನಕ್ಕೆ ಮುಂದಾಗಿಲ್ಲ. ನಗರದ ಬಹುತೇಕ ಕಡೆ ಫುಟ್‌ಪಾತ್ ಅತಿಕ್ರಮಿಸಿಕೊಳ್ಳಲಾಗಿದೆ. ಗಾಡಿಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡುವುದರ ಜೊತೆಗೆ ಮಳಿಗೆಯವರೂ ವಸ್ತುಗಳನ್ನು ಫುಟ್‌ಪಾತ್‌ನಲ್ಲಿ ಜೋಡಿಸುತ್ತಾರೆ. ಪರಿಣಾಮ ಫುಟ್‌ಪಾತ್‌ನಲ್ಲಿ ಜಾಗವಿಲ್ಲದೆ ಪಾದಚಾರಿಗಳು ರಸ್ತೆಗಿಳಿದು ಓಡಾಡುವ ಅಪಾಯಕರ ಪರಿಸ್ಥಿತಿ ನಿರ್ಮಾಣವಾಗಿದೆ. ಫಾಸ್ಟ್‌ಫುಡ್‌ಗಳ ಸಂಖ್ಯೆ ದಿನೇ–ದಿನೆ ಹೆಚ್ಚುತ್ತಲೇ ಇದೆ. ಸಿಕ್ಕ ಸಿಕ್ಕ ಜಾಗದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ನಗರದಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ ಎಂಬಂತಾಗಿದೆ ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿರ್ಲಕ್ಷ್ಯದ ಪರಿಣಾಮ: ನಗರದ ಕೆಆರ್‌ಎಸ್ ರಸ್ತೆಬದಿಯಲ್ಲಿ ಅಂಗಡಿ ನಿರ್ಮಿಸಿದ್ದು, ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದ ಪರಿಣಾಮವಷ್ಟೇ. ಫುಟ್‌ಪಾತ್ ಅತಿಕ್ರಮಣದ ಬಗ್ಗೆ ಯಾವುದೇ ಕಟ್ಟುನಿಟ್ಟಿನ ಕ್ರಮ ವಹಿಸುವುದಿಲ್ಲ ಎಂಬ ಧೈರ್ಯದಿಂದಲೇ ಅಲ್ಲಿ ಅಂಗಡಿ ಹಾಕಿದ್ದರು. ನಂತರವಾದರೂ ಪಾಲಿಕೆ ಅಧಿಕಾರಿಗಳು ಕ್ರಮ ವಹಿಸಿಲ್ಲ ಎಂದಾದರೆ ವ್ಯವಸ್ಥೆ ಬಗ್ಗೆ ವಿಶ್ವಾಸವಿಡುವುದು ಹೇಗೆ?. ಕೆಆರ್‌ಎಸ್ ರಸ್ತೆಯಲ್ಲಿ ಸದಾ ವಾಹನ ದಟ್ಟಣೆ ಇರುತ್ತದೆ. ಕೆಆರ್‌ಎಸ್, ಪಾಂಡವಪುರ, ಹೆಬ್ಬಾಳ್ ಕೈಗಾರಿಕೆ ಪ್ರದೇಶ, ಹೆಬ್ಬಾಳ್, ಕುಂಬಾರಕೊಪ್ಪಲು, ಇಲವಾಲ ಸೇರಿದಂತೆ ವಿವಿಧೆಡೆಗೆ ಸಂಚರಿಸುವ ಸಾರಿಗೆ ಸಂಸ್ಥೆ ಬಸ್‌ಗಳು, ವಾಣಿವಿಲಾಸ ವಾಟರ್ ವರ್ಕ್ಸ್‌ನ ನೀರಿನ ವಾಹನಗಳು ಸೇರಿದಂತೆ ಭಾರೀ ವಾಹನಗಳ ಓಡಾಟವೂ ಹೆಚ್ಚಾಗಿದೆ. ಈ ರಸ್ತೆ ಬದಿಯಲ್ಲಿ ಅಂಗಡಿ ನಿರ್ಮಿಸಿದರೆ ಏನಾಗಬಹುದು ಎಂಬ ಅರಿವಿಲ್ಲವೇ? ಎಂದು ಜನ ಪ್ರಶ್ನಿಸಿದ್ದಾರೆ.

ಅಪಘಾತಕ್ಕೆ ಆಸ್ಪದ: ವಾಣಿವಿಲಾಸ ವಾಟರ್ ವರ್ಕ್ಸ್ ಬಳಿಯ ತಿರುವಿನಲ್ಲೇ ಅಂಗಡಿ ನಿರ್ಮಿಸಿದ್ದರು. ಒಂದು ವೇಳೆ ಅದನ್ನು ತೆರವುಗೊಳಿಸದೆ ವ್ಯಾಪಾರಕ್ಕೆ ಆಸ್ಪದ ನೀಡಿದ್ದರೆ ಅಪಘಾತಗಳು ಸಂಭವಿಸುವ ಸಾಧ್ಯತೆ ಹೆಚ್ಚಿತ್ತು. ಗ್ರಾಹಕರು ತಮ್ಮ ವಾಹನವನ್ನು ರಸ್ತೆ ಬದಿಯಲ್ಲಿ ನಿಲ್ಲಿಸುತ್ತಿದ್ದರು. ಆ ವೇಳೆ ಭಾರೀ ವಾಹನಗಳು ಡಿಕ್ಕಿ ಹೊಡೆದು ಸಾವು–ನೋವು ಸಂಭವಿಸುತ್ತಿತ್ತು. ಹಾಗಾಗಿದ್ದರೆ ಯಾರು ಹೊಣೆಗಾರರಾಗುತ್ತಿದ್ದರು. ಅನಾಹುತ ಸಂಭವಿಸಿದ ನಂತರ ಒಬ್ಬರತ್ತ ಒಬ್ಬರು ಬೊಟ್ಟು ಮಾಡುವುದಕ್ಕಿಂತ ಸ್ವಲ್ಪ ಮುಂಜಾಗ್ರತೆ ವಹಿಸುವುದು ಒಳ್ಳೆಯದಲ್ಲವೇ. ನಾಗರಿಕರ ಹಿತ ಕಾಯುವುದು ವ್ಯವಸ್ಥೆಯ ಆದ್ಯತೆ ಅಲ್ಲವೇ?. ಅಧಿಕಾರಿಗಳ ನಿರ್ಲಕ್ಷ್ಯತೆ ಹೀಗೆ ಮುಂದುವರೆದರೆ ಸಮಸ್ಯೆ ಸರಿಪಡಿಸಲಾಗದ ಮಟ್ಟಕ್ಕೆ ಕಗ್ಗಂಟಾಗುತ್ತದೆ ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ.

ಸರ್ಕಾರಿ ನೌಕರರು ಹರಿದ ಜೀನ್ಸ್, ಸ್ಲೀವ್‌ಲೆಸ್, ಬಿಗಿ ಬಟ್ಟೆ ಧರಿಸುವಂತಿಲ್ಲ!

ಸಭ್ಯತೆ ಕಾಪಾಡಿ, ಇಲ್ಲವೇ ಕ್ರಮ ಎದುರಿಸಿ; ಸರ್ಕಾರ ಎಚ್ಚರಿಕೆ

ಬೆಂಗಳೂರು, ಡಿ.20– ರಾಜ್ಯ ಸರ್ಕಾರಿ ನೌಕರರು ಕಚೇರಿಗೆ ಬರುವಾಗ ಯೋಗ್ಯ ಸೂಕ್ತ ಬಟ್ಟೆ ಧರಿಸಿಕೊಂಡು ಬರದಿದ್ದರೆ ತಕ್ಕ ಕ್ರಮ ಎದುರಿಸಬೇಕಾಗುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಸಿಬ್ಬಂದಿ ಆಡಳಿತ ಮತ್ತು ಸುಧಾರಣಾ ಇಲಾಖೆಯು ವಿವಿಧ ಇಲಾಖೆಗಳ ಮುಖ್ಯಸ್ಥರು, ಉಪ ಆಯುಕ್ತರು, ಮುಖ್ಯಮಂತ್ರಿ ಕಚೇರಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇತರರಿಗೆ ಈ ಸಂದೇಶವನ್ನು ಕಳುಹಿಸಿದ್ದು, ಮಾಡಬೇಕಾದ ಮತ್ತು ಮಾಡಬಾರದ ಕೆಲಸಗಳನ್ನು ಪಟ್ಟಿ ಮಾಡಿದೆ.

ರಾಜ್ಯ ಸರ್ಕಾರಿ ಕಚೇರಿಗಳಲ್ಲಿ ಕೆಲವು ನೌಕರರು ಅಸಭ್ಯವಾಗಿ ಬಟ್ಟೆ ಧರಿಸುತ್ತಾರೆ ಎಂದು ಸಾರ್ವಜನಿಕರು ಮತ್ತು ಕೆಲವು ಸಂಸ್ಥೆಗಳಿಂದ ಡಿಪಿಎಆರ್‌ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ನೌಕರರಿಗೆ ಯೋಗ್ಯವಾದ ಬಟ್ಟೆಗಳನ್ನು ಧರಿಸಲು ಹೇಳಲಾಗಿದ್ದರೂ, ಅನೇಕರು ಸೂಚನೆಗಳನ್ನು ಪಾಲಿಸುತ್ತಿಲ್ಲ. ನಾವು ಅದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ಸುತ್ತೋಲೆ ತಿಳಿಸಿದೆ.



ಸರ್ಕಾರಿ ನೌಕರರಿಗೆ ಯಾವುದೇ ಡ್ರೆಸ್ ಕೋಡ್ ಇಲ್ಲ. ಆದರೆ, ಕೆಲವು ನೌಕರರು ಕಾಲೇಜಿಗೆ ಹೋಗುವವರಂತೆ ಬಟ್ಟೆ ಧರಿಸುತ್ತಾರೆ. ಇದು ಸ್ವೀಕಾರಾರ್ಹವಲ್ಲ. ಹರಿದ ಜೀನ್ಸ್, ತೋಳಿಲ್ಲದ ಉಡುಪುಗಳು ಮತ್ತು ತುಂಬಾ ಬಿಗಿಯಾದ ಬಟ್ಟೆಗಳನ್ನು ಧರಿಸಿಕೊಂಡು ಬರುತ್ತಾರೆ ಎಂದು ಅಧಿಕಾರಿಯೊಬ್ಬರು ಆಕ್ಷೇಪ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅವರು ಈ ಕ್ರಮವನ್ನು ಸ್ವಾಗತಿಸುತ್ತೇವೆ ಎಂದು ಹೇಳಿದ್ದಾರೆ. ಒಬ್ಬರ ಉಡುಗೆ ಇತರರಿಗೆ ಮುಜುಗರ ಉಂಟುಮಾಡಬಾರದು. ಸರ್ಕಾರಿ ಕಚೇರಿಗಳಲ್ಲಿ ಸಭ್ಯತೆಯನ್ನು ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಸರ್ಕಾರವು ಚಲನಾ ರಿಜಿಸ್ಟರ್ ಮತ್ತು ನಗದು ಘೋಷಣೆ ರಿಜಿಸ್ಟರ್ ಪರಿಚಯಿಸಿದೆ. ಸರ್ಕಾರಿ ನೌಕರರು ಕಚೇರಿಗೆ ಪ್ರವೇಶಿಸುವಾಗ ಮತ್ತು ಹೊರಡುವಾಗ ಈ ಲೆಡ್ಜರ್‌ಗಳಲ್ಲಿ ನಮೂದು ಮಾಡಬೇಕೆಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಆದರೆ ಅನೇಕರು ನಿಯಮವನ್ನು ಪಾಲಿಸುತ್ತಿಲ್ಲ.

ಚಲನಾ ರಿಜಿಸ್ಟರ್ ನೌಕರರು ಕಚೇರಿಯಲ್ಲಿ ಎಷ್ಟು ಹೊತ್ತು ಇರುತ್ತಾರೆ, ಹೇಗೆ ಕೆಲಸ ಮಾಡುತ್ತಾರೆ ಎಂದು ಪತ್ತೆಹಚ್ಚುವುದಾಗಿರುತ್ತದೆ. ಉದ್ಯೋಗಿ ಬೆಳಗ್ಗೆ 10.10 ರೊಳಗೆ ಕಚೇರಿಯಲ್ಲಿರಬೇಕು ಮತ್ತು ಕೆಲಸದ ಸಮಯ ಮುಗಿಯುವವರೆಗೆ ತಮ್ಮ ಸೀಟಿನಲ್ಲಿರಬೇಕು. ಅಧಿಕೃತ ಕರ್ತವ್ಯದ ಮೇಲೆ ಹೋಗುತ್ತಿದ್ದರೆ ಅದನ್ನು ರಿಜಿಸ್ಟರ್‌ನಲ್ಲಿ ನಮೂದಿಸಬೇಕು ಎಂದು ಹೇಳುತ್ತದೆ. ನಗದು ಘೋಷಣೆ ರಿಜಿಸ್ಟರ್‌ನಲ್ಲಿ, ಕಚೇರಿಗೆ ಪ್ರವೇಶಿಸುವ ಮೊದಲು ಮತ್ತು ನಿರ್ಗಮಿಸುವಾಗ ತಮ್ಮ ಪರ್ಸ್ ಮತ್ತು ಜೇಬಿನಲ್ಲಿರುವ ಮೊತ್ತವನ್ನು ನಮೂದಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಶಾಸಕ ಬೈರತಿ ಬಸವರಾಜ್ ಬಂಧನಕ್ಕಾಗಿ 3 ವಿಶೇಷ ತಂಡ

ಬೆಂಗಳೂರು, ಡಿ.20– ಹೈಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ವಜಾಗೊಂಡ ಬೆನ್ನಲ್ಲೇ ಶಾಸಕ ಬೈರತಿ ಬಸವರಾಜ್ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದು, ಅವರ ಬಂಧನಕ್ಕೆ 3 ವಿಶೇಷ ತಂಡಗಳನ್ನು ರಚಿಸಲಾಗಿದೆ.

ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೆ ತೆರಳಿದ್ದ ಭೈರತಿ ಬಸವರಾಜ್, ಅಲ್ಲಿಂದಲೇ ನಾಪತ್ತೆಯಾಗಿದ್ದಾರೆ.

ಅವರು ಬಸವರಾಜ್ ಗೋವಾ ಅಥವಾ ಮಹಾರಾಷ್ಟ್ರಕ್ಕೆ ಹೋಗಿರುವ ಮಾಹಿತಿ ಸಿಕ್ಕಿತ್ತು. ತನಿಖೆ ಮುಂದುವರೆಸಿದ ಅಧಿಕಾರಿಗಳಿಗೆ ಬೈರತಿ ಬಸವರಾಜ್ ಲೊಕೇಷನ್ ಕೊನೆಯದಾಗಿ ಮಹಾರಾಷ್ಟ್ರದ ಪುಣೆಯಲ್ಲಿ ಪತ್ತೆಯಾಗಿದ್ದು ಅಲ್ಲಿಂದ ಮೊಬೈಲ್ ಆಫ್ ಮಾಡ್ಕೊಂಡು ನಾಪತ್ತೆಯಾಗಿದ್ದಾರೆ ಎಂದು ಗೊತ್ತಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 21 ಭಾನುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 243 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಸಹಸ್ರಾರು ಭಕ್ತಿ ಕಂಠಗಳಿಂದ ಪವಿತ್ರ ಸ್ತುತಿ ಶಂಕರ ಸ್ತೋತ್ರ ಪಾರಾಯಣ

ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ ಸಾನಿಧ್ಯ ವಹಿಸಿದ್ದ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಅಮೃತವಾಣಿ

ಮೈಸೂರು,ಡಿ.20(ಪಿಎಂ)– ಮೈಸೂರು ಅರಮನೆ ಆವರಣದಲ್ಲಿ ಶನಿವಾರ ನೆರೆದಿದ್ದ ಅಪಾರ ಸಂಖ್ಯೆಯ ಭಕ್ತರು, ಏಕ ಕಾಲದಲ್ಲಿ ಶ್ರೀ ಆದಿಶಂಕರಚಾರ್ಯರಿಂದ ಭಗವಂತನ ಕುರಿತು ರಚಿತವಾದ ಸ್ತೋತ್ರಗಳ ಪಾರಾಯಣ ಮಾಡುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು.

ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಸಾನಿಧ್ಯ ಹಾಗೂ ಕೃಷ್ಣರಾಜನಗರ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧಿಪತಿ ಶ್ರೀ ಶಂಕರ ಭಾರತೀ ಮಹಾಸ್ವಾಮೀಜಿ, ಅವರ ಉತ್ತರಾಧಿಕಾರಿಯಾದ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಉಪಸ್ಥಿತಿಯಲ್ಲಿ ನಡೆದ ಈ ಬೃಹತ್ ಧಾರ್ಮಿಕ ಕಾರ್ಯಕ್ರಮದಲ್ಲಿ ಸ್ತೋತ್ರಗಳ ಪಾರಾಯಣ ಪ್ರತಿಧ್ವನಿಸಿ ಭಕ್ತಿಯ ಸುಧೆ ಹರಿಸಿತು.

ಶೃಂಗೇರಿಯ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನವಮ್, ಮೈಸೂರು ಜಿಲ್ಲೆಯ ಕೆ.ಆರ್.ನಗರದ ವೇದಾಂತಭಾರತೀ ಧಾರ್ಮಿಕ ಸಂಸ್ಥೆ ವತಿಯಿಂದ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು ಸನ್ಯಾಸ ಸ್ವೀಕರಿಸಿ 50ನೇ ವರ್ಷದ ಶುಭ ಸಂದರ್ಭದ ಪ್ರಯುಕ್ತ 'ಸುವರ್ಣ ಭಾರತೀ' ಶೀರ್ಷಿಕೆಯಡಿ ಶನಿವಾರ ಹಮ್ಮಿಕೊಂಡಿದ್ದ ಕಲ್ಯಾಣವೃಷ್ಟಿ ಮಹಾಭಿಯಾನದ 'ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ'ಯ ಮಹತ್ವಪೂರ್ಣವಾದ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿದ್ದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಅಂತಿಮವಾಗಿ ಅನುಗ್ರಹ ಭಾಷಣ ಕರುಣಿಸಿದರು.



ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಸ್ತುತಿಶಂಕರ ಸ್ತೋತ್ರ ಮಹಾಸಮರ್ಪಣೆ' ಕಾರ್ಯಕ್ರಮದ ಸಾನಿಧ್ಯವನ್ನು ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀವಿಧುಶೇಖರ ಭಾರತೀ ಸನ್ನಿಧಾನಂಗಳವರು ವಹಿಸಿದ್ದರು. ಕೃಷ್ಣರಾಜನಗರ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧಿಪತಿ ಶ್ರೀ ಶಂಕರ ಭಾರತೀ ಮಹಾಸ್ವಾಮೀಜಿ, ಅವರ ಉತ್ತರಾಧಿಕಾರಿಯಾದ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮೀಜಿ ಉಪಸ್ಥಿತರಿರುವುದನ್ನು ಚಿತ್ರದಲ್ಲಿ ಕಾಣಬಹುದು.

ದೈವಭಾಷೆ: ಶ್ರೀ ಆದಿಶಂಕರಚಾರ್ಯರಿಂದ ರಚಿತವಾದ ಸ್ತೋತ್ರಗಳು ನಾವು ದೇವರೊಂದಿಗೆ ಸಂವಹನ ನಡೆಸಲು ಕಲ್ಪಿಸಿರುವ ದೈವ ಭಾಷೆಯಾಗಿದೆ ಎಂದು ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧು ಶೇಖರ ಭಾರತೀ ಸನ್ನಿಧಾನಂಗಳವರು ಬಣ್ಣಿಸಿದರು.

ಅಪಾರ ಮಹಿಮೆ: ಸ್ತೋತ್ರಗಳಿಗೆ ಅಪಾರವಾದ ಮಹಿಮೆ ಇದೆ. ಅದರಲ್ಲೂ ನಮ್ಮ ಸನಾತನ ಹಿಂದೂ ವೈದಿಕ ಧರ್ಮದ ಉದ್ಧಾರಕರು ಹಾಗೂ ಪರಮೇಶ್ವರನ ಅವತಾರಿಗಳೂ ಆದ ಆದಿಶಂಕರ ಭಗವತ್ಪಾದರು ರಚಿಸಿದ ಸ್ತೋತ್ರಗಳ ವೈಶಿಷ್ಟ್ಯವಂತೂ ಅಪಾರವಾದುದು. ಸ್ತೋತ್ರಗಳೆಂದರೆ ನಮ್ಮ ಆರಾಧ್ಯ ದೈವಗಳ ಜೊತೆಗೆ ನಾವು ಮಾತನಾಡುವ ಒಂದು ಭಾಷೆ. ಸ್ತೋತ್ರಗಳೆಂಬ ಭಾಷೆಯ ಮೂಲಕ ನಾವು ನಮ್ಮ ದೈವದೊಂದಿಗೆ ಮಾತನಾಡಲು ಸಾಧ್ಯವಿದೆ ಎಂದರು.

ಲೋಕದಲ್ಲಿ ಅನೇಕ ಭಾಷೆಗಳಿದ್ದು, ಆ ಒಂದೊಂದು ಭಾಷೆಯಲ್ಲೂ ಒಂದೊಂದು ರೀತಿಯ ಶಬ್ಧ ಜಾಲವಿದೆ. ಪ್ರತಿಯೊಬ್ಬರೊಂದಿಗೆ ಮಾತನಾಡುವಾಗ ನಮ್ಮ ಭಾಷೆಯ ಶಬ್ಧ ಹಾಗೂ ಶೈಲಿ ಬದಲಾಗುತ್ತದೆ. ಅಂತೆಯೇ ಆ ಪರಮಾತ್ಮನೊಂದಿಗೆ ನಾವು ಮಾತನಾಡಬೇಕೆಂದರೆ ಭಾಷೆ ಅತ್ಯಂತ ಉತ್ಕೃಷ್ಟವಾಗಿರಬೇಕು. ಅಂತಹ ಉತ್ಕೃಷ್ಟವಾದ ಭಾಷಾ ಪರಂಪರೆಯಾಗಿ ಸ್ತೋತ್ರಗಳು ಬಂದಿವೆ. ಶಂಕರ ಭಗವತ್ಪಾದಾಚಾರ್ಯರು ಈ ದೇಶದಲ್ಲಿ 1,200 ವರ್ಷಗಳ ಹಿಂದೆ ಅವತರಿಸಿ ಉಪನಿಷತ್ ▸ 10ನೇ ಪುಟಕ್ಕೆ



ಸ್ತೋತ್ರ ಪಾರಾಯಣ ಮಾಡುತ್ತಿರುವ ಅಪಾರ ಸಂಖ್ಯೆಯ ಭಕ್ತ ಸಮೂಹವನ್ನು ಚಿತ್ರದಲ್ಲಿ ಕಾಣಬಹುದು.

ನಂಜದೇವನಪುರ ಬಳಿ ಐದು ಹುಲಿಗಳ ವಿಹಾರ!

● ಟ್ರ್ಯಾಪ್ ಕ್ಯಾಮರಾಗಳಲ್ಲಿ ಹುಲಿಗಳ ಚಲನ–ವಲನ ಸೆರೆ ● ಆತಂಕದಲ್ಲಿ ಸುತ್ತಮುತ್ತಲ ಗ್ರಾಮಸ್ಥರು



ಚಾಮರಾಜನಗರ,ಡಿ.20–ಜಿಲ್ಲಾ ಕೇಂದ್ರದಿಂದ ಕೇವಲ 12 ಕಿ.ಮೀ. ದೂರದ ನಂಜದೇವನಪುರ ಗ್ರಾಮದಲ್ಲಿ ಶುಕ್ರವಾರ ರಾತ್ರಿ 5 ಹುಲಿಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಗ್ರಾಮದ ಕುಮಾರ್ ಎಂಬುವರ ಜಮೀನಿನಲ್ಲಿ ಹುಲಿಗಳು ವಿಹರಿಸುತ್ತಿದ್ದ ದೃಶ್ಯ ಟ್ರ್ಯಾಪ್ ಕ್ಯಾಮರಾದಲ್ಲಿ ಸೆರೆಯಾಗಿದೆ. ಜಮೀನಿನ ಪಕ್ಕ ಆನೆ ಮಡುವಿನ ಕೆರೆಯಿದ್ದು, ಅಲ್ಲಿಂದ ಹುಲಿಗಳು ಒಂದರ ಹಿಂದೆ ಒಂದು ಓಡಾಡುತ್ತಿದ್ದುದನ್ನು ತಿಳಿದು ನಂಜದೇವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಶೀಘ್ರವೇ ಹುಲಿಗಳನ್ನು ಸೆರೆ ಹಿಡಿಯಬೇಕು ಎಂದು ▸ 10ನೇ ಪುಟಕ್ಕೆ

ವನ್ಯಜೀವಿಗಳಿಗೆ ಉರುಳು ಹಾಕಿದರೆ ಸೆರೆವಾಸ

ಮಡಿಕೇರಿ: ಮಾಂಸದ ಆಸೆಗಾಗಿ ಕಾಡು ಹಂದಿ, ಜಿಂಕೆ, ಕಡವೆ, ಮೊಲ ಸೇರಿದಂತೆ ಇನ್ನಿತರ ವನ್ಯಜೀವಿಗಳಿಗೆ ಉರುಳು ಹಾಕಿ ಬೇಟೆಯಾಡಿದರೆ ಕನಿಷ್ಟ 3 ವರ್ಷ, ಗರಿಷ್ಠ 7 ವರ್ಷಗಳ ಜೈಲು ಶಿಕ್ಷೆ ಮತ್ತು 5 ಲಕ್ಷ ರೂ.ಗಳ ವರೆಗೂ ದಂಡ ವಿಧಿಸಲಾಗುತ್ತದೆ ಎಂದು ಅರಣ್ಯ ಇಲಾಖೆ ಎಚ್ಚರಿಕೆ ನೀಡಿದೆ.

ಇತ್ತೀಚೆಗೆ ಚೆಟ್ಟಳ್ಳಿ ಗ್ರಾಮದಲ್ಲಿ ಉರುಳಿಗೆ ಸಿಲುಕಿ ಹುಲಿಯೊಂದು ಮೃತಪಟ್ಟ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು ವನ್ಯಜೀವಿಗಳನ್ನು ಬೇಟೆಯಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಉರುಳುಗಳನ್ನು ಬಳಸಿ ವನ್ಯಜೀವಿಗಳನ್ನು ಬೇಟೆಯಾಡುವುದು ಭಾರತದ ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಅಡಿಯಲ್ಲಿ ಅಪರಾಧವಾಗುತ್ತದೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ ಉರುಳುಗಳನ್ನು ಹಾಕುವುದು ▸ 10ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ವಿಚಾರ

ವರಿಷ್ಠರ ಕರೆಗೆ ಕಾದಿದ್ದೇವೆ

■ ಈ ಸಂಬಂಧ ವರಿಷ್ಠರ ಸೂಚನೆ ಇದೆ ■ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಪಷ್ಟನೆ

ಬೆಂಗಳೂರು,ಡಿ.20(ಕೆಎಂಶಿ)–ಅಧಿಕಾರ ಹಸ್ತಾಂತರ ಕುರಿತು ಚರ್ಚೆ ನಡೆಸಲು ದೆಹಲಿ ವರಿಷ್ಠರ ಕರೆಗೆ ನಾನು ಮತ್ತು ಮುಖ್ಯಮಂತ್ರಿ ಸಿದ್ದಾರಾಮಯ್ಯ ಕಾಯುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಬಹಿರಂಗಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರಿಷ್ಠರು ನಮ್ಮಿಬ್ಬರನ್ನೂ ಸಂಪರ್ಕಿಸಿ, ನಾವು ಕರೆದಾಗ ದೆಹಲಿಗೆ ಬನ್ನಿ ಎಂಬ ಆದೇಶ ನೀಡಿದ್ದಾರೆ, ಅವರ ಕರೆಗಾಗಿ ಕಾಯುತ್ತಿದ್ದೇವೆ. ನಮ್ಮ ಹೈಕಮಾಂಡ್ ನಾಯಕರು ನಿಮ್ಮಿಬ್ಬರಿಗೂ ಏನೋ ಹೇಳಿದ್ದಾರೆ. ಅವರೇ ಸೂಕ್ತ ಸಮಯದಲ್ಲಿ ಕರೆಸುತ್ತೇವೆ ಎಂದಿದ್ದಾರೆ. ಆಗ ದೆಹಲಿಗೆ ಹೋಗುತ್ತೇವೆ ಎಂದರು.

ಹೈಕಮಾಂಡ್ ನಾಯಕರ ನೀವಿಬ್ಬರೂ ಭೇಟಿ ಮಾಡುವ ವಿಷಯ ಕೇಳಿಬರುತ್ತಿದೆಯಲ್ಲಾ ಎಂಬ ಪ್ರಶ್ನೆಗೆ, ಆ ರೀತಿ ಇದ್ದರೆ ನಿಮಗೂ ತಿಳಿಸುತ್ತೇವೆ. ನಿಮಗೆ ತಿಳಿಸದೇ ಏನೂ ಮಾಡುವುದಿಲ್ಲ. ನಾನು ಕದ್ದುಮುಚ್ಚಿ ಹೋಗುವುದಿಲ್ಲ ಎಂದು ಹೇಳಿದರು.

ನಾಗಸಾಧುಗಳ ಆಶೀರ್ವಾದ: ನಾಗಸಾಧುಗಳು ಮನೆಗೆ ಬಂದು ಆಶೀರ್ವಾದ ಮಾಡಿದ್ದಾರೆ. ಮನೆಗೆ ಬಂದವರನ್ನು ಬೇಡ ಎನ್ನಲು ಆಗುವುದಿಲ್ಲ. ರಾಜಕೀಯದಲ್ಲಿರುವ ನಮಗೆ ಸಾಧು–ಸಂತರು, ಸ್ವಾಮೀಜಿಗಳು, ಹಿರಿಯರು ಸೇರಿದಂತೆ ಎಲ್ಲಾ ಜನರೂ ಬೇಕು. ನಮ್ಮ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ ನಡೆಸುತ್ತಿದೆ. ವಕ್ಫ್, ಚರ್ಚ್ ಸೇರಿದಂತೆ ಎಲ್ಲಾ ಧಾರ್ಮಿಕ ಕೇಂದ್ರಗಳಿಗೂ ಸಹಾಯ ಮಾಡಲಾಗುತ್ತಿದೆ ಎಂದರು.

ನಮ್ಮ ಮೇಲೆ ದಬ್ಬಾಳಿಕೆ: ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ) ಹಾಕಿದ್ದ ಚಾರ್ಜ್‌ಶೀಟ್ ಕೋರ್ಟ್‌ನಲ್ಲಿ ತಿರಸ್ಕೃತಗೊಂಡಿದ್ದು, ಈಗ ಒಂದು ಎಫ್‌ಐಆರ್ ಬಾಕಿ ಉಳಿದಿದೆ. ನಮ್ಮ ಮೇಲೆ ▸ 10ನೇ ಪುಟಕ್ಕೆ




ಅಚ್ಚರಿ ಬೆಳವಣಿಗೆಯೊಂದರಲ್ಲಿ ಶನಿವಾರ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಾಸಗಿ ಅತಿಥಿ ಗೃಹವೊಂದರಲ್ಲಿ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರನ್ನು ಭೇಟಿಯಾಗಿ ಮಹತ್ವದ ಮಾತುಕತೆ ನಡೆಸಿದರು.

“ ಸಿದ್ದರಾಮಯ್ಯ ವಿಧಾನಮಂಡಲದ ಅಧಿವೇಶನ ಮುಗಿದ ನಂತರವೂ ಬೆಳಗಾವಿಯ ಸರ್ಕೀಟ್ ಹೌಸ್‌ನಲ್ಲಿ ತಮ್ಮ ಆಪ್ತರೊಂದಿಗೆ ಎರಡು–ಮೂರು ಸುತ್ತಿನ ಚರ್ಚೆ ನಡೆಸಿ ಶನಿವಾರ ಸಂಜೆ ನಗರಕ್ಕೆ ಹಿಂತಿರುಗಿದ್ದಾರೆ. ಈ ಮಧ್ಯೆ ಶಿವಕುಮಾರ್ ಶುಕ್ರವಾರ ಬೆಳಗಾವಿ ಅಧಿವೇಶನ ಕಲಾಪದಲ್ಲಿ ಪಾಲ್ಗೊಳ್ಳದೆ, ದೇವಾಲಯಗಳಿಗೆ ತೆರಳಿದ್ದರು.

ಪಕ್ಷ, ಸರ್ಕಾರದಲ್ಲಿ ಗೊಂದಲಗಳಿಲ್ಲ

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಪಾಟೀಲ್



ಬೆಂಗಳೂರು, ಡಿ.20(ಕೆಎಂಶಿ) –ರಾಜ್ಯ ಕಾಂಗ್ರೆಸ್‌ನಲ್ಲಾಗಲಿ, ಸರ್ಕಾರದಲ್ಲಾಗಲಿ ಯಾವುದೇ ಗೊಂದಲಗಳಿಲ್ಲ, ಸರ್ಕಾರ ಸುಭದ್ರವಾಗಿದೆ. ಸಮರ್ಥ ಆಡಳಿತ ನೀಡುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ ಆರ್.ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧಿಕಾರ ಹಸ್ತಾಂತರ ಅಥವಾ ಇನ್ನಾವುದೇ ವಿಷಯಗಳಿದ್ದರೂ ಪಕ್ಷದ ವರಿಷ್ಠ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ನಡುವೆ ಒಪ್ಪಂದ ಎಂಬ ವಿಷಯ ಮಾಧ್ಯಮಗಳಲ್ಲಿ ನೋಡಿದ್ದೇನೆ. ಈ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ಪಕ್ಷದ ಎಲ್ಲಾ ನಾಯಕರ ತೀರ್ಮಾನ ಒಂದೇ. ಹೈಕಮಾಂಡ್ ಏನು ಹೇಳುತ್ತದೆಯೋ ಅದನ್ನು ನಾವೆಲ್ಲರೂ ಪಾಲಿಸುತ್ತೇವೆ. ಸರ್ಕಾರದಲ್ಲಿ ಎಲ್ಲರೂ ಒಟ್ಟಾಗಿದ್ದೇವೆ. ಸಿಎಂ ಮತ್ತು ಡಿಸಿಎಂ ನೇತೃತ್ವದಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗುತ್ತಿದೆ. ಇಷ್ಟು ಮಾತ್ರ ನಾನೂ ಹೇಳಬಲ್ಲೆ ಒಪ್ಪಂದದ ಬಗ್ಗೆ ನಮಗೆ ಯಾರಿಗೂ ಗೊತ್ತಿಲ್ಲ. ಇದು ಹೈಕಮಾಂಡ್ ನಾಯಕರಿಗೆ, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರಿಗೆ ಬಿಟ್ಟ ವಿಚಾರ. ಇದರ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ಹಿನಕಲ್‌ನ ಕೆನರಾ ಬ್ಯಾಂಕ್ ಶಾಖೆಯಲ್ಲಿ ಅಡವಿಟ್ಟ ಚಿನ್ನದ ತೂಕದಲ್ಲಿ ವ್ಯತ್ಯಾಸ

ಅಕ್ಕಸಾಲಿಗನ ವಿರುದ್ಧ ಎಫ್‌ಐಆರ್ ದಾಖಲು

ಮೈಸೂರು: ಬ್ಯಾಂಕ್‌ನಲ್ಲಿ ಅಡವಿಟ್ಟ ಚಿನ್ನದ ತೂಕದಲ್ಲಿ ವ್ಯತ್ಯಾಸ ಮಾಡಿ ಗ್ರಾಹಕರಿಗೆ ವಂಚಿಸುತ್ತಿದ್ದ ಮೈಸೂರಿನ ಹಿನಕಲ್‌ನ ಕೆನರಾ ಬ್ಯಾಂಕ್ ಶಾಖೆಯಲ್ಲಿ ನಡೆದಿದ್ದು, ಈ ಸಂಬಂಧ ಬ್ಯಾಂಕ್‌ನ ಅಧಿಕೃತ ಅಕ್ಕಸಾಲಿಗ ಅಶ್ವಿನ್ ಆಚಾರ್ ಎಂಬಾತನ ವಿರುದ್ಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಘಟನೆ ವಿವರ: ಅಶ್ವಿನ್ ಆಚಾರ್ ಅವರು 2014ರಿಂದ ಕೆನರಾ ಬ್ಯಾಂಕ್‌ನಲ್ಲಿ ಅಕ್ಕಸಾಲಿಗರಾಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಬ್ಯಾಂಕ್‌ನ ಗ್ರಾಹಕರಾದ ಹೆಚ್.ವಿ.ಕಿರಣ್ ಮತ್ತು ಶ್ವೇತಾ ಎಂಬುವವರು ತಾವು ಅಡವಿಟ್ಟಿದ್ದ ಚಿನ್ನದ ತೂಕದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಈ ದೂರಿನ ಬೆನ್ನಲ್ಲೇ ಡಿ.19ರಂದು ರಾಧಾ ಎಂಬ ಮತ್ತೊಬ್ಬ ಗ್ರಾಹಕರು ತಾವು ಅಡವಿಟ್ಟಿದ್ದ ಚಿನ್ನದಲ್ಲಿ 3.573 ಗ್ರಾಂ ತೂಕ ಕಡಿಮೆ ಇರುವುದಾಗಿ ಬ್ಯಾಂಕ್‌ಗೆ ದೂರು ನೀಡಿದ್ದರು. ಗ್ರಾಹಕರ ಸರಣಿ ದೂರುಗಳಿಂದ ಎಚ್ಚೆತ್ತ ಬ್ಯಾಂಕ್ ಸಿಬ್ಬಂದಿ ಮತ್ತು ಪ್ರಾದೇಶಿಕ ವ್ಯವಸ್ಥಾಪಕ ರಾಜಶೇಖರ್ ಆಭರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ತೂಕದಲ್ಲಿ ವ್ಯತ್ಯಾಸವಿರುವುದು ದೃಢಪಟ್ಟಿದೆ. ಅಕ್ಕಸಾಲಿಗ ಅಶ್ವಿನ್ ಆಚಾರ್ ಗ್ರಾಹಕರು ನಂಬಿಕೆಯಿಂದ ಇಟ್ಟಿದ್ದ ಚಿನ್ನದಲ್ಲಿ ಕೈಚಳಕ ತೋರಿಸಿ ವಂಚಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಬ್ಯಾಂಕ್‌ನ ಪ್ರಾದೇಶಿಕ ವ್ಯವಸ್ಥಾಪಕ ರಾಜಶೇಖರ್ ನೀಡಿದ ಅಧಿಕೃತ ದೂರಿನ ಮೇರೆಗೆ ಮೈಸೂರಿನ ವಿಜಯನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಸೋಂಕಿನ ಭೀತಿ

ಮೈಸೂರು ಮೃಗಾಲಯದಲ್ಲಿ ಕಟ್ಟೆಚ್ಚರ



ಮೈಸೂರು ಮೃಗಾಲಯದಲ್ಲಿ ಪ್ರಾಣಿಗಳಿಗೆ ಸೋಂಕು ಹರಡುವುದನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮವಾಗಿ ಸ್ಯಾನಿಟೈಸ್ ಮಾಡುತ್ತಿರುವುದು.

ಮೈಸೂರು, ಡಿ.20 (ಎಂಟಿವೈ)– ಮೈಸೂರು ರೇಸ್ ಕೋರ್ಸ್‌ನಲ್ಲಿ (ಎಂಆರ್‌ಸಿ) ಗ್ಲಾಂಡರ್ಸ್ ಬ್ಯಾಕ್ಟೀರಿಯಲ್ ಮಾರಕ ಸೋಂಕಿಗೆ ಕುದುರೆ ಬಲಿಯಾದ ಹಿನ್ನೆಲೆಯಲ್ಲಿ ಇದಕ್ಕೆ ಹೊಂದಿಕೊಂಡಂತಿರುವ 'ಮೈಸೂರು ಮೃಗಾಲಯ'ದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಉಳಿದ ಕುದುರೆಗಳ ರಕ್ತದ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಕುದುರೆ ಬಲಿ ಪಡೆದ ಸೋಂಕು ಎರಡು ಕಿ.ಮೀ. ವ್ಯಾಪ್ತಿ ಹರಡುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುವುದರಿಂದ ಮೃಗಾಲಯದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ಜೀಬ್ರಾ, ಜಿರಾಫೆಗಳ ಮೇಲೆ ನಿಗಾ: ಆತಂಕಕಾರಿ ಸೋಂಕು ಜೀಬ್ರಾ ಮತ್ತು ಜಿರಾಫೆಗಳಿಗೆ ಸುಲಭವಾಗಿ ಹರಡಬಹುದಾದ ಸಾಧ್ಯತೆಯನ್ನು ತಜ್ಞ ವೈದ್ಯರು ವ್ಯಕ್ತ ಪಡಿಸಿರುವ ಕಾರಣದಿಂದ ತೀವ್ರ ನಿಗಾ ವಹಿಸಲಾಗಿದೆ. ▸ 10ನೇ ಪುಟಕ್ಕೆ

“ ಮೈಸೂರು ಮೃಗಾಲಯದಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ. ಕುದುರೆ ಬಲಿ ಪಡೆದಿರುವ ಸೋಂಕು ಮಾರಕ ಎಂದು ಈಗಾಗಲೇ ತಜ್ಞರು ಅಭಿಪ್ರಾಯಪಟ್ಟಿರುವುದರಿಂದ ಮೃಗಾಲಯದಲ್ಲಿರುವ ಪ್ರಾಣಿಗಳ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜೀಬ್ರಾ ಮತ್ತು ಜಿರಾಫೆ ಆವರಣದ ಸುತ್ತಲೂ ಸ್ಯಾನಿಟೈಸ್ ಮಾಡಲಾಗುತ್ತಿದೆ. ಅಲ್ಲದೆ, ಪ್ರತಿ ಮಂಗಳವಾರ ಮೃಗಾಲಯದ ಎಲ್ಲಾ ಕಡೆ ಸ್ಯಾನಿಟೈಸ್ ಮಾಡಲಾಗುತ್ತಿದೆ. ಮೃಗಾಲಯಕ್ಕೆ ಆಹಾರ ಸರಬರಾಜು ಮಾಡಲು ಪ್ರತ್ಯೇಕ ವಾಹನ ಬಳಸುವಂತೆ ಸೂಚನೆ ನೀಡಲಾಗಿದೆ. ಎಲ್ಲಾ ವಾಹನಗಳಿಗೂ ಸ್ಯಾನಿಟೈಸ್ ಮಾಡಲಾಗುತ್ತಿದೆ. ವೀಡಿಯೊ ಕಾನ್ಫರೆನ್ಸ್ ಮೂಲಕ ತಜ್ಞ ವೈದ್ಯರ ಸಲಹೆ, ಅಭಿಪ್ರಾಯ ಪಡೆದು, ಎಸ್‌ಒಪಿ ಅನುಸಾರ ಕಟ್ಟೆಚ್ಚರ ವಹಿಸಲಾಗಿದೆ.



–ಪಿ.ಅನುಷ, ಕಾರ್ಯನಿರ್ವಾಹಕ ನಿರ್ದೇಶಕರು, ಮೈಸೂರು ಮೃಗಾಲಯ.

ಎಂಆರ್‌ಸಿ ರೇಸಿಂಗ್ ಚಟುವಟಿಕೆ ಸ್ಥಗಿತ

■ ಕುದುರೆ, ಕತ್ತೆ, ಹೇಸರಕತ್ತೆಗಳಿಗೆ ಹರಡುವ ಸೋಂಕು; ಇವುಗಳ ಸಾಗಾಣೆ ಇಲ್ಲವೇ ಮನರಂಜನೆಗೆ ಬಳುಸುವುದಕ್ಕೆ ನಿರ್ಬಂಧ ■ ಮನುಷ್ಯರಿಗೂ ಹರಡಬಹುದಾದ ಸಾಂಕ್ರಾಮಿಕ ರೋಗ ■ ಮೂರು ತಿಂಗಳವರೆಗೆ ಪ್ರತಿ 21 ದಿನಕ್ಕೊಮ್ಮೆ ಪರೀಕ್ಷೆ ■ ಭಾರತೀಯ ಟರ್ಫ್ ಆಹ್ವಾನ ಕಪ್ ಮುಂದೂಡಿಕೆ

ಮೈಸೂರು, ಡಿ.20(ಬಿಎಲ್‌ಯು)– ಮಹಾಮಾರಿ ಕೊರೊನಾ ಮಾದರಿಯಲ್ಲೇ ಕುದುರೆಗಳಿಗೆ ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಭೀತಿ ಎದುರಾಗಿದೆ. ಈ ಸೋಂಕಿಗೆ ಈಗಾಗಲೇ ಮೈಸೂರು ರೇಸ್ ಕ್ಲಬ್‌ನಲ್ಲಿ ಕುದುರೆಯೊಂದು ಬಲಿಯಾಗಿರುವುದು ಮತ್ತಷ್ಟು ಆತಂಕ ಹೆಚ್ಚಿಸಿದೆ. ಈ ಹಿನ್ನೆಲೆಯಲ್ಲಿ ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಎಲ್ಲಾ ರೀತಿಯ ರೇಸ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದೆ.

ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ಮಾರಣಾಂತಿಕವಾಗಿದೆ. ಪ್ರಾಥಮಿಕವಾಗಿ ಕುದುರೆಗಳು, ಕತ್ತೆಗಳು ಹಾಗೂ ಹೇಸರಕತ್ತೆಗಳಿಗೆ ವ್ಯಾಪಿಸಿ, ಬಳಿಕ ಮನುಷ್ಯ ಹಾಗೂ ಇನ್ನಿತರೆ ಸಸ್ತನಿಗಳಿಗೆ ಈ ರೋಗ ವ್ಯಾಪಿಸುವ ಸಾಧ್ಯತೆ ಇದೆ.

ಅಸ್ವಸ್ಥಗೊಂಡ ಮೈಸೂರು ರೇಸ್ ಕ್ಲಬ್‌ನ ಕುದುರೆಯೊಂದರ ರಕ್ತದ ಮಾದರಿಯನ್ನು ಹರಿಯಾಣದ ಹಿಸಾರ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಆ ಕುದುರೆಗೆ ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಸೋಂಕು ತಗುಲಿರುವುದು ಪತ್ತೆಯಾಗಿತ್ತು. ವರದಿ ಬರುವುದರೊಳಗೆ ಡಿ.17ರ ಬೆಳಗ್ಗೆ ಆ ಕುದುರೆ ಸಾವನ್ನಪ್ಪಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಡಿ.19 ರಂದು ಮೈಸೂರು ರೇಸ್ ಕ್ಲಬ್ ಆವರಣದ ▸ 10ನೇ ಪುಟಕ್ಕೆ



ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಸೋಂಕಿನ ಪರಿಣಾಮ 2026ರ ಫೆಬ್ರವರಿ 28, ಮಾರ್ಚ್ 1ರಂದು ಮೈಸೂರಲ್ಲಿ ನಡೆಯಬೇಕಿದ್ದ ಭಾರತೀಯ ಟರ್ಫ್ ಆಹ್ವಾನ ಕಪ್ ಮುಂದೂಡಲಾಗಿದೆ. ಇದನ್ನು ಮತ್ತೊಂದು ದಿನ ನಿಗದಿಪಡಿಸಲು ಎಂಆರ್‌ಸಿ ತೀರ್ಮಾನ ಕೈಗೊಂಡಿದೆ.

ಮೈಸೂರು ಅರಮನೆ ಆವರಣದಲ್ಲಿ ಇಂದಿನಿಂದ 10 ದಿನಗಳ ಮಾಗಿ ಫಲಪುಷ್ಪ ಪ್ರದರ್ಶನ

● ನೋಡುಗರ ಕಣ್ಮನ ಸೆಳೆಯಲಿದೆ ಪುಷ್ಪಕಾಶಿ ● ಲಕ್ಷಾಂತರ ಹೂವುಗಳಿಂದ ತಲೆ ಎತ್ತಿದ ಶೃಂಗೇರಿ ದೇಗುಲ

ಮೈಸೂರು, ಡಿ.20(ಎಂಟಿವೈ)– ಹೊಸ ವರ್ಷ ಹಾಗೂ ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಮೈಸೂರು ಅರಮನೆಯ ಆವರಣದಲ್ಲಿ ನಾಳೆ(ಡಿ.21)ಯಿಂದ 31ರವರೆಗೆ ಮಾಗಿ ಉತ್ಸವದ ಫಲ–ಪುಷ್ಪ ಪ್ರದರ್ಶನ ಜರುಗಲಿದ್ದು, ಲಕ್ಷಾಂತರ ಹೂವುಗಳಿಂದ ಶೃಂಗೇರಿ ದೇವಸ್ಥಾನದ ಮಾದರಿ ಸೇರಿದಂತೆ ವಿವಿಧ ಆಕೃತಿಗಳು ಪ್ರವಾಸಿಗರ ಕಣ್ಮನ ಸೆಳೆಯಲಿವೆ.

ಮೈಸೂರು ಅರಮನೆ ಮಂಡಳಿ ಆಯೋಜಿಸಿರುವ 10 ದಿನಗಳ ಫಲ–ಪುಷ್ಪ ಪ್ರದರ್ಶನದಲ್ಲಿ ಮೇರಿ ಗೋಲ್ಡ್, ಸಾಲ್ವಿಯಾ, ಡೇಲಿಯಾ, ಪಿಟೋನಿಯಾ, ಸೇವಂತಿಗೆ, ಕೋಲಿಯಸ್, ಸಿಲೋಷಿಯಾ, ಫ್ರೆಂಚ್ ಮೆರಿ ಗೋಲ್ಡ್, ಜೀನಿಯಾ ಸೇರಿದಂತೆ 35ಕ್ಕೂ ಹೆಚ್ಚು ಬಗೆಯ ಹೂಗಿಡಗಳನ್ನು 25 ಸಾವಿರ ಪಾಟ್‌ಗಳಲ್ಲಿ ಬೆಳೆಸಿ ಪ್ರವಾಸಿಗರ ಆಕರ್ಷಿಸಲು ಜೋಡಣೆ ಮಾಡಲಾಗಿದೆ. ಹೂಗಿಡಗಳು ಕಂಗೊಳಿಸುತ್ತಿದ್ದು, ಫಲಪುಷ್ಪ ಪ್ರದರ್ಶನಕ್ಕೆ ಮೆರಗು ತುಂಬುತ್ತಿವೆ.


ಹೂವಿನಿಂದಲೇ ಮೈದಳೆದ ಆಕೃತಿಗಳು: ಅರಮನೆ ಆವರಣದ ಫಲ–ಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಲಕ್ಷಾಂತರ ಹೂಗಳಿಂದ ಆಕರ್ಷಕವಾಗಿ ಶೃಂಗೇರಿಯ ದೇವಾಲಯದ ಮಾದರಿಯನ್ನು ರೂಪಿಸಲಾಗಿದೆ. 50 ಅಡಿ ಅಗಲ, 16 ಅಡಿ ಉದ್ದ, 25 ಅಡಿ ಎತ್ತರದ ದೇವಾಲಯದ ಆಕೃತಿ ಮನಸೂರೆಗೊಳ್ಳಲಿದ್ದು, ಅಂತಿಮ ಹಂತದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಸಿರಿ ಧಾನ್ಯಗಳಿಂದ ವೃಕ್ಷಮಾತೆ ದಿ. ಸಾಲು ಮರದ ತಿಮ್ಮಕ್ಕನವರ ಭಾವ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಾದರಿ ಚಿತ್ರ, ಭಾರತದ ಸಂವಿಧಾನದ ಘೋಷ ವಾಕ್ಯ, ತರಕಾರಿಯ ಕೆತ್ತನೆ, ಉಯ್ಯಾಲೆಯಲ್ಲಿ ಕುಳಿತಿರುವ ಕೃಷ್ಣ ಮತ್ತು ರಾಧೆ, ಭಾರತದ ಮಹಿಳಾ ಕ್ರಿಕೆಟಿಗರು ಗೆದ್ದ ವಿಶ್ವ ಕಪ್ ಮಾದರಿ, ಖೋ–ಖೋ, ಕುಡ್ಡಿ, ಅಂಧರ ಕ್ರಿಕೆಟ್ ಆಟಗಾರರ ಭಾವಚಿತ್ರವನ್ನು ಡಿಜಿಟಲ್ ಬೋರ್ಡ್‌ನಲ್ಲಿ ಪ್ರದರ್ಶಿಸಲಾಗುತ್ತದೆ.

ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ರಾಷ್ಟ್ರಪ್ರೇಮ ಬಿಂಬಿಸುವ ಆಪರೇಷನ್ ಸಿಂಧೂರ ಆಕೃತಿಗಳು ರೂಪುಗೊಂಡಿವೆ. ಉಗ್ರಗಾಮಿಗಳನ್ನು ಸದೆ ಬಡಿಯಲು ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂಧೂರದ ಯುದ್ಧ ಟ್ಯಾಂಕರ್, ಹಡಗು, ಫೈಟರ್ ಜೆಟ್ ಮಾದರಿ, ಎರಡು ನವಿಲು ಮಾದರಿ, ಚೋಟಾ ಬೀಮ್, ಕಾಳಿಂಗ ಮರ್ಧನ, ಸೈಕಲ್ ತುಳಿಯುತ್ತಿರುವ ಅಳಿಲು, ಹಂಸ, ಕೊಕ್ಕರೆ, ಪಕ್ಷಿ, ದುಂಬಿ, ಕ್ಯಾರೆಟ್ ಹಿಡಿದಿರುವ ಮೊಲ, ಮಾವಿನ ಹಣ್ಣು, ಕರಡಿ ಸೇರಿದಂತೆ ಇನ್ನಿತರ ಆಕೃತಿಗಳನ್ನು ಹೂವುಗಳಿಂದ ರೂಪಿಸುವ ಕಾರ್ಯ ಭರದಿಂದ ಸಾಗಿದೆ.

ಫಲ–ಪುಷ್ಪ ಪ್ರದರ್ಶನ ವೀಕ್ಷಿಸಲು ಬರುವ ಮೊದಲ 50 ಮಂದಿ ಸಾರ್ವಜನಿಕರಿಗೆ ಅಲೋವೇರ, ತುಳಸಿ, ಮಲ್ಲಿಗೆ, ವೀಳ್ಯೆದೆಲೆ, ಚಕ್ರಮುನಿ ಗಿಡಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ. ಪ್ರದರ್ಶನದಲ್ಲಿ ಜಯಚಾಮರಾಜ ಒಡೆಯರ್ ರಚಿಸಿರುವ ಕೀರ್ತನೆಗಳನ್ನು ಬಿತ್ತರಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇದರೊಂದಿಗೆ ದಸರಾ ಮಹೋತ್ಸವ ಅಂದು–ಇಂದು ಛಾಯಾಚಿತ್ರ ಪ್ರದರ್ಶನ, ಒಡೆಯರ್ ಸಂಸ್ಥಾನದ ಆಡಳಿತದ ಚಿತ್ರಗಳು, ದಸರಾ ಮಹೋತ್ಸವದ ಚಿತ್ರಗಳು ಮತ್ತು ವೀಡಿಯೋ ಪ್ರದರ್ಶನವನ್ನು ಫಲ–ಪುಷ್ಪ ಪ್ರದರ್ಶನಕ್ಕೆ ಬಂದ ಪ್ರವಾಸಿಗರು ಮತ್ತು ಸಾರ್ವಜನಿಕರು ವೀಕ್ಷಿಸಬಹುದಾಗಿದೆ.

ಗೊಂಬೆ ಪ್ರದರ್ಶನ: ಇದೇ ವೇಳೆ 5 ಬ್ಲಾಕ್‌ಗಳಲ್ಲಿ ಗೊಂಬೆ ಪ್ರದರ್ಶನ ಏರ್ಪಡಿಸಲಾಗಿದೆ. ಗೀತಾ ಶ್ರೀಹರಿ ಅವರಿಂದ ಹರ ಹರ ಮಹದೇವ, ಮೀನಾಕ್ಷಿ ಶೈಲ ಕುಮಾರ್ ಅವರಿಂದ ಸಂಪೂರ್ಣ ರಾಮಾಯಣ, ಹೇಮಲತಾ ಕುಮಾರ ಸ್ವಾಮಿ ಅವರಿಂದ ಶಿವ ಕೇಶವಾಮೃತ ಸಾರ, ಅನ್ನ ಪೂರ್ಣ ಗೋಪಾಲಕೃಷ್ಣ ಅವರಿಂದ ದೇವ ನೊಬ್ಬ–ನಾಮ ಹಲವು, ಸರ್ವಮಂಗಳಾ ಕೃಷ್ಣಭಟ್ ಅವರಿಂದ ತಿರುಪತಿ ಶ್ರೀನಿವಾಸ ವೈಭವ ಗೊಂಬೆ ಪ್ರದರ್ಶನವನ್ನು ಏರ್ಪಡಿಸಲಾಗಿದೆ.


ಲಕ್ಷಾಂತರ ಹೂಗಳಿಂದ ಆಕರ್ಷಕವಾಗಿ ಸಿದ್ಧವಾಗಿರುವ ಶೃಂಗೇರಿಯ ದೇವಾಲಯದ ಮಾದರಿ

ದೀಪಾಲಂಕಾರ, ಪಟಾಕಿ ಸಿಡಿತ

ಫಲ–ಪುಷ್ಪ ಪ್ರದರ್ಶನ ಅಂಗವಾಗಿ ನಾಳೆ(ಡಿ.21)ಯಿಂದ ಡಿ.31ರವರೆಗೆ ಪ್ರತೀ ದಿನ ಸಂಜೆ 7ರಿಂದ ರಾತ್ರಿ 9 ಗಂಟೆವರೆಗೆ ಅರಮನೆಗೆ ದೀಪಾಲಂಕಾರ ಮಾಡಲಾಗುತ್ತದೆ. ಅಲ್ಲದೇ ಡಿ.21ರಿಂದ 25ರವರೆಗೆ ಪ್ರತೀ ದಿನ ಸಂಜೆ 5 ಗಂಟೆಯಿಂದ 9.30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಡಿ.31ರಂದು ರಾತ್ರಿ 11 ಗಂಟೆಯಿಂದ 12 ಗಂಟೆವರೆಗೆ ಕರ್ನಾಟಕ ಪೊಲೀಸ್ ಬ್ಯಾಂಡ್ ತಂಡದಿಂದ ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್ ವಾದನದ ಕಾರ್ಯಕ್ರಮ ಜರುಗಲಿದೆ. ಜ.1 (2026) ಮಧ್ಯರಾತ್ರಿ 12ರಿಂದ 12.15ರವರೆಗೆ ಅರಮನೆ ಆವರಣದಲ್ಲಿ ಶಬ್ದ ರಹಿತ ಹಸಿರು ಪಟಾಕಿ ಸಿಡಿಸುವ ಮೂಲಕ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಮೈಸೂರು ಅರಮನೆ ಮಂಡಳಿ ಸಿದ್ಧತೆ ಮಾಡಿಕೊಂಡಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಡಿ.21ರಂದು ಸಂಜೆ 4.30ರಿಂದ 5.15ರವರೆಗೆ ಸಂಪತ್ ತಂಡದಿಂದ ವಾದ್ಯ ಸಂಗೀತ. 5.20ರಿಂದ 5.50ರವರೆಗೆ ಯೋಗಶ್ರೀ ತಂಡದಿಂದ ಭಕ್ತಿ ಗೀತೆಗಳು, 6 ರಿಂದ 7 ಗಂಟೆವರೆಗೆ ಲಾವಣ್ಯ ತಂಡದಿಂದ ಸುಗಮ ಸಂಗೀತ, 7.15ರಿಂದ 7.30ರವರೆಗೆ ಹೆಚ್.ಎಸ್.ಸ್ನೇಹ ತಂಡದಿಂದ ನಾಡಗೀತೆ, ಮೈಸೂರು ಸಂಸ್ಥಾನದ ನಾಡಗೀತೆ ಕಾಯೌ ಶ್ರೀಗೌರೀ ಗೀತ ಗಾಯನ. ಸಂಜೆ 7.30ರಿಂದ 9.30ರವರೆಗೆ ಪಂಚಭಾಷಾ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ, ವಿದುಷಿ ಹಂಸಿಕಾ ಅಯ್ಯರ್ ಅವರಿಂದ ಸಂಗೀತ ಸಂಭ್ರಮ ಜರುಗಲಿದೆ.

ಫಲಪುಷ್ಪ ಪ್ರದರ್ಶನಕ್ಕೆ ಇಂದು ಚಾಲನೆ

ಅರಮನೆ ಆವರಣದಲ್ಲಿ ಆಯೋಜಿಸಿರುವ 10 ದಿನಗಳ ಮಾಗಿ ಫಲ–ಪುಷ್ಪ ಪ್ರದರ್ಶನಕ್ಕೆ ನಾಳೆ(ಡಿ.21) ಸಂಜೆ 4 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಚೆಸ್ಕಾಂ ಇಂಜಿನಿಯರ್‌ಗೆ ಜಾತಿನಿಂದನೆ, ಧಮ್ಕಿ; ವಿದ್ಯುತ್ ಗುತ್ತಿಗೆದಾರ ಶ್ರೀಪಾಲ್ ಬಂಧನ

ಮೈಸೂರು, ಡಿ.20– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ)ದ ಮಹಿಳಾ ಅಧಿಕಾರಿಯನ್ನು ಅವಾಚ್ಯವಾಗಿ ನಿಂದಿಸಿ, ಅವರ ಜಾತಿನಿಂದನೆ ಮಾಡಿದ ಆರೋಪದಡಿ ಮೈಸೂರಿನ ವಿದ್ಯುತ್ ಗುತ್ತಿಗೆದಾರನ ವಿರುದ್ಧ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ(ಡಿಸಿಆರ್‌ಇ) ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಚೆಸ್ಕಾಂ ಎನ್.ಆರ್.ಮೊಹಲ್ಲಾ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಎಸ್.ಬಿ.ಅನಿತ ಅವರು ನೀಡಿದ ದೂರಿನನ್ವಯ, ವಿದ್ಯುತ್ ಗುತ್ತಿಗೆದಾರ ಆರ್.ಶ್ರೀಪಾಲ್ ಬಂಧಿತ ಆರೋಪಿ.

ಅಧಿಕಾರಿ ದೂರಿನಲ್ಲಿರುವುದು: ವಿದ್ಯುತ್ ಗುತ್ತಿಗೆದಾರ ಪದೇ ಪದೆ ಕಚೇರಿಗೆ ಬಂದು, ವಿದ್ಯುತ್ ಗುತ್ತಿಗೆ ವಿಚಾರವಾಗಿ ಕಾನೂನು ಬಾಹಿರವಾಗಿ ಕೆಲಸ ಮಾಡಿ ಕೊಡುವಂತೆ ಒತ್ತಡ ಹಾಕುತ್ತಿದ್ದರು. ಅವರ ಅಕ್ರಮ ಬೇಡಿಕೆಗಳನ್ನು ತಿರಸ್ಕರಿಸಿದ ಕಾರಣಕ್ಕೆ ಕರ್ತವ್ಯ ಸಮಯದಲ್ಲಿ ಜಗಳ ತೆಗೆದು, ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ, ತೇಜೋವಧೆ ಮಾಡಿ ನಿಂದಿಸಿದ್ದರು. ಈ ಸಂಬಂಧ ನಾನು ಫೆ.21ರಂದು ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದೇನೆ.

ನಂತರ ಶ್ರೀಪಾಲ್, ನನ್ನ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಸಹೋದ್ಯೋಗಿಗಳು, ಪರಿಚಯಸ್ಥರು, ಸಾರ್ವಜನಿಕರ ಎದುರು ನನ್ನನ್ನು ಉದ್ದೇಶಿಸಿ ನಿಂದಿಸುತ್ತಿದ್ದರು. ಕೀಳು ಜಾತಿಯ ಇವಳ ಸೊಕ್ಕನ್ನು ನಾನೇ ಮುರಿಯುತ್ತೇನೆ ಎಂದು ಜಾತಿ ಹೆಸರೇಳಿ ಅವಹೇಳನ ಮಾಡುತ್ತಿದ್ದರು. ನನ್ನ ಮೇಲೆ ಭ್ರಷ್ಟಾಚಾರ ಸೇರಿದಂತೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದರು. ಈ ಬಗ್ಗೆ ನೇರವಾಗಿ ಪ್ರಶ್ನಿಸಿ, ನಿಮ್ಮ ದುರ್ವರ್ತನೆ ಮುಂದುವರೆಸದಂತೆ ಹಲವು ಬಾರಿ ಕೋರಿಕೊಂಡಿದ್ದೆ.

ಆದರೂ ಬದಲಾಗದ ಶ್ರೀಪಾಲ್, ನನ್ನ ಮತ್ತು ಜಾತಿ ವಿರುದ್ಧ ನಿರಂತರವಾಗಿ ಕಚೇರಿಯಲ್ಲಿ ಅವಾಚ್ಯವಾಗಿ ನಿಂದಿಸುತ್ತಿದ್ದರು. ಡಿ.8ರಂದು ಬೆಳಗ್ಗೆ ಒಂಟಿಕೊಪ್ಪಲಿನ ಮಾತೃಮಂಡಲಿ ವೃತ್ತದ ಬಳಿಯ ಟೀ ಅಂಗಡಿ ಬಳಿಯೂ ಶ್ರೀಪಾಲ್, ಕೆಲವರೊಂದಿಗೆ ಮಾತನಾಡುವಾಗಲೂ ನನ್ನ ಹಾಗೂ ಜಾತಿಯ ಬಗ್ಗೆ ಕೀಳಾಗಿ ಮಾತನಾಡಿದ್ದಾರೆ. 25 ಲಕ್ಷ ಹಣ ಪಡೆದು, ಕಾನೂನು ಬಾಹಿರವಾಗಿ ವಿದ್ಯುತ್ ಸಂಪರ್ಕ ನೀಡಿದ್ದು, ಅವಳ ಬೆಂಬಲಕ್ಕೆ ಯಾರೂ ಇಲ್ಲ, ಅವಳು ಜೈಲಿಗೆ ಹೋಗಬೇಕು ಎಂದು ಇಲ್ಲಸಲ್ಲದ ಆರೋಪ ಮಾಡಿದ್ದಲ್ಲದೆ ನನ್ನ ನಡವಳಿಕೆ ಬಗ್ಗೆಯೂ ಕೆಟ್ಟದಾಗಿ ಮಾತನಾಡಿರುವುದು ಸಹೋದ್ಯೋಗಿಗಳ ಮೂಲಕ ತಿಳಿದಿದ್ದೇನೆ. ಶ್ರೀಪಾಲ್ ಅವರ ಕೀಳು ಮಾತುಗಳಿಂದ ಮಾನಸಿಕವಾಗಿ ಕುಗ್ಗಿದ್ದು, ಜಿಗುಪ್ಸೆ ಉಂಟಾಗಿದೆ. ನನ್ನ ವೃತ್ತಿ ಹಾಗೂ ಖಾಸಗಿ ಜೀವನಕ್ಕೆ ತೊಂದರೆಯಾಗಿದೆ ಎಂದು ಮಹಿಳಾ ಅಧಿಕಾರಿ, ಡಿಸಿಆರ್‌ಇಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್ ಅನಿತಾ ಅವರು, ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘಿಸಿ ಸಿಸಿ, ಓಸಿ ಇಲ್ಲದೆಯೇ ಕಟ್ಟಡವೊಂದರ ವಿದ್ಯುತ್ ಸಂಪರ್ಕಕ್ಕೆ ಅನುಮತಿ ನೀಡಿದ್ದಾರೆ ಎಂದು ವಿದ್ಯುತ್ ಗುತ್ತಿಗೆದಾರ ಶ್ರೀಪಾಲ್, ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಸಿಂಧುವಳ್ಳಿಯಲ್ಲಿ ಕುರಿಮಂದೆ ಮೇಲೆ ಚಿರತೆ ದಾಳಿ

ಒಂದು ಕುರಿ ಕೊಂದು, ಮತ್ತೊಂದನ್ನು ಗಾಯಗೊಳಿಸಿ ಪರಾರಿ

ಮೈಸೂರು, ಡಿ.20(ವಿವಿಹೆಚ್)– ಕುರಿಮಂದೆ ಮೇಲೆ ಚಿರತೆ ದಾಳಿ ಮಾಡಿ ಒಂದು ಕುರಿಯನ್ನು ಕೊಂದು ಹಾಕಿ, ಮತ್ತೊಂದನ್ನು ಗಾಯಗೊಳಿಸಿರುವ ಘಟನೆ ನಂಜನಗೂಡು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲಿ ನಡೆದಿದೆ.

ಶನಿವಾರ ಗ್ರಾಮದ ರೈತ ಮಹದೇವಯ್ಯ ಎಂಬುವವರಿಗೆ ಸೇರಿದ ಜಮೀನಿನಲ್ಲಿ ಮೇಯುತ್ತಿದ್ದ ಕುರಿ ಮಂದೆ ಮೇಲೆ ಚಿರತೆ ಹಠಾತ್ ದಾಳಿ ಮಾಡಿದೆ. ಮಹದೇವಯ್ಯ ಕೂಗಿಕೊಂಡಾಗ ಒಂದು ಕುರಿಯನ್ನು ಕಚ್ಚಿಕೊಂಡು ಕಾಲುವೆಗೆ ಹಾರಿದೆ. ಕಾಲುವೆಯಲ್ಲಿ ನೀರಿಲ್ಲದಿದ್ದರಿಂದ ಸ್ಥಳೀಯರ ಸದ್ದುಗದ್ದಲದಿಂದ ಬೆದರಿದ ಚಿರತೆ ಕುರಿಯನ್ನು ಅಲ್ಲೇ ಬಿಟ್ಟು ಕಾಲ್ಕಿತ್ತಿದೆ.

ಗ್ರಾಮದ ಯುವಕ ಸುರೇಶ್ ಎಂ.ಸಿಂಧುವಳ್ಳಿ ತಕ್ಷಣ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಬೀಟ್ ಆಫೀಸರ್ ವೈಶಾಕ್ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಸೂಕ್ತ ಪರಿಹಾರ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ.


ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸುರೇಶ್, ಮೈಸೂರು ಜಿಲ್ಲೆಯಾದ್ಯಂತ ಚಿರತೆ ದಾಳಿಗೆ ಸಾಕು ಪ್ರಾಣಿಗಳು ಮಾತ್ರವಲ್ಲದೇ 11 ವರ್ಷದ ಬಾಲಕನೂ ಬಲಿಯಾಗಿದ್ದಾನೆ. ಹೀಗಿದ್ದರೂ ಸರ್ಕಾರ ಚಿರತೆ ಹಾವಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗಿದೆ. ಕುರಿ ಸಾಕಾಣಿಕೆ. ಹೈನುಗಾರಿಕೆಯನ್ನೇ ನಂಬಿ ಜೀವನ ಸಾಗಿಸುವ ಎಷ್ಟೋ ಕುಟುಂಬಗಳಿಗೆ ಇಂತಹ ದಾಳಿಗಳು ಆರ್ಥಿಕವಾಗಿಯೂ ಪೆಟ್ಟು ನೀಡುತ್ತವೆ.

ಕುರಿಯ ಮಾಲೀಕರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು. ಮುಂದೆ ಹೀಗಾಗದಂತೆ ಎಚ್ಚರಿಕೆ ಕ್ರಮ ವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಸರ್ಕಾರಿ ಶಾಲೆಗೆ ಕುರ್ಚಿ, ಟೇಬಲ್ ಕೊಡುಗೆ


ಮೈಸೂರು ತಾಲ್ಲೂಕು ಜಯಪುರ ಹೋಬಳಿಯ ಬರಡನಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರು 20ಸಾವಿರ ಮೌಲ್ಯದ ಕುರ್ಚಿ ಮತ್ತು ಟೇಬಲ್‌ಗಳನ್ನು ಕೊಡುಗೆ ನೀಡಿದರು. ಶಾಲೆಯ ವತಿಯಿಂದ ಶ್ರೀಕಾಂತ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ಚೇರ್ಮನ್ ಬಸವರಾಜಪ್ಪ, ಮುಖ್ಯಶಿಕ್ಷಕಿ ಎಸ್.ಹೆಚ್ ಉಷಾ, ಎಸ್‌ಡಿಎಂಸಿ ಅಧ್ಯಕ್ಷೆ ನಂದಿನಿ, ಉಪಾಧ್ಯಕ್ಷೆ ರಾಣಿ, ಸದಸ್ಯರಾದ ಸುಮ, ಜಯಮ್ಮ, ಸುಮ, ಮಹೇಶ್ವರಿ, ಶೃತಿ, ನಂಜುಂಡಸ್ವಾಮಿ, ಗ್ರಾಮಸ್ಥರಾದ ದೇವಪ್ಪ ಮತ್ತು ದೀಪಿಕಾ ಉಪಸ್ಥಿತರಿದ್ದರು.

ಸೈರಾಂಗ್–ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಡಿಕ್ಕಿ; 7 ಆನೆಗಳ ದಾರುಣ ಸಾವು



ಗುವಾಹಟಿ: ಅಸ್ಸಾಂನ ಹೊಜೈ ಜಿಲ್ಲೆಯಲ್ಲಿ ಸೈರಾಂಗ್–ನವದೆಹಲಿ ರಾಜಧಾನಿ ಎಕ್ಸ್ ಪ್ರೆಸ್ ರೈಲು ಡಿಕ್ಕಿ ಹೊಡೆದ ಪರಿಣಾಮ 7 ಆನೆಗಳು ಸ್ಥಳದಲ್ಲೇ ಮೃತಪಟ್ಟಿದ್ದು, ಒಂದು ಆನೆ ಗಂಭೀರವಾಗಿ ಗಾಯಗೊಂಡಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯಿಂದಾಗಿ ರೈಲಿನ ಎಂಜಿನ್ ಮತ್ತು ಐದು ಬೋಗಿಗಳು ಹಳಿತಪ್ಪಿದ್ದು, ಪ್ರಯಾಣಿಕರಿಗೆ ಯಾವುದೇ ಗಾಯಗಳಾಗಿಲ್ಲ ಎಂದು ಈಶಾನ್ಯ ಗಡಿನಾಡು ರೈಲ್ವೆ ವಕ್ತಾರರು ತಿಳಿಸಿದ್ದಾರೆ. ರೈಲು ಸೈರಾಂಗ್‌ನಿಂದ ನವದೆಹಲಿಗೆ ತೆರಳುತ್ತಿದ್ದ ವೇಳೆ ಅಂದರೆ ಶನಿವಾರ ಬೆಳಗಿನ ಜಾವ 2.17ರ ಸುಮಾರಿಗೆ ಅಪಘಾತ ಸಂಭವಿಸಿದೆ ಎಂದು ಮಾಹಿತಿ ನೀಡಿದ್ದಾರೆ. ಹೊಜೈ ಜಿಲ್ಲೆಯ ಚಾಂಗ್ಜುರೈ ಪ್ರದೇಶದಲ್ಲಿ ಈ ಘಟನೆ ಸಂಭವಿಸಿದೆ. ಜಮುನಾಮುಖ್ –ಕಂಪುರ ವಿಭಾಗದ ಮೂಲಕ ಸಂಚರಿಸಬೇಕಿದ್ದ ರೈಲುಗಳು ಉತ್ತರಪ್ರದೇಶದ ಮೂಲಕ ಕಾರ್ಯ ನಿರ್ವಹಿಸುತ್ತಿವೆ ಎಂದು ನಾಗಾಂವ್ ವಿಭಾಗೀಯ ಅರಣ್ಯ ಅಧಿಕಾರಿ ಸುಹಾಶ್ ಕದಮ್ ತಿಳಿಸಿದ್ದಾರೆ.

ಬಿವಿಬಿಯಲ್ಲಿ ಜಾನಪದ ಗೀತೆಗಳ ಗಾಯನ ಮೋಡಿ



ಜನಪದ ಕಲಾವಿದ ಡಾ.ಅಪ್ಪಗೆರೆ ತಿಮ್ಮರಾಜು ಜಾನಪದ ಗೀತೆ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು, ಡಿ.20(ವಿವಿಹೆಚ್)– ಇನ್ಫೋಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ(ಬಿವಿಬಿ) ಬೆಂಗಳೂರು–ಮೈಸೂರು ಸಹಯೋಗದೊಂದಿಗೆ ಮೈಸೂರಿನ ವಿಜಯನಗರ ಮೊದಲ ಹಂತದಲ್ಲಿನ ಬಿವಿಬಿಯಲ್ಲಿ ಶನಿವಾರ ಆಯೋಜಿಸಿದ್ದ 162ನೇ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಾನಪದ ಗೀತೆಗಳ ಗಾಯನ ಮೋಡಿ ಮಾಡಿತು.

ಈ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ.ನಾಗಣ್ಣ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಜನಪದಶ್ರೀ ಡಾ.ಅಪ್ಪಗೆರೆ ತಿಮ್ಮರಾಜು ಅವರು ಮೂಲ ಜನಪದ ಗೀತೆಗಳನ್ನು ಹಾಡುವ ಮೂಲಕ ಎಲ್ಲರನ್ನು ರಂಜಿಸಿದರು. ಗೀತೆ ಗಾಯನದೊಂದಿಗೆ ಹಾಡಿಗೆ ತಕ್ಕಂತೆ ನೃತ್ಯ ಮಾಡುತ್ತಾ, ಆಗಾಗ ನಗೆ ಚಟಾಕಿ ಹಾರಿಸುತ್ತಾ ಕಾರ್ಯಕ್ರಮವನ್ನು ಮತ್ತಷ್ಟು ವಿಶಿಷ್ಟಗೊಳಿಸಿದರು. ಇವರಿಗೆ ಸಹ ಹಾಡುಗಾರರಾಗಿ ವನಿತ, ದಿವ್ಯ ಮತ್ತು ಮೇಘ ಅವರು ಸಾಥ್ ನೀಡಿ ಕಾರ್ಯಕ್ರಮವನ್ನು ಮತ್ತಷ್ಟು ವರ್ಣರಂಜಿತಗೊಳಿಸಿದರು.

ಪುಣ್ಯೇಶ್ (ಹಾರ್ಮೋನಿಯಂ), ರಘು (ತಬಲ), ಪುನೀತ್ (ಕೊಳಲು), ಕಿರಣ್ (ಡೋಲಕ್), ಗುರುದತ್ (ತಾಳ ಗೆಜ್ಜೆ) ವಾದ್ಯದಲ್ಲಿ ಮೋಡಿ ಮಾಡಿದರು. ಸತತ ಒಂದೂವರೆ ಗಂಟೆಗಳ ಕಾಲ ನಡೆದ ಜಾನಪದ ಸಂಗೀತ ಸಂಭ್ರಮ ಎಲ್ಲರ ಹುಬ್ಬೇರುವಂತೆ ಮಾಡಿತು.

ಹಳ್ಳಿ ಸೊಗಡಿನ ಮೂಲ ಹಾಡುಗಳಲ್ಲಿ ಒಂದಾದ 'ಬೆಳಗಾಗಿ ನಾನೆದ್ದು...', 'ಮೂರ್ಲೋಕದಯ್ಯ', 'ತಿಂಗಳು ಮುಳುಗಿದವೋ', 'ಕೋಲು ಕೋಲೆನ್ನ ಕೋಲೆ', 'ಶಿವನು ಭಿಕ್ಷಕ್ಕೆ ಬಂದ ನೋಡು ಬಾರೆ', 'ಬಿದಿರು ನಾನ್ಯಾರಿಗಲ್ಲದವಳು', 'ಎಲ್ಲೋ ಜೋಗಪ್ಪ ನಿನ್ನ ಅರಮನೆ', 'ಹಿಟ್ಟು ಮಾಡೆ, ಸೊಪ್ಪು ಮಾಡೆ', 'ತಿಂಗ ತಿಂಗಳೀಗು–ಚಂದ ನಂಜನಗೂಡು' ಸೇರಿದಂತೆ ಹಲವು ಜಾನಪದ ಗೀತೆಗಳನ್ನು ಹಾಡುವ ಮೂಲಕ ಸಂಗೀತ ರಸದೌತಣ ಉಣಬಡಿಸಿದರು.

ಕಾರ್ಯಕ್ರಮದಲ್ಲಿ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಡಾ. ಸಿ.ನಾಗಣ್ಣ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಡಾ. ಎ.ಟಿ.ಭಾಷ್ಯಂ, ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್, ಬಿವಿಬಿ ಮೈಸೂರು ಕೇಂದ್ರದ ಕಾರ್ಯಕಾರಿ ಸಮಿತಿ ಸದಸ್ಯರಾದ ಗಂಗಾಧರ್, ಪಿ.ಕೆ.ನಾಗಲಕ್ಷ್ಮೀ, ಪ್ರಾಂಶುಪಾಲರಾದ ಲೇಖಾ ನಾಯರ್ ಉಪಸ್ಥಿತರಿದ್ದರು.

ನಾನಾ ಸೇವಾ ಕಾರ್ಯಕ್ರಮಗಳೊಂದಿಗೆ ಕೆ.ಮರೀಗೌಡರ ಹುಟ್ಟುಹಬ್ಬ ಆಚರಣೆ





ಮೈಸೂರು, ಡಿ.20– ಜಿಲ್ಲಾ ಪಂಚಾಯ್ತಿ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಮಾಜಿ ಅಧ್ಯಕ್ಷ ಕೆ.ಮರೀಗೌಡ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ವಿವಿಧ ಸೇವಾ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಆಚರಿಸಿದರು.

ವಿವೇಕಾನಂದನಗರ ವೃತ್ತದ ಬಳಿ ಇರುವ ಶ್ರೀ ಶನಿದೇವರ ದೇವಸ್ಥಾನದಲ್ಲಿ ಕೆ ಮರೀಗೌಡರು ವಿಶೇಷ ಪೂಜೆ ಸಲ್ಲಿಸಿದರು. ನಂತರ ತುಳಿದಾಸಪ್ಪ ಹೆರಿಗೆ ಆಸ್ಪತ್ರೆಯಲ್ಲಿ ಕೆರೆಹುಂಡಿ ಮಹೇಶ್‌ಅವರಿಂದ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಈ ವೇಳೆ ಡಾ. ಅನುರಾಧ ಉಪಸ್ಥಿತರಿದ್ದರು.

ಶ್ರೀರಾಂಪುರದಲ್ಲಿರುವ ಶ್ರೀ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯಲ್ಲಿ ಕೇಕ್ ಕತ್ತರಿಸಿ ಮಕ್ಕಳಿಗೆ ಕೇಕ್ ಹಾಗೂ ಬಾಳೆ ಹಣ್ಣು ವಿತರಿಸಿ ವ್ಯಯಕ್ತಿಕವಾಗಿ ಧನ ಸಹಾಯ ಮಾಡಿದರು. ಇದೇ ಸಂದರ್ಭದಲ್ಲಿ ಶಾಲೆಯ ಸಂಸ್ಥಾಪಕ ಮಾಕಿ ಮರೀಗೌಡರು ಕೆ.ಮರೀಗೌಡರನ್ನು ಅಭಿನಂದಿಸಿದರು. ಬಂಬೂಬಜಾರ್‌ನಲ್ಲಿರುವ ಅಂಧ ಮಕ್ಕಳ ಶಾಲೆಯಲ್ಲಿ ಕಲ್ಲಂಗಡಿ ಹಣ್ಣು ಕತ್ತರಿಸಿ, ಮಕ್ಕಳಿಗೆ ಹೋಳಿಗೆ ಊಟ ಬಡಿಸಿ ಮರೀಗೌಡರು ಹುಟ್ಟುಹಬ್ಬ ಆಚರಿಸಿಕೊಂಡರು.

ರಾಮಕೃಷ್ಣನಗರ ಜಿ. ಬ್ಲಾಕ್‌ನಲ್ಲಿ ಕಾಂಗ್ರೆಸ್ ಮುಖಂಡ ಬಿ.ರವಿ ನೇತೃತ್ವದಲ್ಲಿ ಅಭಿನಂದನಾ ಕಾರ್ಯಕ್ರಮ ನಡೆಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮರೀಗೌಡರು, ನಾನು ಈ ವರ್ಷ ಹುಟ್ಟುಹಬ್ಬ ಆಚರಿಸುವುದು ಬೇಡವೆಂದು ನಿರ್ಧರಿಸಿದ್ದೆ. ಆದರೆ ಅಭಿಮಾನಿಗಳು, ಕಾರ್ಯಕರ್ತರ ಒತ್ತಾಯದಿಂದ ಸ್ನೇಹಿತರೆಲ್ಲಾ ಸೇರಿಕೊಂಡು ಹುಟ್ಟುಹಬ್ಬ ಆಚರಿಸುತ್ತಿದ್ದಾರೆ. ನನಗೆ ಅಭಿನಂದಿಸಿ ಆಶೀರ್ವದಿಸಿದ ಎಲ್ಲರಿಗೂ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ ಎಂದರು.

ಈ ವೇಳೆ ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹಾದೇವ, ಮಾಜಿ ಸದಸ್ಯ ಜವರಪ್ಪ, ತಾಪಂ ಮಾಜಿ ಅಧ್ಯಕ್ಷ ಸಿ.ಎಂ. ಸಿದ್ದರಾಮೇಗೌಡ, ಮಾರ್ಬಳ್ಳಿ ಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಬಿ.ಎಂ. ನಟರಾಜ್, ಕೇರ್ಗಳ್ಳಿ ಸಹಕಾರ ಸಂಘದ ಅಧ್ಯಕ್ಷ ಮಹಾದೇವ, ಹಿನಕಲ್ ಹೊನ್ನಪ್ಪ ನಾಡನಹಳ್ಳಿ ರವಿ, ಮಣಿಯಯ್ಯ, ಹಿನಕಲ್ ಉದಯ್, ಧನಗಳ್ಳಿ ಬಸವರಾಜು, ಅರಸನಕೆರೆ ಸ್ವಾಮಿ, ಕೆರೆಹುಂಡಿ ಮಹೇಶ್, ಸೋಮಶೇಖರ್, ಡಿ. ಸಾಲುಂಡಿ ಚಂದ್ರ, ಶಿಂಷಾ ದಿನೇಶ್, ವೆಂಕಟಯ್ಯ, ರಾಜು, ಆರೀಫ್, ಓಲೆ ಸಿದ್ದು, ಬಿ. ಗುರುಸ್ವಾಮಿ, ಹೊಸಹುಂಡಿ ರಘು, ಬೋರೇಗೌಡ ಹಾಗೂ ನೂರಾರು ಅಭಿಮಾನಿಗಳು ಹಾಜರಿದ್ದರು.



ವಾಣಿ ಕೌಟುಂಬಿಕ ಕಥಾ ಸ್ಪರ್ಧೆ

ಮೈಸೂರು: ಹಿರಿಯ ಲೇಖಕಿ ವಾಣಿ ಸ್ಮರಣೆ ಅಂಗವಾಗಿ ಲೇಖಿಕಾ ಸಾಹಿತ್ಯ ವೇದಿಕೆಯು ವಾಣಿ ಕೌಟುಂಬಿಕ ಕಥಾ ಸ್ಪರ್ಧೆ ಏರ್ಪಡಿಸಿದೆ. ಎಂಟರಿಂದ ಹತ್ತು ಪುಟಗಳ ಮಿತಿಯಲ್ಲಿ ಕಥೆಗಳನ್ನು ಡಿ.31ರೊಳಗೆ Deepa.shyam099@gmail.com ಇಲ್ಲಿಗೆ ಕಳಿಸಬಹುದು. ಹೆಚ್ಚಿನ ಮಾಹಿತಿಗೆ ಲೇಖಿಕಾ ಸಾಹಿತ್ಯ ವೇದಿಕೆಯ ಶೈಲಜಾ ಸುರೇಶ್ ಅವರನ್ನು 9916378955 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪೋಕ್ಸೋ ಕಾಯ್ದೆ ಸಂಬಂಧ ಅಪ್ರಾಪ್ತರಲ್ಲಿ ಅರಿವು ಮೂಡಿಸಬೇಕು

● ಹೈಕೋರ್ಟ್ ನ್ಯಾಯಮೂರ್ತಿ ಜಿ.ಬಸವರಾಜು ಸಲಹೆ ● 'ಲಾ ಫಾರ್ ಆಲ್' ಮಾಸ ಪತ್ರಿಕೆಯ ಕ್ಯಾಲೆಂಡರ್ ಬಿಡುಗಡೆ

ಮೈಸೂರು,ಡಿ.20(ಎಸ್‌ಪಿಎನ್)– ಪೋಕ್ಸೋ ಕಾನೂನು ಗಂಭೀರ ಮತ್ತು ಕ್ರೂರ ಕಾಯ್ದೆ. ಈ ಕಾಯ್ದೆ ಕುರಿತು ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕಿದೆ ಎಂದು ಹೈಕೋರ್ಟ್ ನ್ಯಾಯಮೂರ್ತಿ ಜಿ.ಬಸವರಾಜು ಅಭಿಪ್ರಾಯಪಟ್ಟರು.

ಮೈಸೂರು ಜಯನಗರದ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಆವರಣದಲ್ಲಿ ಪುಷ್ಕರ ಪ್ರಕಾಶನದ ವತಿಯಿಂದ ಏರ್ಪಡಿಸಿದ್ದ 'ಲಾ ಫಾರ್ ಆಲ್' ಕನ್ನಡ ಮಾಸಪತ್ರಿಕೆಯ ಡಿಸೆಂಬರ್ ಸಂಚಿಕೆ ಮತ್ತು 2026ರ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು.

ಅಪ್ರಾಪ್ತ ಮಕ್ಕಳ ರಕ್ಷಣೆಗಾಗಿ ಜಾರಿಗೆ ತಂದ ಪೋಕ್ಸೋ ಕಾಯ್ದೆ ಅತ್ಯಂತ ಕ್ರೂರವಾಗಿದೆ. ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಹಿಂಸೆ ತಡೆಗಟ್ಟುವುದೇ ಈ ಕಾಯ್ದೆಯ ಪ್ರಮುಖ ಉದ್ದೇಶವಾಗಿದೆ ಆದರೆ, ಈ ಕಾನೂನಿನ ಅರಿವಿಲ್ಲದೆ ಅಪರಾಧವೆಸಗಿ ಅದೆಷ್ಟೋ ಮಂದಿ ತಮಗರಿವಿಲ್ಲದೆಯೇ ಬಂಧಿತರಾಗುತ್ತಿದ್ದಾರೆ. ಕೆಲ ಸಂದರ್ಭಗಳಲ್ಲಿ ಪೋಕ್ಸೋ ಕಾಯಿದೆಯ ಪ್ರಕರಣದಲ್ಲಿ ನ್ಯಾಯದಾನ ಮಾಡುವ ನ್ಯಾಯಮೂರ್ತಿಗಳೇ ಇಕ್ಕಟ್ಟಿಗೆ ಸಿಲುಕುವಂತಹ ಪರಿಸ್ಥಿತಿಗಳು ಎದುರಾಗುತ್ತಿವೆ ಎಂದು ಮೂರು ಪ್ರಕರಣಗಳನ್ನು ಉಲ್ಲೇಖಿಸಿ, ತಿಳಿಸಿದರು.


ಈ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಿಗೆ ಶಿಕ್ಷೆ ಪ್ರಮಾಣವೇ ಕನಿಷ್ಟ 20 ವರ್ಷವಿದೆ. ಈ ಕಾಯ್ದೆಯಡಿಯ ಪ್ರಕರಣಗಳನ್ನು ತನಿಖಾಧಿಕಾರಿ, ವಕೀಲರು ಮತ್ತು ನ್ಯಾಯಾಧೀಶರು ಸೂಕ್ಷ್ಮವಾಗಿ ನಿರ್ವಹಣೆ ಮಾಡಬೇಕಿದೆ. ಈ ಕಾಯ್ದೆ ಕುರಿತು 12 ವರ್ಷದೊಳಗಿನ ಮಕ್ಕಳಿಗೆ ಅರಿವು ಮೂಡಿಸಬೇಕಿದೆ.

ಅಪ್ರಾಪ್ತರು ಪೋಕ್ಸೋ ಕಾಯ್ದೆಯಡಿ ಬಂಧನವಾದರೆ, ಅಂತಹವರಿಗೆ ಕಾನೂನಿನ ನೆರವು ನೀಡಬೇಕು. ಒಮ್ಮೆ ಪೋಕ್ಸೋ ಕಾಯ್ದೆಯಡಿ ಬಂಧನವಾದರೆ, ಅವರ ಜೀವನ ಹಾಳು. 17 ವರ್ಷದ ಅಪ್ರಾಪ್ತರಿಗೆ 20 ವರ್ಷ ಶಿಕ್ಷೆ ವಿಧಿಸಿದರೆ, ಶಿಕ್ಷೆ ಪೂರೈಸುವುದರೊಳಗೆ ಅವರ ಜೀವನ ಹಾಳಾಗುತ್ತದೆ. ಹಾಗಾಗಿ, ಇಂತಹ ಪ್ರಕರಣಗಳ ವಿಚಾರಣೆ ಹಂತದಲ್ಲಿ ತನಿಖೆ ವೇಳೆ ಪಾಲನೆಯಾಗದ ಕಾನೂನಿನ ವಿವರಗಳ ಬಗ್ಗೆ ಹೈಕೋರ್ಟ್‌ಗೆ ಮನವಿ ಮಾಡಬೇಕು. ಆಗ ನ್ಯಾಯದಾನಕ್ಕೂ ಸುಲಭವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಪೋಕ್ಸೋ ಕಾಯ್ದೆಯಲ್ಲಿ ನೊಂದವರು, ಆರೋಪಿ ಇಬ್ಬರು ಅಪ್ರಾಪ್ತರಾಗಿದ್ದರೆ, ಇಂತಹ ಸಂದರ್ಭದಲ್ಲಿ ಯಾವ ರೀತಿ ಕಾನೂನು ಪಾಲನೆ ಮಾಡಬೇಕೆಂಬುದು ಈ ಕಾಯ್ದೆಯಲ್ಲಿ ಉಲ್ಲೇಖವಾಗಿಲ್ಲ. ಈ ಕಾಯ್ದೆಯಲ್ಲಿನ ಲೋಪಗಳನ್ನು ಹಿರಿಯ ವಕೀಲರು ಗಮನಿಸಬೇಕು ಎಂದು ಸಲಹೆ ನೀಡಿದರು.

ನನಗೆ ಮೈಸೂರು ಎಂದರೆ ಬಲು ಇಷ್ಟ. 1993ರಿಂದ 98ವರೆಗೆ ಹಾಗೂ 2017ರಲ್ಲಿ ಇಲ್ಲಿನ ಜಿಲ್ಲಾ ನ್ಯಾಯಾಲಯದಲ್ಲಿ ಕೆಲಸ ಮಾಡಿದ್ದೇನೆ. ಇಲ್ಲಿನ ಹಿರಿಯ ವಕೀಲರು ಪರಿಚಿತರಿದ್ದಾರೆ. ಹಾಗಾಗಿ ಮೈಸೂರಿನ ಈ ಕಾರ್ಯಕ್ರಮವನ್ನು ಒಪ್ಪಿಕೊಂಡೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರಿನ ಎರಡನೇ ಹೆಚ್ಚುವರಿ ಜಿಲ್ಲಾ ನ್ಯಾಯಧೀಶರಾದ ನಾಡಗೌಡರು, 4 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಸೋಮಶೇಖರ್, ಪತ್ರಿಕೆಯ ಗೌರವ ಸಲಹೆಗಾರರರಾದ ಕೆ.ಆರ್.ಶಿವಶಂಕರ್, ಪತ್ರಿಕೆಯ ಪ್ರಧಾನ ಸಂಪಾದಕ ಕೆ.ಬಿ.ಸುರೇಶ್ ಉಪಸ್ಥಿತರಿದ್ದರು.



'ಲಾ ಫಾರ್ ಆಲ್' ಕನ್ನಡ ಮಾಸಪತ್ರಿಕೆಯ ಡಿಸೆಂಬರ್ ಸಂಚಿಕೆ ಮತ್ತು 2026ರ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಅಪ್ರಾಪ್ತರ ಕೈಗೆ ವಾಹನ ಕೊಡಬೇಡಿ

ಮೈಸೂರು ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್

ಮೈಸೂರು, ಡಿ. 20 (ಆರ್‌ಕೆ)– ತಮ್ಮ ಅಪ್ರಾಪ್ತ ಮಕ್ಕಳಿಗೆ ಚಾಲನೆ ಮಾಡಲು ವಾಹನವನ್ನು ಕೊಡಬೇಡಿ ಎಂದು ಪೋಷಕರಿಗೆ ಮೈಸೂರು ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಪಿ.ನಗರದ ಅಕ್ಕ ಮಹಾದೇವಿ ರಸ್ತೆಯಲ್ಲಿ ಅಪ್ರಾಪ್ತನೋರ್ವ ವಾಹನ ಚಾಲನೆ ಮಾಡುತ್ತಿರುವುದನ್ನು ಗಮನಿಸಿದ ಕೆ.ಆರ್.ಸಂಚಾರ ಠಾಣೆ ಸಬ್‌ಇನ್ಸ್‌ಪೆಕ್ಟರ್ ಕೆ.ಎಸ್. ಗಣೇಶ್ ಅವರು ನೋಟಿಸ್ ಜಾರಿ ಮಾಡಿ ಪ್ರಕರಣ ದಾಖಲಿಸಿದ್ದರು. ಆ ಕುರಿತು ಠಾಣೆಯಿಂದ ವರದಿ ತರಿಸಿಕೊಂಡಿದ್ದ ಮೈಸೂರಿನ 2ನೇ ಜೆಎಂಎಫ್‌ಸಿ ನ್ಯಾಯಾಲಯವು ವಾಹನ ಮಾಲೀಕರಾದ ಪೋಷಕರಿಗೆ 25 ಸಾವಿರ ರೂ ದಂಡ ವಿಧಿಸಿದ್ದ ಪ್ರಕರಣ ಸಂಬಂಧ ಪೊಲೀಸ್ ಕಮಿಷನರ್ ಇಂದು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದರು.

ಚಾಲನಾ ಪರವಾನಗಿ ಇಲ್ಲದೆ ಅಪ್ರಾಪ್ತರು ವಾಹನ ಚಾಲನೆ ಮಾಡಿದಾಗ ಸಂಭವಿಸುವ ಅಪಘಾತದಲ್ಲಿ ಅಪ್ರಾಪ್ತರಷ್ಟೇ ಅಲ್ಲದೇ ಏನೂ ತಪ್ಪು ಮಾಡದ ಮುಗ್ಧ ಪಾದಚಾರಿಗಳು, ವಾಹನ ಸವಾರರಿಗೆ ತೊಂದರೆಯಾಗುತ್ತದೆ. ಕೆಲವರು ಅಮೂಲ್ಯ ಪ್ರಾಣ ಕಳೆದುಕೊಂಡರೆ, ಮತ್ತೆ ಕೆಲವರು ಶಾಶ್ವತ ಅಂಗವಿಕಲರಾಗಿ ಜೀವನ ಪರ್ಯಂತ ನರಳಬೇಕಾಗುತ್ತದೆ ಎಂದು ಸೀಮಾ ಲಾಟ್ಕರ್ ನುಡಿದರು.




ಜೊತೆಗೆ ಮಕ್ಕಳು ಮಾಡುವ ತಪ್ಪಿಗೆ ಕಾನೂನಿನ ಪ್ರಕಾರ ವಾಹನದ ಮಾಲೀಕರು ದಂಡ ಕಟ್ಟಬೇಕಾಗುತ್ತದೆ. ಅಲ್ಲದೇ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅದಕ್ಕೆ ಮೈಸೂರಿನಲ್ಲಿ ನಡೆದ ಎರಡು ಉದಾಹರಣೆಗಳನ್ನು ನೀಡಿದ್ದಾರೆ. ಐದು ವರ್ಷಗಳ ಹಿಂದೆ ಬೇಸಿಗೆ ರಜೆ ಕಳೆಯಲೆಂದು ಮೈಸೂರಿನ ಅಜ್ಜಿ ಮನೆಗೆ ಬಂದಿದ್ದ ಬಾಲಕನೋರ್ವ ದ್ವಿಚಕ್ರ ವಾಹನ ಓಡಿಸುವಾಗ ನಿಯಂತ್ರಣ ಕಳೆದುಕೊಂಡು ದಟ್ಟಗಳ್ಳಿ ಬಳಿಯ ಮರವೊಂದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹೆಲ್ಮೆಟ್ ಧರಿಸದೆ ಇದ್ದುದ್ದರಿಂದ ಆತನ ತಲೆಗೆ ತೀವ್ರ ಗಾಯವಾಗಿ ಸಾವನ್ನಪ್ಪಿದ. ಅದೇ ರೀತಿ ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ದಂಡಿ ಮಾರಮ್ಮ ದೇವಸ್ಥಾನದ ಬಳಿ, ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಅಪ್ರಾಪ್ತನೋರ್ವ ಕಾರು ಚಾಲನೆ ಮಾಡುವಾಗ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್‌ನಲ್ಲಿದ್ದ ಮಗು, ತಂದೆ–ತಾಯಿ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೊಂದು ಮಗು ಪ್ರಾಣಾಪಾಯದಿಂದ ಪಾರಾಗಿತ್ತು.

ಸಾರ್ವಜನಿಕರು ಸಂಚಾರ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಅಪಘಾತಗಳನ್ನು ತಪ್ಪಿಸಿ, ಹಲವರ ಅಮೂಲ್ಯ ಪ್ರಾಣವನ್ನು ರಕ್ಷಿಸಬೇಕು. ನಮಗೆ ದಂಡ ವಸೂಲಿ ಮಾಡುವುದು ಮುಖ್ಯವಾಗುವುದಿಲ್ಲ ಬದಲಾಗಿ ನಾಗರಿಕರ ಪ್ರಾಣ ರಕ್ಷಣೆ ಹಾಗೂ ಸುಗಮ ಸಂಚಾರ ನಿಯಮ ಪಾಲಿಸುವುದು ಅತಿಮುಖ್ಯವಾಗಿರುತ್ತದೆ ಎಂದು ಸೀಮಾ ಲಾಟ್ಕರ್ ಅಭಿಪ್ರಾಯಪಟ್ಟರು.

ಮೈಸೂರು ನಗರದಾದ್ಯಂತ ಎಲ್ಲಾ ಸಂಚಾರ ಠಾಣಾ ವ್ಯಾಪ್ತಿಗಳಲ್ಲಿ ಕಳೆದ 1 ವರ್ಷದಲ್ಲಿ ತಲಾ 10 ಮಂದಿ ಅಪ್ರಾಪ್ತರು ವಾಹನ ಚಾಲನೆ ಮಾಡಿದ ಸಂಬಂಧ ಪ್ರಕರಣ ದಾಖಲಾಗಿದ್ದು, ದಂಡ ಪಾವತಿ ಮಾಡಿದ್ದಾರೆ. ಪ್ರತಿ ವರ್ಷ ಈ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ವಿಚಾರ ಎಂದು ಮೈಸೂರು ನಗರ ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಆಧುನಿಕ ಕಾಲಕ್ಕೆ ತಕ್ಕಂತೆ ಮನ್ರೇಗಾ ನವೀಕರಣ

ಕೇಂದ್ರದ ಪ್ರತಿ ಕೆಲಸದಲ್ಲೂ ಗಾಂಧೀಜಿ ಆದರ್ಶವಿದೆ





ಮೈಸೂರು, ಡಿ.20(ಜಿಎ)–ಕಾಂಗ್ರೆಸ್ ಆರೋಪಕ್ಕೆ ಏನೂ ಬೆಲೆಯಿಲ್ಲ. ಮನ್ರೇಗಾ ಈಗಿನ ಆಧುನಿಕ ಕಾಲಕ್ಕೆ ತಕ್ಕ ನವೀಕರಣ ಆಗಬೇಕಿತ್ತು. ಈ ಹೊಸ ನಿಯಮದ ಮೂಲಕ ಹೊಸ ಉದ್ಯೋಗ ಕೊಡುವ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಕೆಲಸ ಮಾಡಿದೆ ಎಂದು ಸಂಸದ ಯಧುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮರ್ಥಿಸಿಕೊಂಡಿದ್ದಾರೆ.

ಮೈಸೂರಿನಲ್ಲಿ ಮನ್ರೇಗಾ ಹೆಸರು ಸೇರಿ ವಿವಿಧ ನಿಯಮ ಬದಲಿಸಿ ಮಸೂದೆ ಜಾರಿಗೊಳಿಸಿರುವ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬದಲಾವಣೆಯಿಂದ ಪ್ರತಿ ವಾರವೂ ಸಹ ಕೂಲಿ ಕಾರ್ಮಿಕರಿಗೆ ಸಂಬಳ ಹೋಗಲಿದೆ. ಹಿಂದೆ ಕಾಮಗಾರಿ ಬಳಿಕ ಕೊಡುತ್ತಿದ್ದರು. ಈಗ ಅದು ಬದಲಾಗಿದೆ. ಜತೆಗೆ ಕೃಷಿ ಚಟುವಟಿಕೆ ಸಂದರ್ಭದಲ್ಲಿ ಮೈದಾನದ ಕೆಲಸ ಬಿಟ್ಟು ಹೋಗಬಹುದು. ಜತೆಗೆ ತಂತ್ರಜ್ಞಾನಕ್ಕೂ ಅನುಗುಣವಾಗಿ ತಕ್ಕ ಮಸೂದೆಯನ್ನು ಅನುಷ್ಠಾನ ಮಾಡಿದ್ದಾರೆ. ಇದರಿಂದ ಎಲ್ಲರಿಗೂ ಅನೂಕೂಲ ಆಗಲಿದೆ. ಕಾಂಗ್ರೆಸ್ ಮಾತಿಗೆ ಬೆಲೆ ಕೊಡುವ ಅಗತ್ಯವಿಲ್ಲ. ನಮ್ಮ ಕಾಲಕ್ಕೆ ಏನೂ ಮಾಡಬೇಕು ಅದನ್ನು ಮಾಡಿದ್ದೇವೆ. ಹೊಸ ಯೋಜನೆ ಹೊಸ ಭಾರತಕ್ಕೆ ಅನೂಕೂಲವಾಗುವ ಹೊಸ ಮಸೂದೆಯಾಗಿದೆ ಎಂದರು.

ಮಹಾತ್ಮಗಾಂಧಿ ಎಲ್ಲರ ಹೃದಯದಲ್ಲೂ ಸದಾ ಇರುವ ವ್ಯಕ್ತಿಯಾಗಿದ್ದಾರೆ. ಎಲ್ಲಾ ಕೆಲಸದಲ್ಲಿಯೂ ಅವರ ಆದರ್ಶಗಳು ಇವೆ ಎಂಬುದು ನಮ್ಮ ನಂಬಿಕೆಯಾಗಿದೆ. ಪಿಎಂ ಆವಾಸ್, ಜಲಜೀವನ್‌ನಲ್ಲಿ ಅವರ ಆದರ್ಶಗಳಿವೆ. ಪಿಎಂ ಮುದ್ರಾ ಯೋಜನೆ ಸೇರಿ ಅನೇಕ ಯೋಜನೆಗಳಲ್ಲಿ ಅವರ ಆದರ್ಶಗಳಿವೆ. ವಿಕಸಿತ ಭಾರತದ ಗುರಿಯೇ ಗಾಂಧಿಯವರ ಆದರ್ಶದೊಂದಿಗೆ ನಡೆಯುತ್ತಿರುವುದಾಗಿದೆ ಎಂದರು.

ಮೈಸೂರು–ಕೊಡಗು ಕ್ಷೇತ್ರದ ಅಭಿವೃದ್ಧಿಗೆ ವಿಚಾರವಾಗಿ ಪ್ರತಿಕ್ರಿಯಿಸಿ, ಅನೇಕ ಯೋಜನೆಗಳ ಬಗ್ಗೆ ಕೇಂದ್ರದಲ್ಲಿ ನಿರಂತರವಾಗಿ ನಮ್ಮ ಬೇಡಿಕೆಯಿದೆ. ವಿಕಸಿತ ಭಾರತದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ನಿರಂತರ ಅಭಿವೃದ್ಧಿ ಕಾರ್ಯ ನಡೆಯುತ್ತಿವೆ. ಅದರಲ್ಲೂ ಕುಶಾಲನಗರ ಹೆದ್ದಾರಿ ಮಾಡಲೂ ಏನೆಲ್ಲಾ ಅನುಮತಿ ಬೇಕು ಮಾಡಬಹುದು ಎಲ್ಲವನ್ನೂ ಮಾಡಲಾಗಿದೆ. ಮಾರ್ಚ್ 2027ರೊಳಗೆ ಸದರಿ ರಸ್ತೆ ಪೂರ್ಣಗೊಳಿಸಲಿದ್ದೇವೆ. ಒಂದೆರಡು ವಾರಗಳಲ್ಲಿ ಕೇಂದ್ರಕ್ಕೆ ಭೂಮಿ ಹಸ್ತಾಂತರ ಪ್ರಕ್ರಿಯೆಯೂ ಪೂರ್ಣಗೊಳ್ಳುವ ಮೂಲಕ ಮೈಸೂರು ವಿಮಾನ ನಿಲ್ದಾಣ ವಿಸ್ತರಣೆ ಅಭಿವೃದ್ಧಿ ಕಾರ್ಯ ಚುರುಕಾಗಲಿದೆ ಎಂದರು.

ಭಾರತೀಯ ಭಾಷಾ ಸಂಸ್ಥಾನದಲ್ಲಿರುವ ಕನ್ನಡ ಶಾಸ್ತ್ರೀಯ ಭಾಷಾ ಸಂಸ್ಥಾನವನ್ನು ಪ್ರತ್ಯೇಕಗೊಳಿಸಿ ಅಭಿವೃದ್ಧಿ ಮಾಡುವ ಬಗ್ಗೆಯೂ ಕ್ರಮವಹಿಸಲಾಗಿದೆ. ಮೈಸೂರಲ್ಲೂ ಇಕೋ ಟೂರಿಸಂ ಜೋನ್ ಅಡಿಯಲ್ಲಿ ಮೃಗಾಲಯದ ಸಮೀಪದ ಪ್ರವಾಸೋದ್ಯಮ ಅಭಿವೃದ್ಧಿಗೆ ಯೋಜನೆ ತಂದಿದ್ದೇವೆ. ಟಾಂಗಾ ಮೂಲಕ ಮೈಸೂರನ್ನು ನೋಡುವುದು ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ನೀಡಲಾಗಿದೆ. ಹಳೆಯ ಡಿಸಿ ಕಚೇರಿಯಾದ ಅಠಾರ ಕಚೇರಿ ಭಾರತದ ಪ್ರಥಮ ಅಧಿವೇಶನ ಮಾಡಿದ್ದೇವೆ. ಸಂಗ್ರಹಾಲಯ ಮಾಡುವುದಕ್ಕೂ ಮನವಿ ಮಾಡಲಾಗಿದೆ ಎಂದು ವಿವರಿಸಿದರು.

ರಾಜ್ಯಾದ್ಯಂತ ಇಂದಿನಿಂದ ಡಿ.24ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ

ಬೆಂಗಳೂರು: ದೇಶವನ್ನು ಪೋಲಿಯೋ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಕರ್ನಾಟಕದಾದ್ಯಂತ ನಾಳೆ (ಡಿ.21)ಯಿಂದ ಡಿ.24 ರವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ–2025 ಆರಂಭವಾಗಲಿದೆ.



ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸುವಂತೆ ಕರ್ನಾಟಕ ಆರೋಗ್ಯ ಇಲಾಖೆ ಪೋಷಕರಿಗೆ ಮನವಿ ಮಾಡಿದೆ.

ಪೋಲಿಯೋ ಮಾರಕರೋಗವಾಗಿದ್ದು, ಮಕ್ಕಳಲ್ಲಿ ಶಾಶ್ವತ ಅಂಗವೈಕಲ್ಯವನ್ನು ಉಂಟು ಮಾಡಬಹುದು. ಈ ರೋಗಕ್ಕೆ ಯಾವುದೇ ಚಿಕಿತ್ಸೆ ಇಲ್ಲದಿದ್ದರು ಲಸಿಕೆ ಮೂಲಕ ಇದನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯವಿದೆ. ಎರಡು ಹನಿ ಲಸಿಕೆ ನಿಮ್ಮ ಮಗುವಿನ ಭವಿಷ್ಯವನ್ನು ನಿರ್ಧರಿಸಲಿದೆ ಎಂಬ ಘೋಷ ವಾಕ್ಯದಡಿ ಸರ್ಕಾರ ಅಭಿಯಾನಕ್ಕೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಹತ್ತಿರದ ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ಬಸ್, ರೆಲ್ವೆ ನಿಲ್ದಾಣಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಮೊದಲ ದಿನ ಕೇಂದ್ರಗಳಲ್ಲಿ ಲಸಿಕೆ ನೀಡಲಾಗುತ್ತದೆ. ಬಳಿಕ ಎರಡು ದಿನ ಆರೋಗ್ಯ ಇಲಾಖೆ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಲಸಿಕೆ ಪಡೆಯದ ಮಕ್ಕಳಿಗೆ ಲಸಿಕೆ ನೀಡುತ್ತಾರೆ.

ಇಂದಿನಿಂದ ವಸ್ತುಪ್ರದರ್ಶನದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ಡಿ.20–ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದಿಂದ ಸಾಂಸ್ಕೃತಿಕ ಉಪಸಮಿತಿಯವರು ಡಿ.21ರಿಂದ 28ರವರೆಗೆ ಗಾನಕೋಗಿಲೆ ಪಿ.ಕಾಳಿಂಗ ರಾವ್ ರಂಗಮಂಟಪದಲ್ಲಿ ವಿವಿಧ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಬಿಜಾಪುರದ ಆದಿಶಕ್ತಿ ನಾಟ್ಯ ಸಂಘದ ಜೂನಿಯರ್ಸ್ ಕಲಾವಿದರಿಂದ ಡಿ.21ರಂದು ಸಂಜೆ 6 ಗಂಟೆಯಿಂದ ರಾತ್ರಿ 10 ರವರೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಸಂತ ಹಾಗೂ ತಂಡದವರಿಂದ ಡಿ.22 ರಂದು ಸಂಜೆ 5ರಿಂದ ರಾತ್ರಿ 7ರವರೆಗೆ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಕುರಿತು–ನಾಟಕ ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು ಕಾರ್ಯಕ್ರಮ ನಡೆಯಲಿದೆ. ಸಂಜೆ 7ರಿಂದ 8.30ರವರೆಗೆ ಮ್ಯಾಜಿಕ್ ಷೋ ಅಂಡ್ ಮಾತನಾಡುವ ಗೊಂಬೆ ಪ್ರದರ್ಶನ, 8–30 ರಿಂದ ರಾತ್ರಿ 9–30 ರವರೆಗೆ ರಶ್ಮಿರಾವ್ ಮತ್ತು ತಂಡದವರಿಂದ ಜನಪದ ಗೀತೆ ಕಾರ್ಯಕ್ರಮಗಳು ನಡೆಯಲಿವೆ. ಡಿ.23ರಂದು ಸಂಜೆ 7ರಿಂದ ರಾತ್ರಿ 9.30ರವರೆಗೆ ಮಧುರ ಸಂಗಮ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಡಿ.24ರಂದು ಸಂಜೆ 7ರಿಂದ ರಾತ್ರಿ 9.30ರವರೆಗೆ ತನ್ವೀರ್ ಉಲ್ ಇಸ್ಲಾಂ ಸ್ಕೂಲ್ ಅಂಡ್ ಟೀಮ್ ಮೈಸೂರು ಅವರಿಂದ ದಫ್ ಕಾರ್ಯಕ್ರಮವನ್ನು ನಡೆಯಲಿದೆ.

ಡಿ.23ಕ್ಕೆ ನರೆಡ್ಕೋ ಮೈಸೂರು ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ

ಮೈಸೂರು, ಡಿ.20(ಎಂಟಿವೈ)– ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿರುವ ಹೋಟೆಲ್ ಅಟ್ಮಾಸ್ಪಿಯರ್ ಸಭಾಂಗಣದಲ್ಲಿ ಡಿ.23ರಂದು ಸಂಜೆ 5.30ಕ್ಕೆ ರಾಷ್ಟ್ರೀಯ ರಿಯಲ್ ಎಸ್ಟೇಟ್ ಅಭಿವೃದ್ಧಿ ಪರಿಷತ್‌ನ(ನರೆಡ್ಕೋ) ಮೈಸೂರು ಘಟಕದ 2025–27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜರುಗಲಿದೆ ಎಂದು ಆಡಳಿತ ಮಂಡಳಿ ಸದಸ್ಯ ಎನ್.ದಿವ್ಯೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಿಯಲ್ ಎಸ್ಟೇಟ್ ಸಂಸ್ಥೆಯಾಗಿರುವ ನರೆಡ್ಕೋ ಸಂಸ್ಥೆಯ ಮೈಸೂರು ಘಟಕಕ್ಕೆ ನೂತನವಾಗಿ ಪದಾಧಿಕಾರಿಗಳ ಆಯ್ಕೆಯಾಗಿದ್ದು, ಡಿ.23ರಂದು ಸಂಜೆ 5.30ಕ್ಕೆ ನಡೆಯುವ ಪದಗ್ರಹಣ ಸಮಾರಂಭದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಂಸದ ಯದುವೀರ್ ಒಡೆಯರ್, ಶಾಸಕ ರಮೇಶ್ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್, ಮಧು ಮಾದೇಗೌಡ, ನರೆಡ್ಕೋ ರಾಷ್ಟ್ರೀಯ ಘಟಕದ ಮಾಜಿ ಅಧ್ಯಕ್ಷ ಜಿ.ಹರಿಬಾಬು ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ಕಾರ್ಮಿಕರ ಕೊರತೆ ಎದ್ದು ಕಾಣುತ್ತಿದೆ. ಹೀಗಾಗಿ ದೊಡ್ಡ ದೊಡ್ಡ ನಗರಗಳಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಅನುಸರಿಸುತ್ತಿರುವ ನೂತನ ತಂತ್ರಜ್ಞಾನ, ನಿರ್ಮಾಣ ಕ್ಷೇತ್ರದಲ್ಲಿನ ಬೆಳವಣಿಗೆ, ಗ್ರೇಟರ್ ಮೈಸೂರು ಹಿನ್ನೆಲೆಯಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಆಗಬಹುದಾದ ಬೆಳವಣಿಗೆ, ನಿಗದಿತ ಅವಧಿಯೊಳಗೆ ಯೋಜನೆಗಳನ್ನು ಪೂರ್ಣಗೊಳಿಸುವುದು ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯರಿಗೆ ಕಾರ್ಯಾಗಾರ, ವಿಚಾರ ಸಂಕಿರಣ ಆಯೋಜಿಸುತ್ತಾ ಬಂದಿರುವುದಾಗಿ ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ನರೆಡ್ಕೋ ಅಧ್ಯಕ್ಷ ಡಾ.ರಾಘವೇಂದ್ರಪ್ರಸಾದ್, ಚೇರ್ಮನ್ ರವಿಕುಮಾರ್, ಉಪಾಧ್ಯಕ್ಷ ಎ.ಪಿ.ನಾಗೇಶ, ಜಂಟಿ ಕಾರ್ಯದರ್ಶಿ ನಂಜುಂಡಸ್ವಾಮಿ, ಆಡಳಿತ ಮಂಡಳಿಯ ಎಂ.ವಿ.ರಾಮಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಡಿ.23, ಕುಣಿಗಲ್‌ನಲ್ಲಿ ರೈತಪರ್ವ ಸಂಘಟನೆಯ ವಾರ್ಷಿಕೋತ್ಸವ

ಮೈಸೂರು, ಡಿ.20(ಎಂಟಿವೈ)– ತುಮಕೂರು ಜಿಲ್ಲೆ ಕುಣಿಗಲ್‌ನ ದಿವ್ಯ ಕನ್ವೆನ್ಷನ್ ಹಾಲ್‌ನಲ್ಲಿ ಡಿ.23ರಂದು ಮಧ್ಯಾಹ್ನ 11ಕ್ಕೆ ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ಸಂಘಟನೆಯ 5ನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ, ವಿಶ್ವ ರೈತ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಉಮಾಪತಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವ ಸಂಘಟನೆ ಸ್ಥಾಪನೆಯಾಗಿ 5 ವರ್ಷ ಯಶಸ್ವಿಯಾಗಿ ಪೂರ್ಣಗೊಂಡಿದೆ. ವಾರ್ಷಿಕೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರು, ಸಮಾಜ ಸೇವಕರು, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಗಳಲ್ಲಿ ಹೆಚ್ಚು ಅಂಕ ಗಳಿಸಿದ ರೈತರ ಮಕ್ಕಳು, ರೈತರನ್ನು ಸನ್ಮಾನಿಸಲಾಗುವುದು. ಕಾರ್ಯಕ್ರಮದ ಅಂಗವಾಗಿ ಪ್ರವಾಸಿ ಮಂದಿರದಿಂದ ಟ್ರ್ಯಾಕ್ಟರ್, ಜೆಸಿಬಿ ಹಾಗೂ ಎತ್ತಿನ ಗಾಡಿಗಳ ಅದ್ದೂರಿ ಮೆರವಣಿಗೆ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ರೈತ ಸಂಘ ರೈತ ಪರ್ವ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಅರುಣ್ ಕುಮಾರ್, ರಾಜ್ಯ ಕಾರ್ಯದರ್ಶಿ ಚಾಮರಾಜು, ಮಲ್ಲೇಶ್, ಕೃಷ್ಣನಾಯಕ ಇದ್ದರು.

ಪಿಎಚ್.ಡಿ ಪದವಿ



ಮೈಸೂರು: ಡಾ.ಹೆಚ್.ಎಂ. ವರದರಾಜು ಅವರ ಮಾರ್ಗದರ್ಶನದಲ್ಲಿ ಹೆಚ್.ಎಸ್. ರೋಹಿತ್ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸಾಕ್ಷ್ಯಚಿತ್ರ ತೆಗೆಯುವ ಮುನ್ನ ಕಾಡಿನ ಅರಿವಿರಬೇಕು

ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಸೇನಾನಿ ಅಭಿಮತ



ಮೈಸೂರು ವಿವಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಶನಿವಾರ ನಡೆದ 3ನೇ ದಿನದ ಕಾರ್ಯಾಗಾರದಲ್ಲಿ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ ಸೇನಾನಿ ಪಾಲ್ಗೊಂಡಿದ್ದರು.

ಮೈಸೂರು,ಡಿ.20–ವನ್ಯಜೀವಿ ಛಾಯಾಗ್ರಹಣ ಹಾಗೂ ಸಾಕ್ಷ್ಯಚಿತ್ರ ತಯಾರಕನಾಗುವ ಮೊದಲು ಕಾಡಿನ ಭಾಷೆ ಅದರ ನಾಡಿಮಿಡಿತವನ್ನು ಚೆನ್ನಾಗಿ ಅರಿತುಕೊಂಡಿರಬೇಕು ಎಂದು ಪರಿಸರ ಹಾಗೂ ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ್ ಸೇನಾನಿ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಶನಿವಾರ ನಡೆದ 3ನೇ ದಿನದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ಕೃಪಾಕರ್ ಸೇನಾನಿ ಅವರು, 'ವೈಲ್ಡ್ ಲೈಫ್ ಡಾಕ್ಯುಮೆಂಟರಿ ಮೇಕಿಂಗ್' ವಿಷಯ ಕುರಿತು ತಿಳಿಸಿಕೊಟ್ಟರು.

ಪತ್ರಿಕೋದ್ಯಮದ ಅತ್ಯಂತ ಪ್ರಮುಖ ಅಂಶವೆಂದರೆ ಪ್ರಶ್ನೆಗಳನ್ನು ಕೇಳುವುದು. ಅದರಲ್ಲೂ ಸರಿಯಾದ ಪ್ರಶ್ನೆಗಳನ್ನು ಕೇಳುವ ಮೂಲಕವೇ ನೈಜ ಮಾಹಿತಿಯನ್ನು ಹೊರತರಲು ಸಾಧ್ಯ. ವನ್ಯಜೀವಿ ಛಾಯಾಗ್ರಹಣ ಹಾಗೂ ಸಾಕ್ಷ್ಯಚಿತ್ರ ತಯಾರಿಸಲು ಹೊರಟವರಿಗೆ ಕಾಡಿನ ಭಾಷೆ ಅರಿತುಕೊಳ್ಳುವುದೇ ಮೊದಲ ಅರ್ಹತೆ ಎಂದರು.

ವನ್ಯಜೀವಿ ಚಿತ್ರೀಕರಣದಲ್ಲಿ ಲೈಟ್, ಲೆನ್ಸ್ ಸೇರಿದಂತೆ ಅಗತ್ಯ ಉಪಕರಣಗಳ ಬಳಕೆ ಅಗತ್ಯ. ಅವುಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸುವುದು ಹಾಗೂ ಅಭಿವೃದ್ಧಿಪಡಿಸಲಾದ ಉಪಕರಣಗಳ ಬಗ್ಗೆ ಮಾಹಿತಿ ಹೊಂದಿರಬೇಕು. ನಾವೂ ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಉನ್ನತ ತಂತ್ರಾಂಶಗಳನ್ನು ಅಳವಡಿಸಿಕೊಂಡು ಉತ್ತಮ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಬೇಕು ಎಂದು ಸಲಹೆ ನೀಡಿದರು.

ಕಾಡಿನ ಭಾಷೆ ಮತ್ತು ಮೌನ: ಒಬ್ಬ ವನ್ಯಜೀವಿ ಚಿತ್ರನಿರ್ಮಾಪಕ ಎಲ್ಲಕ್ಕಿಂತ ಮೊದಲು ಕಾಡಿನ ಮೌನವನ್ನು ಆಲಿಸಬೇಕು. ನಂತರ ಆ ಮೌನಭಾಷೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಇದು ಚಿತ್ರೀಕರಣಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ ಎಂದು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಂತರ ಕಾರ್ಯಾಗಾರದಲ್ಲಿ ನ್ಯೂಸ್ 1st(ಫಸ್ಟ್) ವಾಹಿನಿಯ ಮೈಸೂರು ವರದಿಗಾರ ರವಿ ಪಾಂಡವಪುರ, ದೂರದರ್ಶನದಲ್ಲಿ ಸ್ಕ್ರಿಪ್ಟ್ ಬರವಣಿಗೆ, ತಂತ್ರಾಂಶ ಬಳಕೆ, ವಿಶೇಷ ವರದಿ, ಗ್ರೌಂಡ್ ರಿಪೋರ್ಟ್, ವಿಷಯಗಳ ಗೌಪ್ಯತೆ, ಎದುರಾಗಬಹುದಾದ ಸವಾಲುಗಳ ನಿವಾರಣೆ ಇನ್ನಿತರ ವಿಚಾರಗಳ ಬಗ್ಗೆ ವಿವರಿಸಿದರು.

ಕಾರ್ಯಾಗಾರದಲ್ಲಿ ವಿಭಾಗದ ಮುಖ್ಯಸ್ಥೆ ಪ್ರೊ.ಮಮತ, ಪ್ರಾಧ್ಯಾಪಕರಾದ ಪ್ರೊ.ನಿರಂಜನ, ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಅಥಿತಿ ಉಪನ್ಯಾಸಕರಾದ ಡಾ.ಕುಮಾರಸ್ವಾಮಿ, ಡಾ.ಬಿ.ಸಿ.ಸಂಜಯ್, ಸಂಶೋಧಕರು, ವಿದ್ಯಾರ್ಥಿಗಳು ಹಾಗೂ ವಿಭಾಗದ ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ನಗರಪಾಲಿಕೆ ಖಾಯಂ, ಗುತ್ತಿಗೆ ಪೌರಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ವಿಜಯ್ ನಿಧನ



ಮೈಸೂರು, ಡಿ.20–ಮೈಸೂರಿನ ಸಿಲ್ಕ್ ಫ್ಯಾಕ್ಟರಿ ಬಳಿ ಇರುವ ರಾಜೀವ್ ಗಾಂಧಿ ಕಾಲೋನಿ ನಿವಾಸಿ, ಮೈಸೂರು ಮಹಾನಗರಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ, ದೇವರಾಜ ಮಾರುಕಟ್ಟೆ ಪೌರಕಾರ್ಮಿಕ ಸ್ಯಾನಿಟರಿ ಸೂಪರ್‌ವೈಸರ್ ಆದ ಆರ್.ವಿಜಯ್ (44) ಶನಿವಾರ ನಿಧನರಾದರು. ಮೃತರು ತಾಯಿ, ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿದ್ಯಾರಣ್ಯಪುರಂನಲ್ಲಿರುವ (ಸ್ಟರ್ಲಿಂಗ್ ಮುಂಭಾಗ) ರುದ್ರಭೂಮಿಯಲ್ಲಿ ಭಾನುವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ವಿಜಯಲಕ್ಷ್ಮೀ

ಮೈಸೂರಿನ ಕ್ಯಾತಮಾರನಹಳ್ಳಿಯ 14ನೇ ಕ್ರಾಸ್ ನಿವಾಸಿ ಲೇಟ್ ಸಿದ್ದಯ್ಯನವರ ಪತ್ನಿ ವಿಜಯಲಕ್ಷ್ಮೀ (80) ಶುಕ್ರವಾರ ಸಂಜೆ ಕೆ.ಆರ್.ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನ ರಾದರು. ಮೃತರು ಓರ್ವ ಪುತ್ರ ರೂಪೇಶ್, ಪುತ್ರಿಯರಾದ ರಶ್ಮಿ, ಲತಾ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 1 ಗಂಟೆಗೆ ಕ್ಯಾತಮಾರನಹಳ್ಳಿಯ ಸ್ಮಶಾನದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೃಷ್ಣಮ್ಮ




ಮೈಸೂರಿನ ಮದೇವಪುರ ನಿವಾಸಿ ಹಾಗೂ ಇಟ್ಟಿಗೆಗೂಡಿನ ಲೇಟ್ ಕೆಇಬಿ ಲಿಂಗಣ್ಣನವರ ಪತ್ನಿ, ನಿವೃತ್ತ ನರ್ಸ್ ಶ್ರೀಮತಿ ಕೃಷ್ಣಮ್ಮ(82) ಅವರು ನಿನ್ನೆ ಬೆಳಿಗ್ಗೆ ನಿಧನರಾದರು. ಮೃತರು ಪುತ್ರರಾದ ಎಂ.ಎಲ್.ಶಿವಪ್ರಕಾಶ್ (ಸಂದೇಶ್ ದಿ ಪ್ರಿನ್ಸ್ ಪಿಆರ್‌ಓ), ಎಂಎಲ್. ಶೇಖರ್, ಪುತ್ರಿಯರಾದ ಮಂಜುಳಾ, ಸರೋಜ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರು ಹೊಳೆನರಸೀಪುರ ತಾಲೂಕು ಹಳೇಕೋಟೆ, ಮಂಡ್ಯ ಜಿಲ್ಲೆಯ ದರಸಗುಪ್ಪೆ, ಕಿಕ್ಕೇರಿಗಳಲ್ಲಿ ಸೇವೆ ಸಲ್ಲಿಸಿದ್ದರು. ಇವರ ಅಂತ್ಯಕ್ರಿಯೆ ನಿನ್ನೆ ಸಂಜೆಯೇ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಬಿ.ಜಯರಾಮು



ಮೈಸೂರು ತಾಲೂಕು ಕಸಬಾ ಹೋಬಳಿ ನಾಗನಹಳ್ಳಿ ಗ್ರಾಮದ ಎನ್.ಬಿ.ಜಯರಾಮು (64) ಅವರು ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು, ಸ್ನೇಹಿತರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ನಾಳೆ (ಭಾನುವಾರ) ಬೆಳಿಗ್ಗೆ 11 ಗಂಟೆಗೆ ನಾಗನಹಳ್ಳಿಯಲ್ಲಿ ನೆರವೇರಿಸಲಾಗುವುದು ಎಂದು ಅವರ ಕುಟುಂಬ ವರ್ಗ ತಿಳಿಸಿದೆ.



ಅಡಿಗೆ ಶ್ರೀನಿವಾಸ್ (ಬೇಡಿ)

ಮೈಸೂರು ಕೆ.ಜಿ.ಕೊಪ್ಪಲು–ಜಯನಗರ ನಿವಾಸಿ ಜವನಪ್ಪ ಚಿಕ್ಕಲಿಂಗಯ್ಯನವರ ಪುತ್ರ ಅಡಿಗೆ ಶ್ರೀನಿವಾಸ್ (ಬೇಡಿ) ಅವರು ಇಂದು ನಿಧನರಾದರು. ಇವರಿಗೆ 55 ವರ್ಷ ವಯಸ್ಸಾಗಿತ್ತು.

ಇವರು ಪತ್ನಿ ಭಾಗ್ಯ, ಪುತ್ರ ನಿಖಿಲ್, ಪುತ್ರಿ ಸುಶ್ಮಿತಾ, ಸಹೋದರರು, ಸಹೋದರಿಯರು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು (ಶನಿವಾರ) ಸಂಜೆ ಕುವೆಂಪುನಗರದ ಕನ್ನೇಗೌಡನ ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಮೈಸೂರು ನಗರ ಕಾಂಗ್ರೆಸ್ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ಜೆ.ಕುಮಾರಗೌಡ, ನಾಗರಾಜು(ಅಂಬರೀಶ್), ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ, ಮೈಸೂರು–ಚಾಮರಾಜ ನಗರ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಸಂತಾಪ ಸೂಚಿಸಿದ್ದಾರೆ.



ಕಾಳಯ್ಯ

ಮೈಸೂರು ನಗರದ ಮೇಟಗಳ್ಳಿ ನಿವಾಸಿ ಕಾಳಯ್ಯ(70) ಅವರು ಶನಿವಾರ ನಿಧನರಾದರು. ಇವರು ಪತ್ನಿ ಪದ್ಮ, ಪುತ್ರಿ ರಾಜೇಶ್ವರಿ, ಪುತ್ರ ಕಾಳಿಂಗರಾಜು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೇಟಗಳ್ಳಿ ಸ್ಮಶಾನದಲ್ಲಿ ಭಾನುವಾರ ಬೆಳಗ್ಗೆ 10ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಭಾನುವಾರ 21 ಡಿಸೆಂಬರ್ 2025

ಸರ್ಕಾರಿ ನೌಕರರ ಭದ್ರತೆಗೆ ಮಾಹಿತಿ ಹಕ್ಕು

ರಾಜ್ಯ ಮಾಹಿತಿ ಆಯುಕ್ತ ಕೆ. ಬದ್ರುದ್ದೀನ್ ಅಭಿಮತ



ಮಾಹಿತಿ ಹಕ್ಕು ಕಾಯ್ದೆ ಜಾಗೃತಿ ಕಾರ್ಯಾಗಾರದಲ್ಲಿ ರಾಜ್ಯ ಮಾಹಿತಿ ಆಯುಕ್ತ ಕೆ.ಬದ್ರುದ್ದೀನ್ , ಡಾ.ಹರೀಶ್ ಕುಮಾರ್ ಪಾಲ್ಗೊಂಡಿದ್ದರು.

ಮಡಿಕೇರಿ, ಡಿ.20–ಮಾಹಿತಿ ಹಕ್ಕು ಕಾಯ್ದೆಯು ಸರ್ಕಾರಿ ನೌಕರರ ರಕ್ಷಣೆ ಮತ್ತು ಭದ್ರತೆಗೆ ಇದೆ ಎಂದು ಭಾವಿಸಬೇಕೇ ಹೊರತು, ಸರ್ಕಾರಿ ಕೆಲಸಕ್ಕೆ ಅಡ್ಡಿ ಎಂದು ತಿಳಿದುಕೊಳ್ಳಬಾರದು ಎಂದು ರಾಜ್ಯ ಮಾಹಿತಿ ಆಯುಕ್ತ ಬದ್ರುದ್ದೀನ್ ಕೆ. ಮತ್ತು ಡಾ.ಹರೀಶ್ ಕುಮಾರ್ ಪ್ರತಿಪಾದಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಮಾಹಿತಿ ಹಕ್ಕು ಕಾಯ್ದೆ ಕುರಿತು ಜಾಗೃತಿ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಸುಮಾರು ಎರಡೂವರೆ ಗಂಟೆ ಕಾಲ ಮಾಹಿತಿ ಆಯುಕ್ತರು ಅಧಿಕಾರಿಗಳಿಗೆ ಜಾಗೃತಿ ಮೂಡಿಸಿದರು.

ಮಾಹಿತಿ ಆಯುಕ್ತ ಕೆ.ಬದ್ರುದ್ದೀನ್ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆಯು ಸರಳವಾಗಿದ್ದರೂ ಸಹ ಗಂಭೀರವಾಗಿದೆ. ಅದನ್ನು ಅರ್ಥಮಾಡಿಕೊಂಡು ಕಚೇರಿಗೆ ಸಲ್ಲಿಕೆಯಾದ ಅರ್ಜಿಗೆ ನಿಯಮಾನುಸಾರ 30 ದಿನದೊಳಗೆ ಮಾಹಿತಿ ಒದಗಿಸಬೇಕು. 'ಎಲ್ಲರೂ ಸಹ ಮನುಷ್ಯರೇ ಆಗಿದ್ದು, ತಪ್ಪುಗಳು ಆಗುತ್ತವೆ. ಅದನ್ನು ತಿದ್ದಿ ನಡೆಯುವುದು ಅತ್ಯಗತ್ಯ. ಅದನ್ನು ಬಿಟ್ಟು ಸುಳ್ಳು ಮಾಹಿತಿ ನೀಡಿ ಪೇಚಿಗೆ ಸಿಲುಕಬಾರದು. ಸತ್ಯದ ಮಾಹಿತಿ ನೀಡಿದ್ದಲ್ಲಿ ಕ್ಷಮೆಗೂ ಅರ್ಹರಿರುತ್ತಾರೆ ಎಂಬುದನ್ನು ಮರೆಯಬಾರದು ಎಂದು ಅವರು ಹೇಳಿದರು.

ಕೆಡಿಪಿ ಸಭೆಯಲ್ಲಿ ಮಾಹಿತಿ ಹಕ್ಕು ಅರ್ಜಿಗಳ ಸಲ್ಲಿಕೆ, ವಿಲೇವಾರಿ ಮತ್ತಿತರ ಸಂಬಂಧ ಚರ್ಚಿಸಿದ್ದಲ್ಲಿ ಸಮಸ್ಯೆಯನ್ನು ಜಿಲ್ಲಾ ಮಟ್ಟದಲ್ಲಿಯೇ ಪರಿಹರಿಸಿಕೊಳ್ಳಬಹುದು. ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಲು ಮಾಹಿತಿ ಹಕ್ಕು ಸಹಕಾರಿಯಾಗಿದ್ದು, ಸದಾ ಎಚ್ಚರ ನೀಡುತ್ತದೆ. ಅರ್ಜಿ ಸಲ್ಲಿಸಿದವರ ಜೊತೆ ಯಾವುದೇ ಕಾರಣಕ್ಕೂ ಕರೆ ಮಾಡಿ ಮಾತನಾಡಬಾರದು. ಅಡ್ಡದಾರಿ ಹಿಡಿಯಬಾರದು; ಅಧಿಕಾರಿಗಳು ಸಾಧ್ಯವಾದಷ್ಟು ಮುನ್ನೆಚ್ಚರದಿಂದ ಕರ್ತವ್ಯ ನಿರ್ವಹಿಸಿ ಕಾಯ್ದೆಯನ್ನು ಮನನ ಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮತ್ತೋರ್ವ ಮಾಹಿತಿ ಆಯುಕ್ತ ಡಾ॥ ಹರೀಶ್ ಕುಮಾರ್ ಮಾತನಾಡಿ ಸರ್ಕಾರಿ ನೌಕರರನ್ನು ಸಾರ್ವಜನಿಕರು ನೋಡುವ ದೃಷ್ಟಿ, ಸರ್ಕಾರಿ ನೌಕರರು ಸಮಾಜವನ್ನು ನೋಡುವ ದೃಷ್ಟಿ ಎರಡನ್ನು ಗಮನಿಸಬೇಕು. ಇಡೀ ದೇಶದಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದ ಕರ್ನಾಟಕ ಪ್ರಥಮ ರಾಜ್ಯವಾಗಿದೆ ಎಂದು ತಿಳಿಸಿದರು.

ಅರ್ಜಿ ಸಲ್ಲಿಸಿದವರು ಬಿಪಿಎಲ್ ಕಾರ್ಡ್‌ದಾರರಾಗಿದ್ದರೆ 100 ಪುಟಗಳವರೆಗೆ ಉಚಿತವಾಗಿ ಮಾಹಿತಿ ನೀಡಬೇಕು. ಉಳಿದಂತೆ ಪ್ರತಿ ಪುಟಕ್ಕೆ 2 ರೂ.ನಂತೆ ಶುಲ್ಕ ಪಾವತಿಸಿಕೊಂಡು ಮಾಹಿತಿ ಒದಗಿಸಬೇಕು. ಮಾಹಿತಿ ಹಕ್ಕು ಕಾಯ್ದೆಯನ್ನು ಜನರು ಹೇಗೆ ಬಳಸುತ್ತಿದ್ದಾರೆ ಎಂಬುದನ್ನು ಗಮನಿಸಬೇಕು. ಮಾಹಿತಿ ಹಕ್ಕು ಕಾಯ್ದೆಯಡಿ ವೈಯಕ್ತಿಕ ವಿವರ ಬೇಕಿಲ್ಲ. ಮಾಹಿತಿ ಹಕ್ಕು ಕಾಯ್ದೆ ಬಲಪಡಿಸುವುದು, ಜೊತೆಗೆ ದುರುಪಯೋಗ ತಡೆಯಲು ಆಯೋಗ ಮುಂದಾಗಿದೆ ಎಂದರು.

ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಪ್ರತಿಯೊಬ್ಬರಲ್ಲೂ ತಿಳುವಳಿಕೆ ಇರಬೇಕು. ಸಾರ್ವಜನಿಕ ಕೆಲಸ ಮಾಡುವಾಗ ಎಚ್ಚರ ವಹಿಸಬೇಕು. ಸಾರ್ವಜನಿಕ ಅಧಿಕಾರಿಯಾರೇ ಮಾಹಿತಿ ಕೇಳಿದರೂ ಸಹ ನೀಡಬೇಕು. ಮಾಹಿತಿ ಹಕ್ಕು ಕಾಯ್ದೆಯಡಿ ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಕೆಯಾಗುತ್ತಿದ್ದು, ಸರ್ಕಾರಿ ಕಚೇರಿಗಳಲ್ಲಿ ಇ–ಕಚೇರಿ, ಇ–ಆಡಳಿತ ವ್ಯವಸ್ಥೆ ವೇಗ ಪಡೆಯುತ್ತಿದ್ದು, ಈ ಬಗ್ಗೆ ಗಮನಹರಿಸಬೇಕು ಎಂದು ಸಲಹೆ ಮಾಡಿದರು.

ಮಾಹಿತಿ ಹಕ್ಕು ಕಾಯ್ದೆ ಸಂಬಂಧಿಸಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ವಿಷಯ ಪ್ರಸ್ತಾಪಿಸಿದರು. ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಕಸಾಯಿಖಾನೆಗೆ ಗೋವುಗಳನ್ನು ಸಾಗಿಸುತ್ತಿದ್ದ ಆರೋಪಿಗಳಿಬ್ಬರ ಬಂಧನ: ವಾಹನ ವಶ



ಕೇರಳದ ಕಸಾಯಿ ಖಾನೆಗೆ ಸಾಗಿಸುತ್ತಿದ್ದ 10 ಗೋವುಗಳ ರಕ್ಷಣೆ.

ವಿರಾಜಪೇಟೆ, ಡಿ.20–ಕೇರಳದ ಕಸಾಯಿ ಖಾನೆಗೆ ಸಾಗಿಸುತ್ತಿದ್ದ 10 ಗೋವುಗಳನ್ನು ಪೆರುಂಬಾಡಿ ಚೆಕ್ ಪೋಸ್ಟ್ ಬಳಿ ನಗರ ಠಾಣೆ ಪೊಲೀಸರು ವಾಹನ ಸಮೇತ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಪಿರಿಯಪಟ್ಟಣದಿಂದ ಕೇರಳ ರಾಜ್ಯದ ಕಣ್ಣೂರು ಜಿಲ್ಲೆಯ ಕಲಿಪಾರಂಬು ಎಂಬಲ್ಲಿಗೆ ಮಿನಿಲಾರಿ (ಕೆ.ಎಲ್.78,ಡಿ–5870) ಯಲ್ಲಿ ಆಲೂಗೆಡ್ಡೆ ಮೂಟೆಗಳನ್ನು ಇಟ್ಟು ಅದರ ಹಿಂಬದಿ ಗೋವುಗಳನ್ನು ನಿಲ್ಲಿಸಿ ವಾಹನದಲ್ಲಿ ಶನಿವಾರ ಮುಂಜಾನೆ 3.10ರ ಸುಮಾರಿಗೆ ವಿರಾಜಪೇಟೆ ಬಳಿಯ ಪೆರುಂಬಾಡಿ ಚೆಕ್ ಪೋಸ್ಟ್‌ಗೆ ಬಂದಾಗ ಪೊಲೀಸರು ವಾಹನವನ್ನು ಪರಿಶೀಲನೆ ನಡೆಸಿದ್ದಾರೆ. ಈ ಸಂದರ್ಭ 2 ಹಸುಗಳು 8 ಹೋರಿಗಳು ಸೇರಿ ಒಟ್ಟು 10 ಗೋವುಗಳಿದ್ದು ಆಲೂಗೆಡ್ಡೆ ಮೂಟೆಯನ್ನು ಗೋವುಗಳು ಕಾಣದಂತೆ ಮುಂದೆ ಇಡಲಾಗಿತ್ತು. ಕೇರಳದ ಕಸಾಯಿಖಾನೆಗೆ ಸಾಗಿಸುತ್ತಿರುವುದಾಗಿ ತಿಳಿದು ಬಂದಾಗ ವಾಹನದಲ್ಲಿದ್ದ ಸಾಧೀಕ್ ಮತ್ತು ಅಬ್ದುಲ್ ಹಮದ್ ಎಂಬಿಬ್ಬರನ್ನು ನಗರ ಠಾಣೆ ಪೊಲೀಸ್ ಠಾಣಾಧಿಕಾರಿ ಹೆಚ್.ಎಸ್.ಪ್ರಮೋದ್ ಪ್ರಕರಣ ದಾಖಲಿಸಿ ಗೋವುಗಳು ಮತ್ತು ವಾಹನವನ್ನು ವಶಪಡಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ಹಸು ತಿಂದ ಬೀದಿನಾಯಿಗಳು; ಜೀವ ಭಯದಲ್ಲಿ ಗ್ರಾಮಸ್ಥರು

ನಾಪೋಕ್ಲು, ಡಿ.20(ದುಗ್ಗಳ)– ಜಾನುವಾರು ಮೇಲೆ ಬೀದಿ ನಾಯಿಗಳು ದಾಳಿ ಮಾಡಿ ಕಚ್ಚಿ ಕೊಂದು ತಿಂದ ಘಟನೆ ಇಲ್ಲಿಗೆ ಸಮೀಪದ ಅಯ್ಯಂಗೇರಿ ಗ್ರಾಮದಲ್ಲಿ ಜರುಗಿದ್ದು ಸ್ಥಳೀಯರಲ್ಲಿ ಜೀವ ಭಯದ ವಾತಾವರಣ ನಿರ್ಮಾಣವಾಗಿದೆ.

ಅಯ್ಯಂಗೇರಿ ಗ್ರಾಮದ ನಿವಾಸಿ ಮಹಮ್ಮದ್ ಪಳ್ಳಿ ಎಂಬವರು ಹಸುಗಳನ್ನು ಸಮೀಪದ ತಮ್ಮ ಗದ್ದೆಯಲ್ಲಿ ಮೇಯಲು ಬಿಟ್ಟಿದ್ದಾಗ ಬೀದಿ ನಾಯಿಗಳು ಜಾನುವಾರುಗಳಿಗೆ ಕಚ್ಚಿ ರಂಪಾಟ ಮಾಡಿವೆ. ದಾಳಿ ಮಾಡಿದ ನಾಯಿಗಳು ಒಂದು ಹಸುವನ್ನು ಕಚ್ಚಿ ಕೊಂದಿದಲ್ಲದೆ ಬಹುತೇಕ ಭಾಗಗಳನ್ನು ತಿಂದು ಹಾಕಿವೆ. ಇತರ ಮೂರು–ನಾಲ್ಕು ಜಾನುವಾರುಗಳಿಗೆ ಕಚ್ಚಿ ಗಾಯಗಳನ್ನು ಉಂಟುಮಾಡಿವೆ.

ಬಲ್ಲಮಾವಟ್ಟಿ ಪಶುವೈದ್ಯ ಡಾ ಚೇತನ್ ಘಟನಾ ಸ್ಥಳಕ್ಕೆ ಭೇಟಿ ನೀಡಿ ಗಾಯಕ್ಕೊಳಗಾದ ಜಾನುವಾರುಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಸತ್ತ ಹಸುವನ್ನು ಪೋಸ್ಟ್ ಮಾರ್ಟಂ ಮಾಡಿದರು. ಈ ಭಾಗದಲ್ಲಿ ಬೀದಿ ನಾಯಿಗಳ ಉಪಟಳ ಹೆಚ್ಚಾಗಿದ್ದು ಈಗಾಗಲೇ ಕೆಲ ಮಕ್ಕಳು ಹಾಗೂ ಸಾರ್ವ ಜನಿಕರಿಗೆ ಹಚ್ಚಿದ ಘಟನೆಗಳು ಪುನರಾವರ್ತನೆಯಾಗುತಿದ್ದು, ಗ್ರಾಮದಲ್ಲಿ ಜೀವ ಭಯದ ವಾತಾವರಣ ನಿರ್ಮಾಣ ಆಗಿದೆ. ಇನ್ನಷ್ಟು ಜೀವ ಹಾನಿ ಆಗುವ ಮೊದಲು ಸಂಬಂಧಪಟ್ಟವರು ಎಚ್ಚೆತ್ತುಕೊಂಡು ಬೀದಿ ನಾಯಿಗಳನ್ನು ನಿಯಂತ್ರಿಸಬೇಕು ಮಾತ್ರವಲ್ಲದೆ ಬೀದಿ ನಾಯಿಗಳು ಕಚ್ಚಿ ಹಸುವನ್ನು ಕಳೆದುಕೊಂಡ ಮಾಲೀಕರಿಗೆ ಸೂಕ್ತ ಪರಿಹಾರ ನೀಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಚೆಸ್ಕಾಂಗೆ ಕಾನೂನು ಸಲಹೆಗಾರರ ನೇಮಕ



ವಿರಾಜಪೇಟೆ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಜಿಲ್ಲೆಗೆ ಸೀಮಿತವಾಗಿರುವಂತೆ ಕಾನೂನು ಸಲಹೆಗಾರರಾಗಿ ವಕೀಲ ಬೊಳ್ಳಚಂಡ ಎ ಸೋಮಣ್ಣ ಅವರನ್ನು ತಕ್ಷಣದಿಂದಲೇ ಅನ್ವಯವಾಗುವಂತೆ ನೇಮಕ ಮಾಡಲಾಗಿದೆ ಎಂದು ನಿಗಮದ ಪ್ರಧಾನ ವ್ಯವಸ್ಥಾಪಕರು ಆದೇಶಿಸಿದ್ದಾರೆ. ನಿಗಮದ ವಿರುದ್ಧ ನ್ಯಾಯಾಲಯಗಳಲ್ಲಿ ದಾಖಲಾಗುವ ಎಲ್ಲಾ ಪ್ರಕರಣಗಳನ್ನು ಇವರು ಪ್ರತಿನಿಧಿಸಲಿದ್ದಾರೆ.

ಇಂದು ಪಲ್ಸ್ ಪೋಲಿಯೋಕ್ಕೆ ಚಾಲನೆ

ಮಡಿಕೇರಿ: ಜಿಲ್ಲೆಯಲ್ಲಿ ಡಿ.21 ರಿಂದ 24ರವರೆಗೆ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಡಿ. 21 ರ ಬೆಳಗ್ಗೆ 8 ಗಂಟೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಪದವಿ ಕಾಲೇಜಿನ ಹತ್ತಿರದ ಅಂಗನವಾಡಿ ಕೇಂದ್ರ (ಗಾಳಿಬೀಡು ರಸ್ತೆ)ದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ನೀಡುವ ಮೂಲಕ ಗಣ್ಯರು ಚಾಲನೆ ನೀಡಲಿದ್ದಾರೆ ಎಂದು ಡಿಹೆಚ್‌ಓ ಡಾ.ಸತೀಶ್ ಕುಮಾರ್ ತಿಳಿಸಿದ್ದಾರೆ.

ವೀರಶೈವ ಲಿಂಗಾಯಿತ ಸಮಾಜದ ಎಲ್ಲಾ ಒಳ ಪಂಗಡಗಳು ಒಗ್ಗೂಡಿದರೆ ರಾಜ್ಯದ ಅಭಿವೃದ್ಧಿ ಸಾಧ್ಯ

ರಾಜ್ಯ ಸರ್ಕಾರ ಮಾಡದ ಕೆಲಸವನ್ನು ಸುತ್ತೂರು ಮಠ ಮಾಡುತ್ತಿದೆ: ಶಿವಯೋಗಿಗಳ 1066ನೇ ಜಯಂತೋತ್ಸವದಲ್ಲಿ ಬಿ.ವೈ.ವಿಜಯೇಂದ್ರ ಶ್ಲಾಘನೆ



ಮಳವಳ್ಳಿಯಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶಿವರಾತ್ರಿ ಶಿವಯೋಗಿ ಶ್ರೀಗಳ ಜಯಂತೋತ್ಸವದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಸುತ್ತೂರು ಶ್ರೀಗಳು ಅಭಿನಂದಿಸಿದರು.

ಮಳವಳ್ಳಿ, ಡಿ.20(ಮೋಹನ್‌ರಾಜ್)– ಬಸವಣ್ಣ ಅವರ ಸಮಸಮಾಜ ನಿರ್ಮಾಣವಾಗಬೇಕಾದರೆ ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಒಳಪಂಗಡಗಳು ದ್ವೇಷ ಮರೆತು ಒಗ್ಗೂಡಿ ಒಗ್ಗಟ್ಟಾಗಬೇಕಿದೆ ಇದರಿಂದ ರಾಜ್ಯ ಅಭಿವೃದ್ಧಿಯಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಪಟ್ಟಣದ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶಿವರಾತ್ರಿ ಶಿವಯೋಗಿ ಶ್ರೀಗಳ 1066ನೇ ಜಯಂತೋತ್ಸವದ ಐದನೇ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವೀರಶೈವ ಸಮುದಾಯದಲ್ಲಿ ಒಡಕು ಮೂಡಿಸುವ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಕೇವಲ ನಿಂತಿದ್ದಾರೆ. ಇಷ್ಟಾದರೂ ಸಹ ನಮ್ಮ ಸಮುದಾಯವನ್ನು ಒಡೆಯುವ ಕೆಲಸ ಯಾರಿಂದಲೂ ಆಗಿಲ್ಲ ಎಂದು ಹೇಳಿದರು.

ಭಾರತ ಅಭಿವೃದ್ಧಿಯ ಕಡೆ ಸಾಗಬೇಕೆಂದರೆ, ವಿಶ್ವಭೂಪಟದಲ್ಲಿ ಹೆಸರು ಮಾಡಬೇಕೆಂದರೆ ಕರ್ನಾಟಕ ಹಾಗೂ ನಮ್ಮ ರಾಜ್ಯದ ಅಭಿವೃದ್ಧಿ ಮತ್ತು ಬೆಳವಣಿಗೆ ಮಹತ್ವದ್ದಾಗಿದೆ. ನಮ್ಮ ರಾಜ್ಯದಲ್ಲಿ ಬಸವಣ್ಣರ ಸಮ ಸಮಾಜದ ಕನಸು ನನಸಾಗಬೇಕೆಂದರೆ ರಾಜ್ಯ ಅಭಿವೃದ್ಧಿಯಾಗಬೇಕೆಂದರೆ, ಎಲ್ಲಾ ಸಮುದಾಯಗಳಿಗೆ ನೆರಳನ್ನು ಕೊಡುವ ಶಕ್ತಿ ವೀರಶೈವ ಲಿಂಗಾಯಿತ ಸಮಾಜಕ್ಕಿದೆ. ನಮ್ಮೆಲ್ಲಾ ಒಳ ಪಂಗಡಗಳನ್ನು ಮರೆತು ವೀರಶೈವ ಲಿಂಗಾಯಿತ ಸಮಾಜದ ಹಿತದೃಷ್ಟಿಯಿಂದಲ್ಲದೇ ಎಲ್ಲಾ ಸಮಾಜದ ಅಭಿವೃದ್ಧಿಯ ದೃಷ್ಟಿಯಿಂದ, ರಾಜ್ಯ ಅಭಿವೃದ್ಧಿಯ ದೃಷ್ಟಿಯಿಂದ ಒಳ ಪಂಗಡಗಳನ್ನು ಮರೆತು ಒಗ್ಗಟ್ಟಾಗಿ ಸಾಗಬೇಕು ಎಂದು ತಿಳಿಸಿದರು.

ಆದಿ ಜಗದ್ಗುರು ಶಿವರಾತ್ರೀಶ್ವರರು ತಮ್ಮ ಜೀವಿತ ಕಾಲದಲ್ಲಿ ತ್ರಿವಿಧ ದಾಸೋಹದ ಮೂಲಕ ಸಮಾಜ ಕಟ್ಟಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಕಾರಣದಿಂದಾಗಿ ಇವತ್ತಿಗೂ ಕೂಡ ಅವರ 1066ನೇ ಜಯಂತೋತ್ಸವ ನಡೆಯುತ್ತಿದೆ ಎಂದರೆ ಅವರೊಬ್ಬ ಪವಾಡ ಪುರುಷರು ಹಾಗೂ ನಡೆದಾಡುವ ದೇವರಾಗಿದ್ದರು ಎಂದು ಸ್ಮರಿಸಿದರು.

ಭಾರತ ಇಡೀ ಜಗತ್ತಿನ ಭೂಪಟದಲ್ಲಿ ವಿಶಿಷ್ಟವಾಗಿ ಕಾಣುತ್ತಿದೆ. ಭಾರತವು ಒಂದು ಭಿಕ್ಷುಕ ರಾಷ್ಟ್ರವೆಂದು ಅಮೇರಿಕಾ ಸೇರಿದಂತೆ ಕೆಲ ರಾಷ್ಟ್ರಗಳು ನೋಡುತ್ತಿದ್ದವು. ಇಂದು ಭಾರತ ಬಲಿಷ್ಠ ರಾಷ್ಟ್ರವಾಗಿ ಬಲವರ್ಧನೆಯಾಗಿದೆ. ದೇಶದ ಪ್ರಧಾನಿ ಮೋದಿ ಅವರು ಜಗತ್ತಿನ ಯಾವ ದೇಶಕ್ಕೆ ಹೋದರು ಬಸವಣ್ಣರನ್ನು ನೆನಪಿಸಿಕೊಂಡು ಸಮ ಸಮಾಜ ಕಟ್ಟಿದ ಬಸವಣ್ಣರ ತತ್ವವನ್ನು ಮೆಲುಕು ಹಾಕುತ್ತಾರೆ ಎಂದು ಶ್ಲಾಘಿಸಿದರು.

ಮೋದಿ ಅವರು 2047ಕ್ಕೆ ಭಾರತವನ್ನು ಸಂಪೂರ್ಣ ಅಭಿವೃದ್ಧಿ ರಾಷ್ಟ್ರ ಮಾಡಲು ಪಣ ತೊಟ್ಟಿದ್ದಾರೆ. ಆದಿ ಜಗದ್ಗುರುಗಳು ಅನ್ನ, ಅಕ್ಷರ ದಾಸೋಹದ ಮೂಲಕ ಸಮಾಜ ಕಟ್ಟುವ, ಈ ಭಾಗದ ಬಡವರಿಗೆ ಆಶ್ರಯ ನೀಡುವ ಪುಣ್ಯದ ಕೆಲಸವನ್ನು ಮಾಡಿದ್ದಾರೆ. ಆದಿ ಜಗದ್ಗುರುಗಳ ಪರಂಪರೆಯನ್ನು ಇಂದಿಗೂ ಮುಂದುವರೆಸಿಕೊಂಡು ಬಡವರು, ದಲಿತರು, ಕೃಷಿಕರು ಎಲ್ಲಾ ವರ್ಗದವರಿಗೆ ಆಶ್ರಯವನ್ನು ಕೊಟ್ಟು ಈ ಮಠದ ಮಹಾರಥವನ್ನು ಜಗತ್ತಿಗೆ ಪರಿಚಯಿಸುವ ಕೆಲಸವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಮಾಡುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕೆಲವರು ಕುರ್ಚಿ ಎತ್ತಿಕೊಂಡು ತಿರುಗಾಡುತ್ತಿದ್ದನ್ನು ಕಂಡು ನಾನು ಇಲ್ಲಿಯೂ ರಾಜ್ಯದಲ್ಲಿ ನಡೆಯುತ್ತಿರುವ ಕುರ್ಚಿ ಕಾಳಗವೇ ಎಂಬಂತೆ ಭಾಸವಾಯಿತು ಎಂದು ಹಾಸ್ಯ ಚಟಾಕಿ ಹಾರಿಸಿದರು.

ಅರಣ್ಯ, ಪರಿಸರ ಮತ್ತು ಸೂಕ್ಷ್ಮಜೀವಿ ಶಾಸ್ತ್ರ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಕಳೆದ 33 ವರ್ಷಗಳಿಂದ ಬೇರೆ ಬೇರೆ ಕಡೆಗಳಲ್ಲಿ ಜಯಂತ್ಯೋತ್ಸವ ನಡೆಯುತ್ತಿದೆ. ಜಗತ್ತಿಗೆ ಮೊದಲು ಬೆಳಕು ನೀಡಿದ ಮಳವಳ್ಳಿ ಕ್ಷೇತ್ರದಲ್ಲಿ ಇದೊಂದು ಅದ್ಭುತ ಕಾರ್ಯಕ್ರಮವಾಗಿ ರೂಪುಗೊಂಡಿದೆ. ನಾಡಿನ ಯುವ ಸಮೂಹಕ್ಕೆ ಇತಿಹಾಸ ತಿಳಿಸುವ ನಿಟ್ಟಿನಲ್ಲಿ ಇಂಥ ಕಾರ್ಯಕ್ರಮಗಳಿಂದ ಪ್ರೇರಣೆ ಸಿಗಬೇಕು ಎನ್ನುವ ದೃಷ್ಟಿಯಿಂದ ಎಲ್ಲೆಡೆ ನಡೆಯುತ್ತಿದೆ. ಸುತ್ತೂರು ಮಠಕ್ಕೆ ತನ್ನದೇ ಆದ ಇತಿಹಾಸ ಪರಂಪರೆ ಇದೆ. ಶ್ರೀಗಳು ಸಮಾಜಕ್ಕಾಗಿ ಮಾಡಿರುವುದು ಸೇವೆ ಅನನ್ಯ, ನೊಂದು ಬೆಂದು ಬಂದಿದ್ದ ಅನೇಕರಿಗೆ ದಾರಿ ದೀಪವಾಗಿದೆ. ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದ ಶ್ರೇಯಸ್ಸು ಸುತ್ತೂರಿಗೆ ಸಲ್ಲುತ್ತದೆ. ವಿಶೇಷವಾಗಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಬೀದರನಿಂದ ಚಾಮರಾಜನಗರದವರೆಗೆ ಸುತ್ತಾಡಿ, ಅನ್ನ, ಅಕ್ಷರದೊಂದಿಗೆ ಜನರಿಗೆ ಜ್ಞಾನ ತುಂಬುವ ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಸುತ್ತೂರಿನ ವೀರಸಿಂಹಾಸನ ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಕೊಪ್ಪಳದ ಗವಿಮಠದ ಶ್ರೀ ಅಭಿನವ ಗುರು ಮಹಾಸಿದ್ದೇಶ್ವರ ಸ್ವಾಮೀಜಿ, ಕೆಂಗೇರಿಯ ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಹೆಚ್.ಟಿ.ಮಂಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಮುಖಂಡರಾದ ಸಚ್ಚಿದಾನಂದ, ಡಾ.ಇಂದ್ರೇಶ್ ಸೇರಿದಂತೆ ಹಲವು ಗಣ್ಯರು, ಮಠಾಧೀಶರು, ಅಪಾರ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸರ್ಕಾರದ ಉಚಿತ ಯೋಜನೆಗಳು ಬೇಡ, ದುಡಿದು ಜೀವನ ಮಾಡೋಣ ಎಂದು ಸಂಕಲ್ಪ ತೊಡೋಣ



ನಮ್ಮ ಸಮಾಜ, ನಮ್ಮ ಒಕ್ಕಲು ಧಾರುಣೀಕರಣದಲ್ಲಿದ್ದೇವೆ, ಎಲ್ಲ ಸಮಾಜದವರನ್ನು ಒಂದೇ ಎನ್ನುವ ರೀತಿಯಲ್ಲಿ ಕಾಣುತ್ತೇವೆ, ವೀರಶೈವ, ಲಿಂಗಾಯತ ಬೇರೆ ಬೇರೆ ಎನ್ನುತ್ತಿದ್ದಾರೆ. ಬಸವಣ್ಣ ಅವರ ಹಾದಿಯಲ್ಲಿ ಸಿದ್ಧಗಂಗಾ ಮತ್ತು ಸುತ್ತೂರು ಸ್ವಾಮೀಜಿಗಳು ಹೇಳಿರುವಂತೆ ವೀರಶೈವ ಲಿಂಗಾಯತ ಒಂದೇ ಯಾಗಿದೆ. ಪರಸ್ಪರ ಸಹಕಾರದ ಮನೋಭಾವನೆಯಿಂದ ನಮ್ಮ ಸಮಾಜದಲ್ಲಿ ನೊಂದಿರುವವರಿಗೆ ನೆರವು ನೀಡುವ ಕಾಯಕ ಮಾಡಬೇಕು. ಸರ್ಕಾರದ ಉಚಿತ ಯೋಜನೆಗಳು ಬೇಡ. ಎಲ್ಲರೂ ಸ್ವಯಂ ದುಡಿದು ಜೀವನ ಮಾಡುತ್ತೇವೆ ಎನ್ನುವ ಸಂಕಲ್ಪ ಮಾಡೋಣ ಎಂದು ಅಖಿಲ ಭಾರತೀಯ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಎಂ.ಬಿದರಿ ಕರೆ ನೀಡಿದರು.

ವೀರಶೈವ, ಲಿಂಗಾಯಿತ ಎರಡು ಸಹ ಒಂದೇ ಧರ್ಮವಾಗಿದೆ. ಇಂದು ಅಥವಾ ನಾಳೆ ಈ ಎರಡು ಪಂಗಡಗಳು ಒಂದಾಗಿಯೇ ಇರುತ್ತದೆ. ನಮ್ಮ ಸಮಾಜ ಪರಸ್ಪರ ದ್ವೇಷ, ಅಸೂಯೆಯನ್ನು ಬಿಟ್ಟು ಎಲ್ಲರನ್ನು ಪ್ರೀತಿಸುವ, ಎಲ್ಲರಿಗೂ ಸಹಕರಿಸುವ ಗುಣಗಳನ್ನು ಬೆಳೆಸಿಕೊಂಡು ಮುನ್ನಡೆಯಬೇಕು. ನಮ್ಮ ಸಮಾಜದಲ್ಲಿ ಐಕ್ಯತೆ ಮತ್ತು ಒಗ್ಗಟ್ಟನ್ನು ನೋಡಬೇಕು. ಜೊತೆ ಲಿಂಗಾಯಿತ ಸಮುದಾಯದವರು ರೈತಾಪಿಯಿಂದ ಹಿಡಿದು ಎಲ್ಲಾ ರೀತಿಯ ಕೆಲಸಗಳನ್ನು ಮಾಡುವವರಿದ್ದಾರೆ. ಹೀಗೆ ಶ್ರಮದಿಂದ ದುಡಿಮೆ ಮಾಡುವ ನಮ್ಮ ಸಮುದಾಯ ಇನ್ನಷ್ಟು ಎತ್ತರಕ್ಕೆ ಬೆಳೆಯಬೇಕು ಎಂದರು.

ಎಲ್ಲಾ ಬೇಧ, ಭಾವವನ್ನು ಬಿಟ್ಟು ನಾವೆಲ್ಲಾ ಒಗ್ಗಟ್ಟಾಗಿ ಮುಂದೆ ಸಾಗಿದರೆ ನಾವು ಮತ್ತಷ್ಟು ಮೇಲೆ ಬೆಳೆಯುತ್ತೇವೆ. ನಮ್ಮ ಸಮಾಜ ಅಭಿವೃದ್ಧಿ ಮತ್ತು ಪ್ರಗತಿಯಾಗಬೇಕಾದರೆ ನಾವೆಲ್ಲರೂ ಪ್ರಾಮಾಣಿಕವಾಗಿ ಬೆವರು ಸುರಿಸಿ ದುಡಿಯಬೇಕು. ನಮ್ಮ ಬೆಳವಣಿಗೆ ಹಿಂದೆ ಪರಿಶ್ರಮ ಎಂಬುದು ಇದ್ದೇ ಇರುತ್ತದೆ. ರಾಜ್ಯ ಮತ್ತು ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಬಹುದು. ಆ ಸರ್ಕಾರಗಳು ಜನರಿಗೆ ಯಾವುದೇ ಗ್ಯಾರಂಟಿ ಯೋಜನೆಗಳನ್ನು ಕೊಟ್ಟರೂ ಅವುಗಳನ್ನು ನಂಬಿಕೊಳ್ಳದೇ ನಮ್ಮ ಸ್ವಂತ ಶ್ರಮದಿಂದ ದುಡಿದು ಜೀವನ ಕಟ್ಟಿಕೊಳ್ಳಲು ವೀರಶೈವರು ಮುಂದಾಗಬೇಕೆಂದು ಕರೆ ನೀಡಿದರು.

ಚಾ.ನಗರದಲ್ಲಿ ಪೋಲಿಯೋ ಜಾಗೃತಿ ಜಾಥಾ



ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಜಾಥಾ ನಗರದಲ್ಲಿ ನಡೆಯಿತು.

ಚಾಮರಾಜನಗರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಜಾಥಾ ನಗರದಲ್ಲಿ ಯಶಸ್ವಿಯಾಗಿ ನಡೆಯಿತು.

ನಗರದ ಆರೋಗ್ಯ ಕೇಂದ್ರದ ಬಳಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಎಸ್.ಚಿದಂಬರ ಹಸಿರು ನಿಶಾನೆ ತೋರುವ ಮೂಲಕ ಜಾಥಾಗೆ ಚಾಲನೆ ನೀಡಿ, ಪೋಲಿಯೋ ಒಂದು ವೈರಸ್‌ನಿಂದ ಬರುವ ಖಾಯಿಲೆಯಾಗಿದ್ದು, ಇದನ್ನು ಪೋಲಿಯೋ ಮೈಲೈಟಿಸ್ ಎಂದು ಕರೆಯಲಾಗುವುದು. ಪೋಲಿಯೋ ಲಸಿಕೆಯನ್ನು ಹಾಕಿಸುವುದರಿಂದ ಅಂಗವಿಕಲತೆಯನ್ನು ತಡೆಗಟ್ಟಬಹುದು, ಪೋಲಿಯೋ ಖಾಯಿಲೆಯು ಸಾಮಾನ್ಯವಾಗಿ ಕಲುಷಿತ ನೀರು ಮತ್ತು ಆಹಾರದಿಂದ ಹರಡುತ್ತದೆ. ವೈಲ್ಡ್ ಪೋಲಿಯೋ ವೈರಸ್ ಮಲದ ಮೂಲಕ ಹರಡುತ್ತದೆ ಎಂದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ. ರಾಜೇಶ್ ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಈಗತಾನೇ ಹುಟ್ಟಿದ ಮಗುವಿನಿಂದ 5 ವರ್ಷ ದೊಳಗಿನ ಒಟ್ಟು 61161 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಪೋಲೀಯೊ ಲಸಿಕೆ ನೀಡಲು ಜಿಲ್ಲಾ ವ್ಯಾಪ್ತಿಯಲ್ಲಿ 641 ಬೂತ್‌ಗಳನ್ನು ತೆರೆಯಲಾಗಿದೆ. ಪಲ್ಸ್ ಪೋಲಿಯೋ ಅಭಿಯಾನದಲ್ಲಿ ಜಿಲ್ಲೆಯಲ್ಲಿ ಒಟ್ಟು 2528 ವ್ಯಾಕ್ಸಿನೇಟರ್‌ಗಳು ಹಾಗೂ 130 ಮೇಲ್ವಿಚಾರಕರು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ರೋಟರಿ ಸಂಸ್ಥೆಯ ಅಧ್ಯಕ್ಷ ಕಾಗಲವಾಡಿ ಚಂದ್ರಶೇಖರ್ ಮಾತನಾಡಿ, ಪೋಲಿಯೋ ನಿರ್ಮೂಲನೆ ಮಾಡಲು ರಾಷ್ಟ್ರಾದ್ಯಂತ ರೋಟರಿ ಸಂಸ್ಥೆಯು 30 ವರ್ಷಗಳಿಂದ ನಿರಂತರವಾಗಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದು ಪೋಲಿಯೋ ಮುಕ್ತ ಭಾರತ ನಿರ್ಮಾಣಕ್ಕೆ ಕೈಜೋಡಿಸಿದೆ ಎಂದರು.


ತಾಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ್, ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಲೋಕೇಶ್, ರೋಟರಿ ಸಂಸ್ಥೆಯ ರೋಟೇರಿಯನ್ ಚಂದ್ರಪ್ರಭ ಜೈನ್, ಜಿಎಸ್‌ಎಸ್ ನರ್ಸಿಂಗ್ ಶಾಲೆಯ ಬೋಧಕರಾದ ಮಧು, ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ವೆಂಕಟೇಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯ್ಕ, ಜಿಲ್ಲಾ ಶುಶ್ರೂಷಣಾಧಿಕಾರಿ ಮಣಿಯಮ್ಮ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ದುಶ್ಯಂತ್ ಕುಮಾರ್, ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವೆಂಕಟಯ್ಯನ ಛತ್ರದಲ್ಲಿ ಇಂದು ಪಲ್ಸ್ ಪೋಲಿಯೋಗೆ ಚಾಲನೆ

ಚಾಮರಾಜನಗರ, ಡಿ.20–ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಉದ್ಘಾಟನೆಯು ಡಿ. 21ರ ಬೆಳಿಗ್ಗೆ 8 ಗಂಟೆಗೆ ತಾಲೂಕಿನ ವೆಂಕಟಯ್ಯನ ಛತ್ರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೆರವೇರಲಿದೆ.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಲಿದ್ದಾರೆ. ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಸ್ ಪೋಲಿಯೋ ಬೂತ್‌ಗಳ ಸ್ಥಾಪನೆ : ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಡಿ. 21 ರಿಂದ 24 ರವರೆಗೆ ತಾಲ್ಲೂಕಿನಾದ್ಯಂತ ಹಮ್ಮಿಕೊಳ್ಳಲಾಗಿದ್ದು (ಗ್ರಾಮಾಂತರ 3 ದಿನ, ನಗರ 4 ದಿನ) ನಾಳೆ (ಡಿ 21) ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಬೂತ್‌ಗಳಲ್ಲಿ ಪಲ್ಸ್ ಪೋಲಿಯೋ ಲಸಿಕೆ ನೀಡ ಲಾಗುತ್ತದೆ. ಈಗತಾನೇ ಹುಟ್ಟಿದ ಮಗುವಿನಿಂದ 5 ವರ್ಷದ ಎಲ್ಲಾ ಮಕ್ಕಳಿಗೆ ಎರಡು ಪೋಲಿಯೋ ಹನಿ ಹಾಕಲಾಗುವುದು. ಗ್ರಾಮಾಂತರ ಪ್ರದೇಶ ದಲ್ಲಿ ಆಯಾ ಗ್ರಾಮದಲ್ಲಿರುವ ಶಾಲೆ, ಅಂಗನವಾಡಿ ಕೇಂದ್ರ, ಆರೋಗ್ಯ ಕೇಂದ್ರಗಳಲ್ಲಿ ಪೋಲಿಯೋ ಹನಿ ಹಾಕಲಾಗುವುದು.



ಪಟ್ಟಣ ವ್ಯಾಪ್ತಿಯಲ್ಲಿ ಅಹಮದ್ ನಗರ ಅಂಗನವಾಡಿ ಕೇಂದ್ರ–1 ಮತ್ತು 2 ಗಾಳಿಪುರ ಅಂಗನವಾಡಿ ಕೇಂದ್ರ–1 ಮತ್ತು 2, ವರದರಾಜಪುರ ಅಂಗನವಾಡಿ ಕೇಂದ್ರ–2, ರಹಮತ್ ನಗರ ಅಂಗನವಾಡಿ ಕೇಂದ್ರ, ಸೋಮವಾರಪೇಟೆ ಅಂಗನವಾಡಿ ಕೇಂದ್ರ, ಗಾಡಿಖಾನೆ ಮೊಹಲ್ಲಾ, ಭಂಜಗೇಶ್ವರ ಬಡಾವಣೆ, ಬೀಡಿ ಕಾಲೋನಿ, ಅಂಗನವಾಡಿ ಕೇಂದ್ರ, ಮೇಗಲ ನಾಯಕರ ಬೀದಿ, ಉಪ್ಪಾರ ಬೀದಿ, ಮಹದೇಶ್ವರ ಬಡಾವಣೆ ಶಾಲೆ, ಗುಂಡ್ಲುಪೇಟೆ ರೋಡ್ ಕೊಳದ ಬೀದಿ ಅಂಗನವಾಡಿ ಕೇಂದ್ರ, ಬೀಡಿ ಕಾಲೋನಿ ಉಪ್ಪಾರ ಶಾಲೆ, 16ನೇ ವಾರ್ಡ್ ಉಪ್ಪಾರ ಶಾಲೆ, 17 ಮತ್ತು 18ನೇ ವಾರ್ಡ್‌ಗೆ ಉಪ್ಪಾರ ಬೀದಿ ಅಂಗನವಾಡಿ ಕೇಂದ್ರ, 19ನೇ ವಾರ್ಡ್ ಉಪ್ಪಾರ ಬೀದಿ ಅಂಗನವಾಡಿ ಕೇಂದ್ರ, 21ನೇ ವಾರ್ಡ್ ಜಾಮೀಯಾ ಮಸೀದಿ ಶಾಲೆ, 23ನೇ ವಾರ್ಡ್ ಶಂಕರಪುರ ಅಂಗನವಾಡಿ ಕೇಂದ್ರ, 24ನೇ ವಾರ್ಡ್ ಚೆನ್ನಿಪುರ ಮೋಳೆ ಅಂಗನವಾಡಿ ಕೇಂದ್ರಗಳಲ್ಲಿ ಬೂತ್‌ಗಳನ್ನು ತೆರೆಯಲಾಗಿದೆ.

ರಾಮಸಮುದ್ರದಲ್ಲಿ ಕುರುಬರ ಬೀದಿ ಮತ್ತು ನಾಯಕರ ಬೀದಿ ಅಂಗನವಾಡಿ ಕೇಂದ್ರ, ದೊಡ್ಡ ಹರಿಜನ ಅಂಗನವಾಡಿ ಕೇಂದ್ರ, ಉರ್ದು ಶಾಲೆ, ಚಿಕ್ಕ ಹರಿಜನ ಬೀದಿ ಅಂಗನವಾಡಿ ಕೇಂದ್ರ, ಎ.ಜೆ. ಬೀದಿ ಅಂಗನವಾಡಿ ಕೇಂದ್ರ ಹಾಗೂ ಅಂಬೇಡ್ಕರ್ ಬೀದಿಯಲ್ಲಿ ನೀಡಲಾಗುತ್ತದೆ.

ದೇವಾಂಗ ಬೀದಿ ಅಂಗನವಾಡಿ ಕೇಂದ್ರ, ಕೆ.ಪಿ.ಮೊಹಲ್ಲಾ ಅಂಗನವಾಡಿ ಕೇಂದ್ರ–1 ಹಾಗೂ ಅಂಗನವಾಡಿ ಕೇಂದ್ರ–2, ಕೆ.ಎನ್. ಮೊಹಲ್ಲಾ ಉರ್ದು ಶಾಲೆ, ಎ.ಜೆ ಬೀದಿ ಅಂಗನವಾಡಿ ಕೇಂದ್ರ, ಕರಿನಂಜನಪುರ ಅಂಗನವಾಡಿ ಕೇಂದ್ರ, ಪಿಡಬ್ಲ್ಯೂಡಿ ಕಾಲೋನಿ ಶಾಲೆ, ಭಗೀರಥ ನಗರ ಅಂಗನವಾಡಿ ಕೇಂದ್ರ, ರೋಟರಿ ಶಾಲೆ, ನಮ್ಮ ಕ್ಲಿನಿಕ್ ಕರಿನಂಜನಪುರ, ಭ್ರಮರಾಂಭ ಬಡಾವಣೆ, ಕೆ.ಎಸ್.ಆರ್.ಟಿ. ಬಸ್ ನಿಲ್ದಾಣ, ಪ್ರೈವೇಟ್ ಶಾಲೆ, ರೈಲ್ವೆ ನಿಲ್ದಾಣ, ಚಾಮರಾಜೇಶ್ವರ ದೇವಸ್ಥಾನ, ಸಂತೇಮರಹಳ್ಳಿ ಸರ್ಕಲ್, ಜಿಲ್ಲಾ ಆಸ್ಪತ್ರೆಗಳಲ್ಲಿ ಬೂತ್‌ಗಳನ್ನು ತೆರೆಯಲಾಗಿದೆ ಎಂದು ತಾಲೂಕು ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವಾಹನ ಡಿಕ್ಕಿ ; ವ್ಯಕ್ತಿ ಸಾವು

ಬೇಗೂರು, ಡಿ.20–ಅಪರಿಚಿತ ವಾಹನ ಡಿಕ್ಕಿ ಹೊಡೆದು ವ್ಯಕ್ತಿಯೋರ್ವ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ ಘಟನೆ ಬೇಗೂರು ಸಮೀಪದ ಗರಗನಹಳ್ಳಿ ಗೇಟ್ ಬಳಿ ಶನಿವಾರ ಬೆಳಗ್ಗೆ ನಡೆದಿದೆ.

ಅಪರಿಚಿತ ವ್ಯಕ್ತಿ ಗರಗನಹಳ್ಳಿ ಗೇಟ್ ಬಳಿ ನಡೆದುಕೊಂಡು ತೆರಳುವಾಗ ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದು ಹೋಗಿದ್ದು, ಗಾಯಗೊಂಡ ವ್ಯಕ್ತಿಯನ್ನು ಜಿಲ್ಲಾಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಶನಿವಾರ ಸಂಜೆ ಜಿಲ್ಲಾಸ್ಪತ್ರೆಯಲ್ಲಿ ಕೊನೆಯುಸಿರೆಳೆದ ಅಪರಿಚಿತ ವ್ಯಕ್ತಿಯ ಶವ ಶೈತ್ಯಾಗಾರದಲ್ಲಿದೆ. ಅಪರಿಚಿತ ವ್ಯಕ್ತಿಯ ಹೆಸರು ಹಾಗೂ ವಿಳಾಸ ತಿಳಿದಿರುವುದಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಕೃತಿ, ಪ್ರಾಣಿ–ಪಕ್ಷಿ ಸಂಕುಲ ಪೋಷಿಸಿ



ಪಕ್ಷಿ ಪ್ರೇಮಿ ಮತ್ತು ಭಾರತ ಪಕ್ಷಿ ಗಣತಿ ಸಂಯೋಜಕಿ ಸಹನ ಮಾತನಾಡಿದರು.

ಚಾಮರಾಜನಗರ: ವಿಶ್ವವಿದ್ಯಾನಿಲಯದ ಜಾನಪದ ವಿಭಾಗ ಹಾಗೂ ಗುಡ್ ಹ್ಯಾಬಿಟ್ ಫೌಂಡೇಶನ್ ಸಹಯೋಗದೊಂದಿಗೆ ಜೀವ ವೈವಿಧ್ಯತೆಯಲ್ಲಿ ಜಾನಪದ ಕುರಿತ ವಿಚಾರ ಸಂಕಿರಣ ವಿಶ್ವವಿದ್ಯಾಲಯದ ಸಭಾಂಗಣದಲ್ಲಿಂದು ನಡೆಯಿತು.

ಪಕ್ಷಿ ಪ್ರೇಮಿ ಮತ್ತು ಭಾರತ ಪಕ್ಷಿ ಗಣತಿ ಸಂಯೋಜಕಿ ಸಹನ ಮಾತನಾಡಿ, ಆಧುನಿಕ ಯಾಂತ್ರಿಕ ಬದುಕಿನಲ್ಲಿ ವಲಸೆ ಪಕ್ಷಿಗಳು ಅಳಿವಿನಂಚಿನಲ್ಲಿದೆ. ಅರಣ್ಯ ನಾಶದಿಂದ ವಾತಾವರಣ ಮತ್ತು ಜೀವ ಸಂಕುಲ ವಿನಾಶವಾಗುತ್ತಿದೆ. ಕೆರೆಗಳ ಒತ್ತುವರಿಯಿಂದ ಜಲಚರ, ಪ್ರಾಣಿ, ಪಕ್ಷಿಗಳಿಗೆ ಸಂಕಷ್ಟ ಎದುರಾಗುತ್ತಿದೆ. ವಿದ್ಯಾರ್ಥಿಗಳು ಅವನ್ನು ಉಳಿಸಿ ಬೆಳೆಸಬೇಕು ಎಂದರು. ಡಾ.ಶಿವರಾಜ್, ಡಾ.ಬಿ.ಎಸ್. ಜಗದೀಶ್, ಡಾ. ಆರ್. ಮಹೇಶ್ ಮತ್ತು ಗುಡ್ ಹ್ಯಾಬಿಟ್ ಫೌಂಡೇಶನ್‌ನ ಕುಮಾರ್ ಸಂದೀಪ್, ಮನೋಜ್, ವಿಜಯ್, ಇತರರಿದ್ದರು.

ಹಾಸಿಗೆ ಬಳಿ ಇಟ್ಟಿದ್ದ 70 ಸಾವಿರ ರೂ. ಮೌಲ್ಯದ ಚಿನ್ನಾಭರಣಗಳ ಕಳವು

ಬೇಗೂರು,ಡಿ.20–ಸಮೀಪದ ತೊಂಡವಾಡಿ ಗ್ರಾಮದಲ್ಲಿ ಮನೆಯ ಮೇಲ್ಛಾವಣಿ ತೆಗೆದು ಒಳನುಗ್ಗಿದ ಅಪರಿಚಿತ ವ್ಯಕ್ತಿಯೋರ್ವ ಮಹಿಳೆಯ ಹಾಸಿಗೆ ಬಳಿ ಇಟ್ಟಿದ್ದ ಚಿನ್ನಾಭರಣ ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ತೊಂಡವಾಡಿ ಗ್ರಾಮದ ಟಿ.ಎಸ್.ಸುಶೀಲಮ್ಮ ಮನೆಯಲ್ಲಿ ಮಧ್ಯರಾತ್ರಿ ಒಬ್ಬರೇ ಮಲಗಿದ್ದಾಗ ಮನೆಯ ಮೇಲ್ಛಾವಣಿ ಮೂಲಕ ಒಳ ಪ್ರವೇಶಿಸಿ ಹಾಸಿಗೆ ಬಳಿ ಇಟ್ಟಿದ್ದ 70 ಸಾವಿರ ರೂ. ಮೌಲ್ಯದ ಚಿನ್ನದ ಆಭರಣಗಳನ್ನು ಕದ್ದು, ಮನೆಯ ಹಿಂಬಾಗಿಲಿನಿಂದ ಓಡಿ ಪರಾರಿಯಾಗಿದ್ದಾನೆ. ಅಂದಾಜು 30 ಗ್ರಾಂ ತೂಕದ ಸರ, ನಾಲ್ಕು ಗ್ರಾಂ ತೂಕದ 2 ಚಿನ್ನದ ತಾಳಿ, ಮೂರು ಗ್ರಾಂ ತೂಕದ ನಾಲ್ಕು ಚಿನ್ನದ ಗುಂಡುಗಳು ಸೇರಿದಂತೆ ಕಳುವಾಗಿವೆ ಎಂದು ಟಿ.ಎಸ್. ಸುಶೀಲಮ್ಮ ಅವರ ಮಗ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.


ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 21-12-2025



> ನಿಮ್ಮಲ್ಲಿ ಸಾಸಿವೆ ಕಾಳಿನಷ್ಟು ಶ್ರದ್ಧೆಯಿದ್ದರೆ, ನೀವೊಂದು ಬೆಟ್ಟಕ್ಕೆ 'ಈ ಜಾಗದಿಂದ ಆ ಜಾಗಕ್ಕೆ ಚಲಿಸು' ಎಂದು ಹೇಳಿದರೆ ಅದು ಚಲಿಸುತ್ತದೆ
> – ಯೇಸುಕ್ರಿಸ್ತ

ಕ್ರೈಸ್ತ ಬಾಂಧವರ ಪವಿತ್ರ ದಿನ
ಕ್ರಿಸ್‌ಮಸ್





ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಮಾನವ ಕುಲಕ್ಕೆ ಮನುಷ್ಯತ್ವದ ಪಾಠ ಹೇಳಿ ಕತ್ತಲಿಂದ ಬೆಳಕಿನತ್ತ ಅವರನ್ನು ಕರೆದೊಯ್ದು ಜಗತ್ತನ್ನೇ ಜ್ಯೋತಿಸ್ವರೂಪ ಮಾಡಿ ಆ ಬೆಳಕಿನಲ್ಲಿ ಇಡೀ ಮಾನವಕುಲವನ್ನು ಉದ್ಧರಿಸಲು ಅವತರಿಸಿದ ಮಹಾಪುರುಷರು ಜಗತ್ತಿನಲ್ಲಿ ಅನೇಕರುಂಟು. ಅವರಲ್ಲಿ ಬುದ್ಧ ಮತ್ತು ಯೇಸು ಅತ್ಯಂತ ಪ್ರಮುಖರು. ಒಬ್ಬ ಸಕಲೈಶ್ವರ್ಯದ ಒಡೆಯನಾಗಿ ರಾಜಕುಮಾರನಾಗಿ ಹುಟ್ಟಿದರೂ ಜಗದ ಸುಖಕ್ಕಾಗಿ ತನ್ನ ಸುಖವನ್ನೆಲ್ಲಾ ತ್ಯಾಗಗೈದು ಮಾನವ ಕಲ್ಯಾಣಕ್ಕಾಗಿ ನಿಂತು ದೇವಪುರುಷನಾದವನು. ಮತ್ತೊಬ್ಬ ಕುರಿಕೊಟ್ಟಿಗೆಯಲ್ಲಿ ಸಾಮಾನ್ಯನಾಗಿ ಹುಟ್ಟಿ ಅಸಾಮಾನ್ಯನಾಗಿ ಬೆಳೆದು ಮಾನವಕೋಟಿಗೆ ಬೆಳಕು ತೋರುವ ಮಾರ್ಗದಲ್ಲಿ ತನ್ನನ್ನೇ ಉರಿಸಿಕೊಂಡು ಬಲಿಯಾಗಿ ದೇವಮಾನವನಾದವನು. ಈ ಮಹಾತ್ಮರಿಬ್ಬರೂ ಮನುಷ್ಯತ್ವದಿಂದ ದೈವತ್ವಕ್ಕೇರಿದವರು. ಜಗದೇಳಿಗೆಗಾಗಿ ಇವರಿಬ್ಬರೂ ಪಟ್ಟ ಪಾಡುಗಳು ಅಷ್ಟಿಷ್ಟಲ್ಲ. ಅದರಲ್ಲೂ ಯೇಸು ಅನುಭವಿಸಿದ ಯಾತನೆ ಸಾಮಾನ್ಯವಲ್ಲ. ಇಂಥ ಯಾತನೆಯಲ್ಲೂ ಸತ್ಯಶೋಧಕನಾಗಿ ತನ್ನ ತತ್ವಾದರ್ಶಗಳಿಂದ ವಿಶ್ವಕ್ಕೆ ಮಹಾಬೆಳಕು ನೀಡಿದ ಮಹಾಪುರುಷ ಯೇಸುಕ್ರಿಸ್ತ ವಿಶ್ವವಂದಿತನೇ ಸರಿ!

ತನ್ನ ಶಿಲುಬೆಯ ತಾನೆ ಹೊತ್ತನಲ್ಲ ಗುರು ಯೇಸು, ನಿನ್ನ ಕರ್ಮದ ಹೊರೆಯ ಬಿಡದೆ ನೀನೇ ಹೊರು.... ಇದು ದಾರ್ಶನಿಕ ಕವಿ ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೇಳಿರುವ ಕಾವ್ಯ ನುಡಿಗಳು. ಇದಿಷ್ಟೇ ಸಾಕು ದೇವಪುತ್ರ ಯೇಸುವಿನ ಬ್ರಹ್ಮಾಂಡ ವ್ಯಕ್ತಿತ್ವದ ಮಹಾದರ್ಶನಕೆ.

ಪರೋಪಕಾರಾರ್ಥ ಪುಣ್ಯಾಯ ಪಾಪಾಯ ಪರಪೀಡನಂ ಎಂಬ ಮಾತು 'ಮಹಾಭಾರತ'ದಲ್ಲಿದೆ. ಅಂದರೆ ನಮ್ಮ ಕೃತ್ಯಗಳಿಂದ ಇನ್ನೊಬ್ಬರಿಗೆ ತೊಂದರೆಯಾಗುವುದು, ಅವರು ಕಣ್ಣೀರಿಡುವಂತಾಗುವುದು, ನಿಟ್ಟುಸಿರು ಬಿಡುವಂತಾಗುವುದು ಪಾಪದ ಕೆಲಸ, ನಮ್ಮಿಂದ ಒಳ್ಳೆಯ ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ ಕಡೇಪಕ್ಷ ಇನ್ನೊಬ್ಬರಿಗೆ ಹಿಂಸೆಯಾಗುವ, ಅವರು ಜೀವನಪೂರ್ತಿ ದುಃಖಿಸುವಂತಾಗುವ ಕೆಟ್ಟ ಕೆಲಸ ಮಾಡುವುದು ಸರಿಯಲ್ಲ. ಸತ್ಯ ಮತ್ತು ಧರ್ಮದ ಮಾರ್ಗದಿಂದ ನಮ್ಮನ್ನು ದೂರ ಮಾಡುವಂಥದ್ದು ಸತ್ಕರ್ಮಗಳಲ್ಲ. ಇದು ಯೇಸುವಿನ ಬದುಕಿಗೊಂದು ಭಾಷ್ಯವೆನ್ನಬಹುದು. 'ಪಾಪಿಗಳನ್ನು ರಕ್ಷಿಸುವುದೇ ತನ್ನ ಜೀವನದ ಉದ್ದೇಶ' ಇದು ಯೇಸುವಿನ ಸ್ಪಷ್ಟ ಸಂದೇಶ. ನರಕದ ದಾರಿ ಸುಗಮ. ಆದರೆ ಸ್ವರ್ಗದ ದಾರಿ ದುರ್ಗಮ. ದುರ್ಗಮವಾದರೂ ಸರಿಯೇ ಸ್ವರ್ಗದ ದಾರಿಯಲ್ಲಿ ಸಾಗುವುದೇ ಬದುಕಿನ ಗುರಿಯಾಗಬೇಕು. ಅದರಿಂದಲೇ ಬದುಕು ಸಾರ್ಥಕವೆಂಬ ಯೇಸುವಿನ ಒಡಲು ಶಾಂತಿಯ ಮಹಾಕಡಲು. ಅಷ್ಟೇ ಕ್ಷಮೆಯ ಮಹಾಮಡಿಲು. 'ಓರ್ವ ಶ್ರೀಮಂತ ಸ್ವರ್ಗಕ್ಕೆ ಹೋಗುವುದಕ್ಕಿಂತ ಒಂದು ಒಂಟೆ ಸೂಜಿಯ ಕಣ್ಣಲ್ಲಿ ಹಾದು ಹೋಗುವುದು ಸುಲಭದಾಯಕ'. ಅದೆಷ್ಟೋ ಇಂಥ ಮಾರ್ಮಿಕ ನುಡಿಮುತ್ತುಗಳು ಯೇಸುವಿನ ಬೋಧನೆಯ ಬೃಹತ್ ಭಂಡಾರದಲ್ಲಿ ತುಂಬಿ ತುಳುಕಿವೆ. ಯೇಸುವಿನ ಬೋಧನೆಗಳೆಂದರೆ ಅವು ಬರೀ ಉಪದೇಶಗಳಲ್ಲ ಕಾರ್ಗತ್ತಲಲ್ಲಿ ಕಾಣುವ ಬೆಳಕಿನ ಕಿರಣಗಳು.

ಇಂಥ ಶಾಂತಿದೂತ ದೇವಪುರುಷ ಯೇಸುಕ್ರಿಸ್ತನು ಜೋಸೆಫ್ ಮತ್ತು ಮೇರಿಯ ಸುಪುತ್ರನಾಗಿ ಜನಿಸಿದ್ದು 'ಡಿಸೆಂಬರ್ 25'. ಇದೇ ದಿನ ಕ್ರಿಸ್ತನ ಜನನವಾಯಿತೆಂಬುದಕ್ಕೆ ನಿಖರವಾಗಿ ಯಾವ ಆಧಾರಗಳೂ ಇಲ್ಲದಿದ್ದರೂ ಕ್ರೈಸ್ತ ಧರ್ಮೀಯರ ಸಾಂಪ್ರದಾಯಿಕ ನಂಬಿಕೆಯಿದೆ. ಹಾಗಾಗಿ ಅಂದು ಯೇಸುವಿನ ಜನ್ಮ ದಿನೋತ್ಸವದ 'ಕ್ರಿಸ್‌ಮಸ್' ಆಚರಣೆ ಜಗತ್ತಿನಾದ್ಯಂತ ಜರುಗುತ್ತದೆ. ಕ್ರಿಸ್‌ಮಸ್ ಡೇಗೆ ಜಾಗತಿಕ ವೈಭವವಿದೆ. ಆದರೆ ಯೇಸುವಿನ ಜನನದ ದಿನ ನಿಖರವಾಗಿ ಗೊತ್ತಿಲ್ಲದ ಕಾರಣ ಕ್ರೈಸ್ತ ಸಮುದಾಯಗಳಲ್ಲೊಂದಾದ ಬ್ರದರಿನ್ ಚರ್ಚ್‌ನವರು ಮತ್ತು ಬೆತ್ಸಾಯಿದ ಚರ್ಚ್‌ನವರು ಅಂದು ಕ್ರಿಸ್‌ಮಸ್ ಆಚರಿಸುವುದಿಲ್ಲ. ಬದಲಿಗೆ ಅವರುಗಳು ಜನವರಿ ಒಂದರಂದು ಹೊಸ ವರ್ಷಾಚರಣೆಯನ್ನು ಆಚರಿಸುತ್ತಾರೆ. ಒಟ್ಟಿನಲ್ಲಿ ಕ್ರಿಸ್‌ಮಸ್ ಎಂಬುದು ಕ್ರಿಶ್ಚಿಯನ್ನರಿಗೆ ಒಂದು ಪವಿತ್ರ ದಿನ. ಅವರಿಗೆ ಅದೊಂದು ಸಂತಸ ಸಂಭ್ರಮಗಳ ಮಹಾಹಬ್ಬ. ಇದರ ಕೇಂದ್ರ ಬಿಂದು 'ಕ್ರಿಸ್ತಶಕ'ದ ಹುಟ್ಟಿಗೆ ಕಾರಣವಾಗಿ ಶಕಾರಂಭ ಮಾಡಿದ ಶಕಪುರುಷ ಯೇಸುಕ್ರಿಸ್ತ.

ಯೇಸುಕ್ರಿಸ್ತ ಹುಟ್ಟಿದ್ದು ಮೇರಿಯಲ್ಲಿ. ಆಗಷ್ಟೇ ಜೋಸೆಫ್‌ನೊಡನೆ ವಿವಾಹ ನಿಶ್ಚಯವಾಗಿದ್ದ ಮೇರಿ ತನ್ನ ಗರ್ಭದಲ್ಲಿ ಯೇಸುವನ್ನು ಪವಿತ್ರಾತ್ಮ ನಿಂದ ಹೊತ್ತಿದ್ದಳು. ದೇವವಾಣಿಯಿಂದ ಆ ಮಗುವಿನ ಮಹತ್ವ ಅರಿತ ಜೋಸೆಫನು ಮೇರಿಗೆ ಹೆರಿಗೆಯಾಗುವ ತನಕವೂ ಬಹಳ ಜೋಪಾನ ಮಾಡಿದ್ದ. ಅದೊಂದು ಶುಭ ದಿನ, ಜನಗಣತಿಗಾಗಿ ಜೋಸೆಫ್–ಮೇರಿ ಜೊತೆಯಾಗಿ ಬೆತ್ಲೆ ಹೇಮ್‌ಗೆ ಹೋಗಿದ್ದಾಗ ಅಲ್ಲಿ ಮೇರಿ ಮಾತೆಯಾಗಿ, ಕುರಿಕೊಟ್ಟಿಗೆಯಲ್ಲಿ ಜಗದ ಬೆಳಕಾದ ಯೇಸುಕ್ರಿಸ್ತನಿಗೆ ಜನ್ಮ ನೀಡಿದ್ದಳು.

> **ಈ ಲೌಕಿಕ ಲೋಕದಲ್ಲಿ ಯೇಸು ಜೀವಿಸಿದ್ದು ಕೇವಲ 33 ವರ್ಷಗಳು ಮಾತ್ರ, ಆದರೆ ಅವನ ಸಾಧನೆ ಲೋಕವಿರುವತನಕವೂ ಬೆಳಕಿನ ತೋರುಮಾರ್ಗವಾಗುಳಿದಿದೆ. ಯೇಸುವಿನ ತತ್ವಾದರ್ಶಗಳ ಬೋಧನೆಯ 'ಬೈಬಲ್' ಕ್ರಿಶ್ಚಿಯನ್ನರಿಗೆ ಮಾತ್ರವಲ್ಲದೆ ಒಳಿತನ್ನು ಪ್ರೀತಿಸುವವರೆಲ್ಲರಿಗೂ ಸದ್ಭಾವನಾ ಗ್ರಂಥವಾಗಿದೆ. ಕ್ರಿಸ್‌ಮಸ್ ಆಚರಣೆಯೂ ಸಹ ಭಾವೈಕ್ಯತೆಯ ಬೆಳಕನ್ನು ಚೆಲ್ಲುವುದೇ ಆಗಿದೆ. ಹಾಗೆಯೇ ಯೇಸುವಿನ ಮರಣ ಮತ್ತು ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ಪ್ರಾಮುಖ್ಯ ದಿನಗಳಾಗಿವೆ.**

ಆಗ ಒಂದು ಕ್ಷಣ ಇಡೀ ಬೆತ್ಲೆಹೇಮ್ ನಗರದಲ್ಲಿ ಮಿಂಚು ಹೊಳೆದಂತಹ ಅನುಭವವಾಗಿತ್ತಂತೆ.

ಯೇಸು ಮೂಲತಃ ಒಬ್ಬ ಯಹೂದಿ. ಪ್ಯಾಲೆಸ್ಟೈನ್ ದೇಶ ಅಂದರೆ ಈಗಿನ ಇಸ್ರೇಲ್ ಅವನ ಮೂಲನೆಲೆ. ಯೇಸು ಜನಿಸಿದ ಆ ಕಾಲದಲ್ಲಿ ಪ್ಯಾಲೆಸ್ಟೈನ್ ದೇಶದ ಬದುಕು ಸಂಪೂರ್ಣ ಯಹೂದಿ ಸಂಸ್ಕೃತಿಯದ್ದಾಗಿತ್ತು. ಮಾನವ ಕುಲಕ್ಕೆ ಮಾರಕವಾದ ಕಂದಾಚಾರ, ಮೂಢನಂಬಿಕೆಯಂತಹ ಅನಿಷ್ಟ ಪದ್ಧತಿಗಳನ್ನು ವಿರೋಧಿಸಿ ಸರ್ವರ ಉದ್ಧಾರದ ಸಮಾಜ ನಿರ್ಮಿಸುವತ್ತ ಯೇಸು ನಡೆದ. ಆನೆ ನಡೆದದ್ದೇ ಹಾದಿ ಎಂಬಂತಹ ದಿಟ್ಟ ಹೆಜ್ಜೆಗಳು ಅವನದು. ಸಕಲರಿಗೂ ಲೇಸನ್ನು ಬಯಸುವ ಮಾನವೀಯತೆಯ ತಳಹದಿಯಲ್ಲಿ ಅವನು ಕ್ರೈಸ್ತ ಧರ್ಮವನ್ನು ಸ್ಥಾಪಿಸಿದ. ಇದೇ ಯೇಸುವಿಗೆ ಮುಳುವಾದದ್ದು. ಒಳ್ಳೆಯದನ್ನು ಮಾಡಲು ಹೋಗಿ ಕೆಟ್ಟವರ ಕೆಂಗಣ್ಣಿಗೆ ಯೇಸು ಗುರಿಯಾದದ್ದಷ್ಟೇ ಅಲ್ಲ ಬಹು ಮುಖ್ಯವಾಗಿ ಯಹೂದಿ ಪುರೋಹಿತಶಾಹಿಗಳನ್ನು ವಿರೋಧ ಕಟ್ಟಿಕೊಂಡ. ಯಹೂದಿ ಧರ್ಮಗುರುಗಳಿಗಂತೂ ಯೇಸು ಬೇಡವೇ ಬೇಡವಾಗಿದ್ದ. ಪರಿಣಾಮ ರಾಜದ್ರೋಹದ ಆಪಾದನೆ ಇವನ ಹೆಗಲೇರಿತ್ತು. ಇದರಿಂದಾಗಿ ನ್ಯಾಯ, ನೀತಿ, ಧರ್ಮ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ತ್ಯಾಗಗಳ ಸಂಗಮವೇ ಆಗಿ ಮನುಷ್ಯತ್ವದ ಮೇರು ಪರ್ವತವೇ ಆಗಿದ್ದ ಇಂಥ ದೈವೀಕ ಪುರುಷ ಯೇಸುವನ್ನು ಕಠಿಣ ಚಿತ್ರಹಿಂಸೆಗೊಳಪಡಿಸಿ ದೇಶಾಧಿಕಾರಿ ಪಿಲಾತನು ಮರಣದಂಡನೆಯ ಶಿಲುಬೆಗೇರಿಸಿದ. ಯೇಸುವಿನ ಬಲಿದಾನ ಹೀಗಾಗಿತ್ತು. ಅದು ಎಷ್ಟೊಂದು ಘೋರ ದುರಂತವಾಗಿತ್ತೆಂಬುದನ್ನು ಹೇಳಲು ಅಕ್ಷರಗಳೂ ಕಣ್ಣೀರಿಡುವಂಥ ಮಹಾ ದುರಂತವದು. ಆದರೆ, ಯೇಸು ಶಿಲುಬೆಗೇರಿದ ಮೂರನೆಯ ದಿನ ಪುನರುತ್ಥಾನಗೊಂಡು ತನ್ನ ಆಪ್ತೇಷ್ಟರನೇಕರಿಗೆ ದರ್ಶನಕೊಟ್ಟರು. ಆಮೇಲೆ ನಲವತ್ತು ದಿನಗಳ ಕಾಲ ತಮ್ಮ ಶಿಷ್ಯಕೋಟಿಯ ಜೊತೆಯಲ್ಲಿದ್ದು ಅವರ ಸಮ್ಮುಖದಲ್ಲೇ ಒಂದು ದಿನ ಸ್ವರ್ಗದತ್ತ ಪಯಣ ಬೆಳೆಸಿದರು. ಆ ಮಹಾದಿನವೇ ಯೇಸುವಿನ ಸ್ವರ್ಗಾರೋಹಣ ದಿನ. ಯೇಸುವಿನ ಜನನ, ಮರಣ, ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ದಿನಗಳಾಗಿವೆ.

ಯೇಸು ಬೆತ್ಲೆಹೇಮ್‌ನಲ್ಲಿ ಜನಿಸಿದರೂ ಅವನ ಊರು ಗಲಿಲೇಯ ಪ್ರಾಂತ್ಯದ ನಜರೇತ್ ಎಂಬ ಪುಟ್ಟ ಗ್ರಾಮ. ಇದು ಅವನ ಮತ್ತು ಅವನ ತಂದೆ ಜೋಸೆಫ್‌ನ ಊರಷ್ಟೇ ಅಲ್ಲ, ಯೇಸುವಿನ ತಾಯಿ ಮೇರಿಯ ತವರೂ ಹೌದು. ತನ್ನ ತಂದೆ–ತಾಯಿಗಳೊಂದಿಗೆ ಯೇಸು ಬೆಳೆದು ಬಾಳಿದ ಮನೆ ಈಗಲೂ ಅಲ್ಲಿದೆ. ಈ ಮನೆಯನ್ನು ಸಂರಕ್ಷಿಸಿ ಅದರ ಮೇಲೆಯೇ ಬಹು ಭವ್ಯವೂ ದಿವ್ಯವೂ ಆದ ಚರ್ಚ್‌ನ್ನು ಕಟ್ಟಲಾಗಿದೆ. ಈ ನಜರೇತ್ ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ ಯೇಸು ತನ್ನ 12ನೇ ವಯಸ್ಸಿನಲ್ಲೇ ಮತಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿ ಅಗಾಧ ಪಾಂಡಿತ್ಯ ಪಡೆದು ಪುಟ್ಟ ವಯಸ್ಸಿನಲ್ಲೇ ಗಲಿಲೇಯದಲ್ಲಿ ಬೋಧನೆ ಮಾಡಿ ಎಲ್ಲರನ್ನೂ ಆಕರ್ಷಿಸಿದ್ದ. ಅಷ್ಟೇ ಅಲ್ಲ ಜೆರುಸಲೇಮ್ ಪಟ್ಟಣದ ತುಂಬಾ ಪ್ರಸಿದ್ಧಿ ಗಳಿಸಿದ್ದ. 13ನೇ ವಯಸ್ಸಿಗೆ ಯಾರಿಗೂ ಕಾಣಿಸದೆ ಎತ್ತಲೋ ಮಾಯವಾಗಿ ಹೊರಟು ಹೋಗಿದ್ದ ಯೇಸು ಮತ್ತೆ ಜನರೆದುರು ಕಾಣಿಸಿಕೊಂಡದ್ದು ತನ್ನ 31ನೇ ವಯಸ್ಸಿನಲ್ಲಿ. ಈ ನಡುವೆ ಸುಮಾರು 19 ವರ್ಷಗಳು ಪ್ರಪಂಚ ಪ್ರದಕ್ಷಿಣೆ ಮಾಡಿದ್ದ ಯೇಸು ಜ್ಞಾನಾರ್ಜನೆಯಲ್ಲಿ ತೊಡಗಿ ಜ್ಞಾನದ ಮಹಾವೃಕ್ಷವೇ ಆಗಿದ್ದ. ಆ ಸಮಯದಲ್ಲೇ ಯೇಸು ಭಾರತಕ್ಕೂ ಭೇಟಿ ನೀಡಿದ್ದನೆಂದು ಹೇಳುವುದುಂಟು. ಹಾಗಾಗಿ ಯೇಸು ಹಿಂದೂ ಧರ್ಮ ಮತ್ತು ಬೌದ್ಧಧರ್ಮಗಳು ಸೇರಿದಂತೆ ಜಗತ್ತಿನ ಎಲ್ಲಾ ಧರ್ಮಗಳನ್ನೂ ಅವಲೋಕಿಸಿದ್ದನೆಂದು ಹೇಳಲಾಗುತ್ತದೆ.

ಯೇಸುಗೆ ಜೆರುಸಲೇಮ್ ಅತ್ಯಂತ ಪ್ರಿಯವಾಗಿತ್ತು. ಹಾಗಾಗಿ ಅದನ್ನು ಅವನು ತನ್ನ ಕರ್ಮಭೂಮಿ ಮಾಡಿಕೊಂಡಿದ್ದ. ಜೆರುಸಲೇಮ್ ಎಂಬುದು ಸಾಮಾನ್ಯ ಸ್ಥಳವಲ್ಲ. ಮೂರು ಸಾವಿರಕ್ಕೂ ಹೆಚ್ಚು ವರ್ಷಗಳ ಹಿಂದಿನ ಪುರಾತನ ನಗರವದು. ಯಹೂದ್ಯ ವೀರ ಡೇವಿಡ್ ಇದನ್ನು ರಾಜಧಾನಿ ಮಾಡಿಕೊಂಡಿದ್ದ. ಅವನ ಮಗ ಸಾಲೋಮನ್ ಇಲ್ಲೊಂದು ಬೃಹತ್ ಚರ್ಚ್ ನಿರ್ಮಿಸಿದ್ದಾನೆ. ಯಹೂದಿಗಳ ಪ್ರಮುಖ ಧಾರ್ಮಿಕ ಸ್ಥಳ ಅಳುವಗೋಡೆ (Wailing Wall) ಇರುವುದು ಇಲ್ಲಿಯೇ. ಕ್ರೈಸ್ತ, ಇಸ್ಲಾಂ, ಯಹೂದ್ಯ ಮತಗಳ ತ್ರಿವೇಣಿ ಸಂಗಮವಿದು. ಎಲ್ಲಕ್ಕಿಂತ ಮಿಗಿಲಾಗಿ ಯೇಸು ಶಿಲುಬೆಗೇರಿದ್ದು ಇದೇ ಜೆರುಸಲೇಮ್‌ನಲ್ಲೇ. ಯೇಸುವಿಗೆ ದೀಕ್ಷೆಕೊಟ್ಟ ಗುರು ಜಾನ್ ಜನಿಸಿದ್ದು ಕೂಡ ಇಲ್ಲಿಯೇ. ಡಿ.ವಿ.ಜಿ. ಹೇಳುವಂತೆ ತನ್ನ ಶಿಲುಬೆಯನ್ನು ತಾನೇ ಹೊತ್ತು ನಡೆದ ಕ್ರಿಸ್ತನ ದುಃಖಸಾಗರದ ದಾರಿ ಜೋರ್ಡಾನ್ ನದಿ ಕೂಡ ಇಲ್ಲಿಯೇ ಹರಿಯುವುದು. ಅಷ್ಟೇ ಅಲ್ಲ, ಯೇಸುವಿನ ಕಳೇಬರ ಇರುವ ಸಮಾಧಿ ಇರುವುದು ಇದೇ ಪುಣ್ಯಸ್ಥಳದಲ್ಲಿ. ಕ್ರಿಸ್‌ಮಸ್‌ನಲ್ಲಿ ಇದರ ವೈಭವ ವರ್ಣಿಸಲಸದಳ. ಸ್ವರ್ಗವೆಂಬುದು ಇಲ್ಲಿ ಅಕ್ಷರಶಃ ತೆರೆದುಕೊಂಡಿರುತ್ತದೆ. ಕ್ರಿಶ್ಚಿಯನ್ನರಿಗಂತೂ ಇದೊಂದು ಅದ್ಭುತಲೋಕ.

ಈ ಲೌಕಿಕ ಲೋಕದಲ್ಲಿ ಯೇಸು ಜೀವಿಸಿದ್ದು ಕೇವಲ 33 ವರ್ಷಗಳು ಮಾತ್ರ. ಆದರೆ ಅವನ ಸಾಧನೆ ಲೋಕವಿರುವತನಕವೂ ಬೆಳಕಿನ ತೋರು ಮಾರ್ಗವಾಗುಳಿದಿದೆ. ಯೇಸುವಿನ ತತ್ವಾದರ್ಶಗಳ ಬೋಧನೆಯ 'ಬೈಬಲ್' ಕ್ರಿಶ್ಚಿಯನ್ನರಿಗೆ ಮಾತ್ರವಲ್ಲದೆ ಒಳಿತನ್ನು ಪ್ರೀತಿಸುವವರೆಲ್ಲರಿಗೂ ಸದ್ಭಾವನಾ ಗ್ರಂಥವಾಗಿದೆ. ಕ್ರಿಸ್‌ಮಸ್ ಆಚರಣೆಯೂ ಸಹ ಭಾವೈಕ್ಯತೆಯ ಬೆಳಕನ್ನು ಚೆಲ್ಲುವುದೇ ಆಗಿದೆ. ಹಾಗೆಯೇ ಯೇಸುವಿನ ಮರಣ ಮತ್ತು ಪುನರುತ್ಥಾನ ಹಾಗೂ ಸ್ವರ್ಗಾರೋಹಣ ದಿನಗಳು ಕ್ರಿಶ್ಚಿಯನ್ನರಿಗೆ ಅತ್ಯಂತ ಪವಿತ್ರ ಪ್ರಾಮುಖ್ಯ ದಿನಗಳಾಗಿವೆ.

ಮಕ್ಕಳ ಚಿತ್ರಕಥೆ
ನಾಲ್ವರು ಸ್ನೇಹಿತರು (ಕಳೆದ ವಾರದಿಂದ)

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199



1. ಆಮೆಯು ಕಾಗೆಯ ಮಾತನ್ನು ಕೇಳಿ ಬೆಚ್ಚಿ 'ನಾನು ಈ ಸರೋವರವನ್ನು ಬಿಟ್ಟು ಬೇರೆ ಯಾವುದಾದರು ಕೆರೆಯಲ್ಲಿ ವಾಸಿಸುವೆ' ಎಂದು ಹೇಳುತ್ತಾ ನಿಧಾನವಾಗಿ ಮುನ್ನಡೆಯಿತು.
2. ಆಗ ಕಾಗೆ, ಜಿಂಕೆ, ಇಲಿ ಸ್ನೇಹಿತ ಒಂಟಿಯಾಗಿ ಹೋಗಲು ಒಪ್ಪದೆ 'ಒಂಟಿಯಾಗಿ ಹೋಗಬೇಡ...!' ಎಂದು ಬುದ್ಧಿ ಮಾತು ಹೇಳುತ್ತಾ ಹಿಂಬಾಲಿಸತೊಡಗಿದವು.
3. ಆದರೆ, ಆಮೆಯ ದುರಾದೃಷ್ಟವೇನೋ ಒಬ್ಬ ಬೇಟೆಗಾರ ಎದುರಾಗಿ ನಿಧಾನ ಗತಿಯಲ್ಲಿ ಸಾಗುತ್ತಿದ್ದ ಆಮೆಯನ್ನು ಸೆರೆ ಹಿಡಿದು, ಸಂತೋಷದಿಂದ ತನ್ನ ಚೀಲದಲ್ಲಿ ಹಾಕಿಕೊಂಡು ಹೊರಟನು.
4. ಈ ದೃಶ್ಯ ಕಂಡ ಮೂವರು ಸ್ನೇಹಿತರೂ ಚಿಂತೆಗೀಡಾದರು. ಕಾಗೆಯು ಇಲಿಯನ್ನು ಕುರಿತು, 'ನೀನು ಬುದ್ಧಿವಂತ. ಆಮೆಯನ್ನು ಬಿಡಿಸಿಕೊಳ್ಳಲು ಏನಾದರೂ ಉಪಾಯ ಹೇಳು' ಎಂದಿತು.
5. ಇಲಿಯು ಸ್ವಲ್ಪ ಹೊತ್ತು ಯೋಚಿಸಿ. ಜಿಂಕೆಗೆ 'ನೀನು ಬೇಟೆಗಾರ ಸಾಗುವ ಹಾದಿಯಲ್ಲಿ ಸತ್ತು ಬಿದ್ದಿರುವಂತೆ ಮಲಗಿಕೊ. ಕಾಗೆಯು ನಿನ್ನ ಬಳಿ ಬಂದು ನಿನ್ನನ್ನು ಕಿತ್ತು ತಿನ್ನುತ್ತಿರುವಂತೆ ನಟಿಸಲಿ. ಮುಂದಿನ ಕೆಲಸವನ್ನ ನಾನು ನೋಡಿಕೊಳ್ಳುತ್ತೇನೆ' ಎಂದು ಹೇಳಿತು.
6. ಇಲಿಯ ಮಾತಿನಂತೆ ಜಿಂಕೆಯು ಹಾದಿಯಲ್ಲಿ ಸತ್ತು ಬಿದ್ದಿರುವಂತೆ ಮಲಗಿಕೊಂಡಿತು. ಕಾಗೆಯು ಅದನ್ನು ಕಿತ್ತು ತಿನ್ನುತ್ತಿರುವಂತೆ ನಟಿಸುತ್ತಾ ಬೇಟೆಗಾರನ ಬರುವಿಕೆಗಾಗಿ ಕಾಯುತ್ತಿದ್ದವು (ಮುಂದುವರೆಯುವುದು)

ವಾರಭವಿಷ್ಯ
21.12.2025 ರಿಂದ 27.12.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಧನುಸ್ಸು, ಚಂದ್ರ–ಧನುಸ್ಸು, ಮಕರ, ಕುಂಭ, ಮೀನ, ಕುಜ–ಧನುಸ್ಸು, ಬುಧ–ವೃಶ್ಚಿಕ, ಗುರು–ಮಿಥುನ, ಶುಕ್ರ–ಧನುಸ್ಸು, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಹಣಕಾಸಿನ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತದೆ. ವ್ಯಾಪಾರಗಳು ಕ್ರಮೇಣ ಲಾಭದಾಯಕವಾಗಿ ಸಾಗುತ್ತವೆ. ಮನೆಯ ಹೊರಗಿನವರೊಂದಿಗೆ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಂಡು ಮುಂದಿನ ಹೆಜ್ಜೆ ಇಡಿ. ವ್ಯಯಸ್ಥಾನದಲ್ಲಿ ಶನಿದೇವನಿರುವ ಕಾರಣ ಕೊಟ್ಟ ಸಾಲ ವಾಪಸ್ಸು ಬರುವುದಿಲ್ಲ. ತೆರಿಗೆ ಅಧಿಕಾರಿಗಳ ಕಿರುಕುಳ ಎದುರಾಗಬಹುದು. ವಾರದ ಕಡೆಗೆ ಪುಣ್ಯಕ್ಷೇತ್ರ ಸಂದರ್ಶನ.
ಶ್ರೀ ಗಣೇಶ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–5

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದ ಆದಿಗೆ ಸುಖ, ಸಂತೋಷದಿಂದ ಕಾಲ ಕಳೆಯುವುದು. ಶಿಕ್ಷಣದ ವಿಷಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವಿರಿ. ಆಸ್ತಿ ವಿಷಯದಲ್ಲಿ ಸಹೋದರರಲ್ಲಿ ಒಡಂಬಡಿಕೆಗಳು ಉಂಟಾಗುವುದು. ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರ ಹಾಗೂ ಧನಲಾಭವಾಗುವುದು. ದಾನ–ಧರ್ಮಗೈದು ಪ್ರಸಿದ್ಧಿಗೆ ಬರುವಿರಿ. ಗೃಹ ನಿರ್ಮಾಣ ಕಾರ್ಯಗಳು ನಿಧಾನಗತಿಯಲ್ಲಿ ಸಾಗುವುದರಿಂದ ಮನಸ್ಸಿಗೆ ಬೇಸರ.
ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ–9

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಚಂದ್ರನ ಶುಭ ಸಂಚಾರದ ಪರಿಣಾಮ ವಾರದ ಆರಂಭಕ್ಕೆ ಹರುಷದ ನಕ್ಷತ್ರ ಮಿನುಗಲಿದೆ. ಆತ್ಮೀಯರಿಂದ ದೊರೆತ ಆದರದ ಆಹ್ವಾನ ಆನಂದವನ್ನು ತರುತ್ತದೆ. ಮನೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸುವಿರಿ. ಆಸ್ತಿ ವಿಲೇವಾರಿ ಸಂಬಂಧದಲ್ಲಿ ಅಡ್ಡಿ ಆತಂಕಗಳು ಉಂಟಾಗುವುದು. ರಾಹುಗ್ರಹ ಶುಭವಿಲ್ಲ, ಗೋ, ಅಶ್ವ, ಧನಾದಿನಾಶ, ಪ್ರಯಾಣಗಳಲ್ಲಿ ಕ್ಲೇಶ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶ್ರೀ ಶ್ರೀನಿವಾಸ ದೇವರ ದರ್ಶನ. ಶುಭ ಸಂಖ್ಯೆ–4

ಕಟಕ (ಹೊ,ಹು,ಹೆ,ಡ,ಡಿ,ಡು)
ವಾರದಾರಂಭಕ್ಕೆ ಇಷ್ಟಾರ್ಥಸಿದ್ಧಿ. ಕೆಲವು ವಿಷಯಗಳು ಅಯಾಚಿತವಾಗಿ ಫಲಿಸುವುದು. ನೆರೆಹೊರೆಯಲ್ಲಿ ಸೌಜನ್ಯದಿಂದ ವರ್ತಿಸಿರಿ. ಅನ್ಯಥಾ ವಿಕೋಪಕ್ಕೆ ಹೋಗುವುದು. ವ್ಯಯಸ್ಥಿತ ಗುರುಗ್ರಹದ ಕಾರಣ ವ್ಯಾಪಾರ ವ್ಯವಹಾರಗಳು ಸುಗಮವಾಗಿ ಸಾಗದು. ಆರೋಗ್ಯದಲ್ಲಿಯೂ ವ್ಯತ್ಯಯವನ್ನು ಕಾಣುವಿರಿ. ಇದನ್ನು ಲಘುವಾಗಿ ಪರಿಗಣಿಸದೆ ಸೂಕ್ತ ವೈದ್ಯರ ಸಲಹೆ ಪಡೆಯಿರಿ. ಮನೆ ದೇವ ದರ್ಶನ ಅಗತ್ಯವಾಗಿ ಮಾಡಿ.
ಶ್ರೀ ಮಾರುತಿ ಉಪಾಸನೆ, ಶುಭ ಸಂಖ್ಯೆ–2

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಆಸ್ತಿ ವಿಷಯದಲ್ಲಿ ಹೊಸ ಒಪ್ಪಂದಗಳು ನಿಮ್ಮ ಅನುಕೂಲದಂತೆ ಆಗುವುದು. ಉದ್ಯೋಗಾಕಾಂಕ್ಷಿಗಳಿಗೆ ಶುಭ ಸಮಾಚಾರ ಬರಬಹುದು. ನಿಮ್ಮ ಕ್ರಿಯಾಶಕ್ತಿ ಉತ್ತಮ ಮಟ್ಟದ್ದಾಗಿರುತ್ತದೆ. ಸಾಮಾಜಿಕ ಸೇವೆಯಿಂದ ನಿಮ್ಮ ಗೌರವ, ಪ್ರತಿಷ್ಠೆಗಳು ಹೆಚ್ಚಳವಾಗುವುದು. ಕೊಟ್ಟ ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ. ಜನ್ಮಸ್ಥ ಕೇತುವಿನ ಕಾರಣ ಮಾನಸಿಕ ಭಾವೋದ್ರೇಕಕ್ಕೆ ಒಳಗಾಗುವಿರಿ.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–8

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ವಾರದಾರಂಭಕ್ಕೆ ದ್ರವ್ಯಲಾಭ, ಬರಬೇಕಾದ ಹಣ ಕೈಗೆ ಬರುವುದು. ಬರೀ ಕಷ್ಟ ಪಡುವುದರಿಂದಲೇ ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುವುದು. ಗ್ರಹಗತಿಗಳು ಅನುಕೂಲವಿಲ್ಲದ ಕಾರಣ ಮನೆಯಲ್ಲೂ, ಹೊರಗೂ ಪ್ರೀತಿ ವಾತ್ಸಲ್ಯದಿಂದ ಇರಲು ಪ್ರಯತ್ನಿಸಿ. ವ್ಯಾಪಾರ ಸ್ಥಳದಲ್ಲಿ ಪ್ರತಿಸ್ಪರ್ಧಿಗಳಿಗೆ ಹಿನ್ನಡೆ ಉಂಟಾಗುವುದು. ವಾರದ ಕಡೆಗೆ ದೇಹಸೌಖ್ಯವನ್ನು ಮರಳಿ ಪಡೆಯುವಿರಿ.
ಶ್ರೀ ಮನ್ನಾರಾಯಣ ನಾಮ ಜಪಿಸಿ. ಶುಭ ಸಂಖ್ಯೆ–1

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಬೃಹಸ್ಪತಿ ಎಂಬ ಶುಭಗ್ರಹದ ಶುಭ ವೀಕ್ಷಣೆ ನಿಮ್ಮ ಬೆಂಗಾವಲಿಗಿದೆ. 'ಶ್ರದ್ಧಾವಾನ್ ಲಭತೇ ಫಲಂ' ಎಂಬ ಶಾಸ್ತ್ರೋಕ್ತಿಯಂತೆ ನೀವು ಮಾಡುವ ಕೆಲಸದಲ್ಲಿ ತನ್ಮಯತೆ ಇರಲಿ, ಶುಭ ಫಲ ತಾನೇ ದೊರೆಯುವುದು. ನಿಮ್ಮ ಮಾತೃಶ್ರೀಯವರ ಆಶೀರ್ವಾದದಿಂದ ಸಾಮಾಜಿಕ ಕೆಲಸಗಳು ಸುಖಾಂತ್ಯವಾಗುವುದು. ರೈತಾಪಿ ಜನರಿಗೆ ದೈವಕೃಪೆಯಿಂದ ಉತ್ತಮ ಬೆಳೆಯೂ, ಬೆಲೆಯೂ ದೊರೆಯಲಿದೆ.
ಶ್ರೀ ದೇವೀ ಉಪಾಸನೆ. ಶುಭ ಸಂಖ್ಯೆ–4

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)
ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಹಣಕಾಸಿನ ವಿಷಯದ ಬಗ್ಗೆ ಹೆಚ್ಚು ಆತಂಕ ಪಡುವ ಅಗತ್ಯವಿಲ್ಲ. ಯಾಕೆಂದರೆ ಖರ್ಚಿನ ಸಮಯಕ್ಕೆ ಸರಿಯಾಗಿ ಆದಾಯ ಒದಗಿ ಬರುವುದು. ಪಂಚಮ ಶನಿ ಇರುವ ಕಾರಣ ಯಾರೊಡನೆಯೂ ವಾಗ್ವಾದಕ್ಕೆ ಮುಂದಾಗದಿರಿ. ಪೊಲೀಸ್ ಠಾಣೆ ದರ್ಶನವಾಗಬಹುದು. ವಾಹನ ಚಲಿಸುವಾಗ ತಾಳ್ಮೆ ಮೀರಿದರೆ ಬಾಳ್ಮೆಗೆಟ್ಟು ಹೋಗುವುದು.
ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದ ಆದಿಗೆ ಪ್ರಿಯ ಜನರ ಸಂಗ ಸಹವಾಸದಿಂದ ಮನಸ್ಸಿಗೆ ಸಂತೋಷ. ಎಲ್ಲರಲ್ಲೂ ಪ್ರೀತ್ಯಾದರಗಳನ್ನು ಗಳಿಸುವಿರಿ. ನಿರೀಕ್ಷಿತ ಮೂಲಗಳಿಂದ ಧನ ಸಂಚಯವಾಗುವುದು. ಸತಿ–ಪತಿಯರಲ್ಲಿ ಅನುರಾಗ ಹೆಚ್ಚಾಗುವುದು. ಹಲವರಿಗೆ ಪುತ್ರ ಸಂತಾನದ ಸಂತಸ. ವಿದ್ಯಾ, ವ್ಯಾಸಂಗಗಳಲ್ಲಿ ಕೀರ್ತಿಗೆ ಭಾಜನರಾಗುವಿರಿ. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಕಿರುಕುಳ.
ಶ್ರೀ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ–3

ಮಕರ (ಬೊ,ಜ,ಜಿ,ಶಿ,ಶು,ಶೆ,ಶೊ,ಗ,ಗಿ)
ವಾರದಾರಂಭಕ್ಕೆ ಉದ್ಯೋಗದಲ್ಲಿ ಅಲ್ಪ ಪ್ರಗತಿ ಕಂಡು ಬಂದರೂ ನಿಮ್ಮ ಮನೋಬಲದಲ್ಲಿ ವೃದ್ಧಿಯನ್ನು ಕಾಣುವಿರಿ. ರಾಜಕಾರಣಿಗಳಿಗೆ ಉನ್ನತ ಸ್ಥಾನ ದೊರೆಯುವ ಸಂಭವವಿದೆ. ವಾರಮಧ್ಯೆ ವಿಲಾಸಿ ವಸ್ತುಗಳ ಖರೀದಿ. ಸಾಲ ಮಾಡಿದರೂ ಸದ್ವಿನಿಯೋಗವಾಗುತ್ತದೆ. ಸಹೋದರರ ಅಸಹಕಾರದಿಂದ ನಿಯೋಜಿತ ಕಾರ್ಯಗಳಲ್ಲಿ ಪ್ರಗತಿ ಕುಂಠಿತ. ಮನೆಯಲ್ಲಿ ಹಿರಿಯರ ಆರೋಗ್ಯ ಕೆಡಬಹುದು.
ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ದ್ವಿತೀಯ ಸ್ಥಾನದಲ್ಲಿ ಶ್ರೀ ಶನಿದೇವನ ಪರಿಭ್ರಮಣ. 'ಸಮಯಕ್ಕಾದವನೇ ನೆಂಟ' ಇದು ಪರಿಸ್ಥಿತಿ ಬಿಗಡಾಯಿಸಿದಾಗ ಹೀಗನಿಸುವುದುಂಟು. ಯೋಚಿತ ಕೆಲಸಗಳು ನಿಂತು ನಿಂತು ಸಾಗುತ್ತಿವೆ. ದೈವಬಲವಿದ್ದರೂ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ನೆರೆಹೊರೆಯಲ್ಲಿ ಭ್ರಾತೃತ್ವದಿಂದ ಮೆಚ್ಚುಗೆ ಪಾತ್ರರಾಗುವಿರಿ. ವಾರದ ಕಡೆಗೆ ವೃಥಾ ಅಲೆದಾಟಗಳಿಂದ ದೇಹಕ್ಕೆ ಆಯಾಸ. ವೈದ್ಯರ ಭೇಟಿ.
ಶ್ರೀ ಓಂ ನಮೋ ವಾಸುದೇವಾಯ ಮಂತ್ರ ಜಪಿಸಿ. ಶುಭ ಸಂಖ್ಯೆ–6

ಮೀನ (ದಿ,ದು,ಖ,ಝ,ಥ,ದೆ,ದೊ,ಚ,ಚಿ)
ವಾರದ ಆದಿಗೆ ಕೊಡುವ –ತರುವ ವ್ಯವಹಾರಗಳಲ್ಲಿ ಮಿಶ್ರ ಫಲ ದೊರೆಯಲಿದೆ. ಹಣಕಾಸಿನ ಹೊಂದಾಣಿಕೆ ಸುಸೂತ್ರವಾಗಿದ್ದರೂ ಅನಿರೀಕ್ಷಿತ ಖರ್ಚುಗಳು ಎದುರಾಗುವುದು. ರಾಶ್ಯಾಧಿಪನಾದ ಶ್ರೀ ಗುರುವಿನ ಅನುಗ್ರಹದ ಕೊರತೆ ಇದೆ. ದೊಡ್ಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಸೂಕ್ತ ಸಮಯವಲ್ಲ. ವಾಹನ ರಿಪೇರಿ ಖರ್ಚುಗಳು, ದೇಹಾಯಾಸ, ವೈದ್ಯರ ಭೇಟಿಗಳು ಅನಿವಾರ್ಯವೆನಿಸುವುದು. ಜಲಾಶಯಗಳ ಹತ್ತಿರ ಹುಡುಗಾಟ ಸಲ್ಲದು.
ಶ್ರೀ ಶನೇಶ್ವರ ಮೂಲಮಂತ್ರ ಜಪಿಸಿ. ಶುಭ ಸಂಖ್ಯೆ–2

ಹೆಚ್.ಡಿ.ಕೋಟೆಯಲ್ಲಿ ವೈಭವದ ಹನುಮ ಜಯಂತಿ ಮೆರವಣಿಗೆ

ರಾರಾಜಿಸಿದ ಕೇಸರಿ ಧ್ವಜ, ಮೊಳಗಿದ ಶ್ರೀರಾಮ, ಹನುಮ ಘೋಷಣೆ, ಸಾವಿರಾರು ಹನುಮ ಭಕ್ತರು ಭಾಗಿ





ಹೆಚ್.ಡಿ.ಕೋಟೆಯಲ್ಲಿ ಹನುಮ ಜಯಂತಿ ಮೆರವಣಿಗೆಗೆ ಜನಪ್ರತಿನಿಧಿಗಳು, ವಿವಿಧ ಮಠದ ಶ್ರೀಗಳು ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಭಾಗವಹಿಸಿರುವ ಜನಸ್ತೋಮ. ಮೆರವಣಿಗೆಗೆ ಮೆರಗು ತಂದ ಕಲಾ ತಂಡಗಳನ್ನು ಚಿತ್ರಗಳಲ್ಲಿ ಕಾಣಬಹುದು.

ಹೆಚ್.ಡಿ.ಕೋಟೆ, ಡಿ.20– ಪಟ್ಟಣದಲ್ಲಿ ಶನಿವಾರ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಕನಕ ಭವನದ ಆವರಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು, ಗೌಡಗೆರೆ ಮಠದ ನಟರಾಜ ಸ್ವಾಮೀಜಿ, ದಡದಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಸರಗೂರು ಪಡುವಲ ವೀರಕ್ತ ಮಠದ ಮಹದೇವ ಸ್ವಾಮೀಜಿ, ಹನುಮ ಸೇವಾ ಸಮಿತಿ ಅಧ್ಯಕ್ಷ ಬಿಡುಗಲು ರಾಜು, ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ, ಜಯಪ್ರಕಾಶ್ ಚಿಕ್ಕಣ್ಣ, ಸಾವಿರಾರು ಹನುಮ ಭಕ್ತರು ಶ್ರೀರಾಮ, ಹನುಮ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವೈಭವದ ಮೆರವಣಿಗೆಗೆ ಚಾಲನೆ ನೀಡಿ, ನಂದಿಕಂಬಕ್ಕೆ ಸಂಪ್ರದಾಯದಂತೆ ಪೂಜೆ ಸಲ್ಲಿಸಿದರು.

ಕನಕ ಭವನದ ಆವರಣದಿಂದ ಆರಂಭವಾದ ಮೆರವಣಿಗೆಯಲ್ಲಿ ನಂದಿ ಕಂಬ, ವೀರಗಾಸೆ, ಡೊಳ್ಳು ಕುಣಿತ, ಚಂಡೆ, ನಗಾರಿ, ಪಿಲಿಪಿಲಿ ಗೊಂಬೆ, ಪಟ ಕುಣಿತ, ಆದಿವಾಸಿಗಳ ನೃತ್ಯ, ಡಿಜೆ ಯುವತಿಯರು, ಯುವಕರ ಕುಣಿತದೊಂದಿಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಸಾಗಿ ವರದರಾಜ ಸ್ವಾಮಿ ದೇವಾಲಯದ ಆವರಣದಲ್ಲಿ ಸಂಪನ್ನಗೊಂಡಿತು.

> ಪ್ರತಿ ವರ್ಷ ಹನುಮ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಮಹರ್ಷಿ ವಾಲ್ಮೀಕಿ ಅವರು ಬರೆದ ರಾಮಾಯಣದಲ್ಲಿ ಹನುಮನ ಬಗ್ಗೆ ತುಂಬಾ ಒಳ್ಳೆಯ ವಿಚಾರಗಳನ್ನೂ ಉಲ್ಲೇಖ ಮಾಡಲಾಗಿದೆ. ನಾಡಿನ ಜನರಿಗೆ ಒಳಿತು ಮಾಡಲು ಹನುಮದ್ ವ್ರತ ತಾಲೂಕಿನಲ್ಲಿ ಆಚರಣೆ ಮಾಡುತ್ತಿದ್ದು ಸರ್ವರಿಗೂ ಒಳ್ಳೆಯದಾಗಲಿ. –ಅನಿಲ್ ಚಿಕ್ಕಮಾದು, ಶಾಸಕರು.

ಮಠಾಧೀಶರನ್ನು ತೆರೆದ ವಾಹನದಲ್ಲಿ ಕನಕ ಭವನದ ಆವರಣದಿಂದ ವರದ ರಾಜ ಸ್ವಾಮಿ ದೇವಸ್ಥಾನದ ಆವರಣದವರೆಗೆ ಮೆರವಣಿಗೆ ಮೂಲಕ ಕರೆತರಲಾಯಿತು. ಮೆರವಣಿಗೆಯಲ್ಲಿ ಕೇಸರಿ ಶಾಲು ಮತ್ತು ಧ್ವಜಗಳು ರಾರಾಜಿಸಿದವು. ಶಾಂತಿಯುತವಾಗಿ ನಡೆದ ಮೆರವಣಿಗೆಯಲ್ಲಿ ಶ್ರೀರಾಮ ಮತ್ತು ಹನುಮನ ಘೋಷಣೆಗಳು ಮೊಳಗಿತು. ಮೆರವಣಿಗೆಯಲ್ಲಿ ಹುಣಸೂರು ಡಿವೈಎಸ್ಪಿ ರವಿ ಅವರ ನೇತೃತ್ವದಲ್ಲಿ ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಗಂಗಾಧರ್, ನಾಲ್ವರು ಸಬ್ ಇನ್ಸ್‌ಪೆಕ್ಟರ್ ಸೇರಿದಂತೆ 250 ಹೆಚ್ಚು ಪೊಲೀಸ್ ಸಿಬ್ಬಂದಿಗಳು, ಕೆಎಸ್‌ಆರ್‌ಪಿ, ಡಿಆರ್ ತುಕಡಿಯೊಂದಿಗೆ ಸೂಕ್ತ ಬಂದೋ ಬಸ್ತು ಮಾಡಲಾಗಿತ್ತು.

ಪಟ್ಟಣ ಸೇರಿದಂತೆ ತಾಲೂಕಿನ ಬೇರೆ ಬೇರೆ ಗ್ರಾಮಗಳಿಂದ ಸಾವಿರಾರು ಹನುಮ ಭಕ್ತರು ಹನುಮದ್ ವ್ರತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದಾರಿಯುದ್ದಕ್ಕೂ ವಿವಿಧ ಸಂಘಗಳ ಮುಖಂಡರು ಮೆರವಣಿಗೆಯಲ್ಲಿ ಸಾಗಿ ಬಂದ ಹನುಮನ ಭಕ್ತರಿಗೆ ಮಜ್ಜಿಗೆ, ಪಾನಕ, ಕುಡಿಯುವ ನೀರು ಸೇರಿದಂತೆ ತಂಪು ಪಾನೀಯ ನೀಡಿ ದಣಿವು ತಣಿಸಿದರು. ವರದರಾಜ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರಸಾದ ವಿನಿಯೋಗ ಮಾಡಲಾಯಿತು.

ಹನುಮದ್ ವ್ರತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಗೌಡಗೆರೆ ಮಠದ ನಟರಾಜ ಸ್ವಾಮೀಜಿ ಸಕಲ ಮನುಕುಲಕ್ಕೆ ಸಂತೋಷವನ್ನುಂಟುಮಾಡುವ ಏಕೈಕ ಹಬ್ಬ ಹನುಮ ಜಯಂತಿ ಎಂದರು.

ಬಿಡಗಲು ಪಡವಲಮಠದ ಮಹಾದೇವ ಸ್ವಾಮಿಜಿ ಮಾತನಾಡಿದರು. ಮೆರವಣಿಗೆಯಲ್ಲಿ ರುದ್ರಪ್ಪ ವೆಂಕಟಸ್ವಾಮಿ, ಉದ್ಯಮಿ ಬೆಳ್ತೂರು ನಿಂಗರಾಜು, ಸುಬ್ಬಣ್ಣ, ಹನುಮ ಸೇವಾ ಸಮಿತಿ ತಾಲೂಕು ಅಧ್ಯಕ್ಷ ಬಿಡಗಲು ರಾಜು, ಹನುಮ ಸೇವಾ ಸಮಿತಿ ಉಪಾಧ್ಯಕ್ಷರುಗಳಾದ ಮಗ್ಗೆ ರೂಪೇಶ್, ಮೋಹನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಮುತ್ತುರಾಜ್, ಕೋಶಾಧ್ಯಕ್ಷ ಕನ್ನಡ ಪ್ರಮೋದ್, ಹನುಮ ಸೇವಾ ಸಮಿತಿ ಮಾಜಿ ಅಧ್ಯಕ್ಷರುಗಳಾದ ಡೈರಿ ಶ್ರೀಕಾಂತ್, ಚಂದ್ರಮೌಳಿ, ಜಯಂತ್, ನಂದೀಶ್, ಪ್ರಚಾರ ಸಮಿ ಸಂಚಾಲಕ ಸುಧಾಕರ್, ಕಾನೂನು ಸಲಹೆಗಾರ ನಾಗೇಶ್, ಹಣಕಾಸು ಸಮಿತಿ ಸಹ ಸಂಚಾಲಕ ಸುರೇಶ್, ನಗರ ಅಲಂಕಾರ ಸಮಿತಿ ಸಂಚಾಲಕ ಪ್ರಶಾಂತ್, ಅಕ್ಷಯ್, ಮಂಜುನಾಥ್, ಪೂರ್ಣೇಶ್, ಸಂತೋಷ್, ಮಹೇಶ, ಸಂತೋಷ್, ಅಶೋಕ್, ಸುರೇಶ್ ಭಾಗವಹಿಸಿದ್ದರು.

ಕಿತ್ತೂರಿನಲ್ಲೂ ಅದ್ದೂರಿ ಹನುಮ ಜಯಂತಿ

ಪಿರಿಯಾಪಟ್ಟಣ, ಡಿ.20– ಕಿತ್ತೂರಿನಲ್ಲಿ ಆಂಜನೇಯ ಸ್ವಾಮಿ ಸೇವಾ ಸಮಿತಿ ವತಿಯಿಂದ ಮೂರನೇ ವರ್ಷದ ಹನುಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.



ಕಿತ್ತೂರಿನಲ್ಲಿ ಶನಿವಾರ ಹನುಮ ಜಯಂತಿ ಮೆರವಣಿಗೆ ನಡೆಸಲಾಯಿತು.

ಗ್ರಾಮದ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ ದೇವಾಲಯದಲ್ಲಿ ಮುಂಜಾನೆಯಿಂದಲೇ ದೇವರಿಗೆ ವಿವಿಧ ಪುಷ್ಪಗಳ ಹಾಗೂ ತುಳಸಿ ಮಾಲೆಗಳಿಂದ ಅಲಂಕರಿಸಿ ಸಿಂಧೂರ ಲೇಪನ ಅಭಿಷೇಕ ಹಾಗೂ ಹೋಮ ಹವನಗಳು ನಡೆದವು.

ಹನುಮ ಜಯಂತಿಯ ಪ್ರಯುಕ್ತ ಅಲಂಕೃತಗೊಂಡ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿಯನ್ನು ವಾಹನದಲ್ಲಿ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ವಿಶೇಷವಾಗಿ ತಮಟೆ ವಾದ್ಯಗಳಿಂದ ಹಾಗೂ ಡಿಜೆ ಶಬ್ದಗಳಿಂದ ಗ್ರಾಮದ ಯುವಕರು ಹಾಗೂ ಮಕ್ಕಳು ಹೆಜ್ಜೆ ಹಾಕಿ ಸಂಭ್ರಮಿಸಿದರು. ಮೆರವಣಿಗೆಯು ಗಣೇಶ ವೃತ್ತದವರೆಗೂ ಸಾಗಿತ್ತು.

ಗ್ರಾಮದಲ್ಲಿ ಏಕತೆಯನ್ನು ಸಾರುವಲ್ಲಿ ಮುಸ್ಲಿಂ ಸಹೋದರರು ಹನುಮ ಜಯಂತಿಯಲ್ಲಿ ಭಾಗವಹಿಸಿರುವುದು ನಮ್ಮೆಲ್ಲರಿಗೂ ಸಂತೋಷ ತಂದಿದ್ದು, ಈ ಜಯಂತಿಯ ಮೂಲಕ ಗ್ರಾಮದ ಪ್ರತಿಯೊಂದು ವರ್ಗವು ಸಹಕಾರ ಸಹಬಾಳ್ವೆಯನ್ನು ಪ್ರದರ್ಶಿಸುವ ಮೂಲಕ ಹಬ್ಬದ ಮೆರುಗನ್ನು ಹೆಚ್ಚಿಸಿದೆ ಎಂದು ಸೇವಾ ಸಮಿತಿಯ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದರು. ಮುಸ್ಲಿಂ ಬಾಂಧವರು ಬಂದಂತಹ ಭಕ್ತಾದಿಗಳಿಗೆ ತಂಪು ಪಾನೀಯಗಳನ್ನು ನೀಡುವ ಮೂಲಕ ಹನುಮ ಜಯಂತಿಯಲ್ಲಿ ಭಾಗವಹಿಸಿ ಭಾವೈಕ್ಯತೆಯನ್ನು ಸಾರಿದರು.



ತಿ.ನರಸೀಪುರ ಸಮೀಪದ ಹೆಳವರಹುಂಡಿ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಟೆನಿಸ್ ಬಾಲ್ ಕ್ರಿಕೆಟ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯನ್ನು ವಾಟಾಳು ಶ್ರೀ ಮಠದ ಶ್ರೀಸಿದ್ದಲಿಂಗಶಿವಾಚಾರ್ಯ ಸ್ವಾಮಿ ಉದ್ಘಾಟಿಸಿದರು.

ತಿ.ನರಸೀಪುರದಲ್ಲಿ ಕ್ರೀಡಾಕೂಟಕ್ಕೆ ಕ್ರೀಡಾಂಗಣ ಬೇಕಿದೆ

ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಲು ವಾಟಾಳು ಮಠದ ಶ್ರೀಗಳ ಕರೆ

ತಿ.ನರಸೀಪುರ: ಯುವಕರು ಕೇವಲ ಕ್ರಿಕೆಟ್ ಆಟಕ್ಕೆ ಪ್ರಾಮುಖ್ಯತೆ ನೀಡದೇ ಇನ್ನಿತರೆ ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ದೈಹಿಕವಾಗಿ ಸದೃಢರಾಗಬೇಕೆಂದು ಕರೆ ನೀಡಿದ ವಾಟಾಳು ಸೂರ್ಯ ಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀ ಸಿದ್ದ ಲಿಂಗಶಿವಾಚಾರ್ಯ ಮಹಾಸ್ವಾಮಿ ತಾಲೂಕಿನಲ್ಲಿ ಕ್ರೀಡಾ ಕೂಟಕ್ಕೆ ಕ್ರೀಡಾಂಗಣದ ಅಗತ್ಯವಿದೆ ಎಂದರು.

ಪುರಸಭೆ ವ್ಯಾಪ್ತಿಯ ಹೆಳವರಹುಂಡಿ ಗ್ರಾಮದ ಆಟದ ಮೈದಾನದಲ್ಲಿ ವಾಟಾಳು ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಜಿಯವರ ಹುಟ್ಟುಹಬ್ಬದ ಅಂಗವಾಗಿ ಶ್ರೀ ಬಸವೇಶ್ವರ ಪ್ರೀಮಿಯರ್ ಲೀಗ್ ವತಿಯಿಂದ ಶನಿವಾರ ಆಯೋಜಿಸಿದ್ದ ಸೀಸನ್ 2ರ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿದ ಅವರು ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರಿಗೆ ಎಲ್ಲರೂ ಮನವಿ ನೀಡಿ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದರು.

ಪ್ರಸಕ್ತ ದಿನ ಮಾನಗಳಲ್ಲಿ ಯುವಕರು ಕ್ರಿಕೆಟ್ ಪಂದ್ಯಕ್ಕೆ ನೀಡುತ್ತಿರುವ ಪ್ರಾಮುಖ್ಯತೆಯನ್ನು ಇತರೆ ದೈಹಿಕ ಕ್ರೀಡೆಗಳಿಗೆ ನೀಡುತ್ತಿಲ್ಲ ಹಾಗಾಗಿ ವೀರಶೈವ ಸಮಾಜದ ಯುವಕರು ಇನ್ನಿತರೆ ಕ್ರೀಡೆಯಲ್ಲೂ ಹೆಚ್ಚಿನ ಆಸಕ್ತಿ ತೋರುವ ಮೂಲಕ ಮಾನಸಿಕ, ದೈಹಿಕವಾಗಿ ಸದೃಢರಾಗಬೇಕು. ಗ್ರಾಮೀಣ ಭಾಗವಾದ ಇಲ್ಲಿ ವೀರಶೈವ ಸಮಾಜದ ಯುವಕರು ಪಂದ್ಯಾವಳಿಯನ್ನು ಆಯೋಜಿಸಿರುವುದು ಸಂತಸದ ವಿಷಯವಾಗಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಎಸ್.ಎಂ.ಆರ್.ಪ್ರಕಾಶ್ ಮಾತನಾಡಿ ಕ್ರೀಡೆ ಪ್ರಸಕ್ತ ದಿನಮಾನಗಳಲ್ಲಿ ಅವಶ್ಯಕ ವಾಗಿ ಎಲ್ಲರ ಜೀವನದ ಅವಿಭಾಜ್ಯ ಅಂಗವಾಗಿದೆ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಬಹು ಮುಖ್ಯ, ಗ್ರಾಮದ ಬಸವೇಶ್ವರ ಸಂಘದ ಯುವಕರು ಸೇರಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಿರುವುದು ಸಂತಸ ತಂದಿದೆ ಎಂದರು.

ಬಸವೇಶ್ವರ ಪ್ರೀಮಿಯರ್ ಲೀಗ್‌ನ ಮುಖ್ಯಸ್ಥ ಚೇತನ್ ಮಾತನಾಡಿದರು. ವಕೀಲ ವಾಟಾಳ್ ನಾಗೇಂದ್ರ ಪ್ರಸಾದ್, ಕೆಇಬಿ ನಿವೃತ್ತ ನೌಕರ ಸಿದ್ದಲಿಂಗಸ್ವಾಮಿ, ಮೈಸೂರು ಹೈಲೈಫ್ ಸಂಸ್ಥೆಯ ನಟರಾಜು, ಪೂಜಿತ್ ಮೆಡಿಕಲ್ ಕುಮಾರ್, ಉಪನ್ಯಾಸಕ ಕುಮಾರಸ್ವಾಮಿ, ನಿಲಸೋಗೆ ಪ್ರಕಾಶ್, ತೊಂಟೇಶ್, ಹಲಸಹಳ್ಳಿ ಮಹದೇವಸ್ವಾಮಿ ಇದ್ದರು.

ಐದನೇ ಪುಟದಿಂದ

ವರಿಷ್ಠರ ಕರೆಗೆ ಕಾದಿದ್ದೇವೆ

ಯಾವ ರೀತಿ ದಬ್ಬಾಳಿಕೆ ನಡೆಯುತ್ತಿದೆ ಎಂಬುದನ್ನು ತಿಳಿಸಲು ಪ್ರತಿಭಟನೆ ನಡೆಸುತ್ತಿದ್ದೇವೆ. ನನಗೆ ನೋಟಿಸ್ ನೀಡಿರುವ ಸಂಬಂಧ ಮಂಗಳವಾರ ದೆಹಲಿಗೆ ಹೋದಾಗ ಪೊಲೀಸರನ್ನು ಭೇಟಿ ಮಾಡುವೆ ಎಂದರು. ಕೇಂದ್ರ ಜಲಶಕ್ತಿ ಸಚಿವರು ನದಿ ಜೋಡಣೆ ವಿಚಾರವಾಗಿ ಮಂಗಳವಾರ ಸಭೆ ಕರೆದಿದ್ದು, ನಮ್ಮ ರಾಜ್ಯದ ಪ್ರಮುಖ ಯೋಜನೆಗಳಾದ ಮಹದಾಯಿ, ಕೃಷ್ಣ ಮೇಲ್ದಂಡೆ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆ ವಿಚಾರ ಚರ್ಚಿಸುವೆ. ಇದೇ ವೇಳೆ ಕೇಂದ್ರ ಅರಣ್ಯ, ನಗರಾಭಿವೃದ್ಧಿ ಸಚಿವರನ್ನೂ ಭೇಟಿ ಮಾಡಲು ಸಮಯ ಕೇಳಿರುವೆ. ರಾಜ್ಯದ ಹಿತಾಸಕ್ತಿ ವಿಚಾರವಾಗಿ ನಾನು ಅವರನ್ನು ಭೇಟಿ ಮಾಡಲು ತೀರ್ಮಾನಿಸಿರುವೆ. ರಾಜ್ಯದ ಸಂಸದರ ಜೊತೆಗೆ ಭೇಟಿಯಾಗುವ ಆಲೋಚನೆ ಇತ್ತು. ಇವೆಲ್ಲ ಆದ ನಂತರ ಅವರು ಬಂದರೆ ಪ್ರಧಾನಮಂತ್ರಿಯನ್ನೂ ಭೇಟಿ ಮಾಡುವೆ ಎಂದರು. ವರಿಷ್ಠರ ಆದೇಶದ ಮೇರೆಗೆ ಸಿದ್ದರಾಮಯ್ಯ ಮತ್ತು ನಾನು, ಉಪಹಾರ ಮತ್ತು ಭೋಜನಕೂಟದಲ್ಲಿ ಏನು ಚರ್ಚೆ ಮಾಡಿದ್ದೇವೆ ಎಂಬುದು ನಮ್ಮಿಬ್ಬರಿಗೆ ಗೊತ್ತಿದೆ. ಡಿಸೆಂಬರ್ 24 ಇಲ್ಲವೇ 27ರಂದು ನಿಮ್ಮಿಬ್ಬರನ್ನು ದೆಹಲಿಗೆ ಬರಲು ಸೂಚಿಸಿದ್ದಾರಾ ಎಂಬ ಪ್ರಶ್ನೆಗೆ, ಇನ್ನು ಇಲ್ಲ. ವರಿಷ್ಠರ ಆಹ್ವಾನಕ್ಕೆ ಕಾಯುತ್ತಿದ್ದೇವೆ ಎಂದರು. ಜರ್ಮನಿ ಪ್ರವಾಸದಲ್ಲಿರುವ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಡಿಸೆಂಬರ್ 23ರಂದು ದೆಹಲಿಗೆ ಹಿಂತಿರುಗಲಿದ್ದಾರೆ. ಡಿಸೆಂಬರ್ 24ರಂದು ಒಂದು ದಿನ ಮಾತ್ರ ದೆಹಲಿಯಲ್ಲಿ ಉಳಿದು ಮತ್ತೆ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆ. ರಾಹುಲ್ ಗಾಂಧಿ ಮತ್ತೆ ಜನವರಿ 3ಕ್ಕೆ ಹಿಂತಿರುಗಿ 14ರವರೆಗೆ ದೆಹಲಿಯಲ್ಲೇ ಇರಲಿದ್ದಾರೆ. ಆ ನಂತರ ಮತ್ತೆ ವಿದೇಶ ಪ್ರವಾಸ ನಿಗದಿಯಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲವನ್ನು ಡಿ.24 ಇಲ್ಲವೇ ಜನವರಿ ಮೊದಲ ವಾರದಲ್ಲಿ ಬಗೆಹರಿಸಬೇಕಿದೆ.

ಐದು ಹುಲಿಗಳ ವಿಹಾರ!

ಅರಣ್ಯ ಇಲಾಖೆ ಅಧಿಕಾರಿಗಳನ್ನು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮರಿಗಳೊಂದಿಗೆ ಕಾಣಿಸಿಕೊಂಡಿದ್ದ ತಾಯಿ: ಗ್ರಾಮದ ಕುಮಾರ್ ಅವರ ಜಮೀನಲ್ಲಿ ನ.8ರಂದು 2 ಮರಿಗಳೊಂದಿಗೆ ತಾಯಿ ಹುಲಿ ಕಾಣಿಸಿಕೊಂಡಿದ್ದು, ಇದು ಅರಣ್ಯ ಇಲಾಖೆ ಇರಿಸಿದ್ದ ಟ್ರ್ಯಾಪ್ ಕ್ಯಾಮರಾದಲ್ಲಿ ದಾಖಲಾಗಿತ್ತು. ಹುಲಿಗಳ ಓಡಾಟದ ದೃಶ್ಯವನ್ನು ಕಂಡ ರೈತ ಕುಮಾರ್ ಹಾಗೂ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಡಳಿತಕ್ಕೆ ದೂರು ನೀಡಿ ಹುಲಿಗಳ ಸೆರೆ ಹಿಡಿಯುವಂತೆ ಒತ್ತಾಯಿಸಿದ್ದರು. ಆದರೆ, ಅರಣ್ಯ ಇಲಾಖೆ ಅಧಿಕಾರಿಗಳು ಈ ಬಗ್ಗೆ ಹೆಚ್ಚಿನ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದರು. ಅಲ್ಲದೇ ಗ್ರಾಮದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾವನ್ನು ತೆರವುಗೊಳಿಸಿದ್ದರು ಎಂದು ಗ್ರಾಮಸ್ಥರು ಅಧಿಕಾರಿಗಳ ವಿರುದ್ಧ ದೂರಿದ್ದಾರೆ. ಅರಣ್ಯ ಇಲಾಖೆ ತೆರವುಗೊಳಿಸಿದ್ದ ಸಿಸಿ ಕ್ಯಾಮರಾ ಸ್ಥಳದಲ್ಲೇ ರೈತ ಕುಮಾರ್ ಅವರು ಸ್ವಂತ ಖರ್ಚಿನಲ್ಲಿ ಕ್ಯಾಮರಾ ಅಳವಡಿಸಿದ್ದು, ಶುಕ್ರವಾರ ರಾತ್ರಿ 7.20ರಿಂದ 7.45ರ ಸಮಯದಲ್ಲಿ 5 ಹುಲಿಗಳು ಓಡಾಡುತ್ತಿರುವ ದೃಶ್ಯ ಸೆರೆಯಾಗಿದೆ. ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಎಸಿಎಫ್ ಭೇಟಿ: ವಿಚಾರ ತಿಳಿದು ಗ್ರಾಮಕ್ಕೆ ಭೇಟಿ ನೀಡಿದ್ದ ಎಸಿಎಫ್ ಮಂಜುನಾಥ್ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಪರಿಶೀಲಿಸುವಾಗ ಗ್ರಾಮಸ್ಥರು ತೀವ್ರ ತರಾಟೆ ತೆಗೆದುಕೊಂಡರು. ಈ ಹಿಂದೆಯೇ ಗ್ರಾಮದಲ್ಲಿ ಹುಲಿಗಳು ಕಾಣಿಸಿಕೊಂಡಿದ್ದರೂ ಅವುಗಳನ್ನು ಸೆರೆ ಹಿಡಿಯದೆ ನಿರ್ಲಕ್ಷ್ಯ ವಹಿಸಿದ್ದೀರಿ, ಈಗ ಮತ್ತೆ ಐದು ಹುಲಿಗಳು ಕಾಣಿಸಿಕೊಂಡಿದ್ದು, ಕೂಡಲೇ ಅವುಗಳನ್ನು ಸೆರೆ ಹಿಡಿಯಬೇಕು ಎಂದು ಆಕ್ರೋಶ ವ್ಯಕ್ತಪಡಿಸಿ ಮಧ್ಯರಾತ್ರಿ 12 ಗಂಟೆವರೆಗೂ ಚರ್ಚೆ ನಡೆಸಿದ್ದಾರೆ. ಬಳಿಕ ಅಧಿಕಾರಿಗಳು ಗ್ರಾಮಸ್ಥರ ಮನವೊಲಿಸಿ, ಅಲ್ಲಿಂದ ತೆರಳಿದ್ದರು. ಗ್ರಾಮಕ್ಕೆ ಶುಕ್ರವಾರ ಬೆಳಗ್ಗೆ ಸೋಲಿಗರು, ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿದ್ದು, ಹುಲಿಗಳು ಓಡಾಡಿದ್ದ ಪ್ರದೇಶದಲ್ಲಿ ಬೋನ್ ಇರಿಸಿದ್ದಾರೆ. ಅಲ್ಲದೇ ಹುಲಿಗಳ ಹೆಜ್ಜೆ ಗುರುತು ಜಾಡು ಹಿಡಿದು ಅವುಗಳ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿದ್ದು, ಡ್ರೋನ್ ಕ್ಯಾಮರಾ ಬಳಸಿಕೊಂಡು ಹುಲಿಗಳ ಪತ್ತೆಗೆ ಮುಂದಾಗಿದ್ದಾರೆ.

ಉರುಳು ಹಾಕಿದರೆ ಸೆರೆವಾಸ

ಮತ್ತು ವನ್ಯ ಪ್ರಾಣಿಗಳನ್ನು ಹಿಡಿಯುವ ಪ್ರಯತ್ನ ಮಾಡುವುದೂ ಅಪರಾಧವಾಗಿದೆ. ಈ ರೀತಿಯ ಅಪರಾಧ ಮಾಡಿದಲ್ಲಿ ಕನಿಷ್ಠ 3 ವರ್ಷ ಮತ್ತು ಗರಿಷ್ಠ 7 ವರ್ಷಗಳ ಜೈಲು ಹಾಗೂ 5 ಲಕ್ಷ ರೂ. ಗಳವರೆಗೂ ದಂಡ ವಿಧಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ವನ್ಯಜೀವಿಗಳ ಮಾಂಸದ ಆಸೆಗೆ ಸಾರ್ವಜನಿಕರು ತಮ್ಮ ಭೂಮಿ ಅಥವಾ ತೋಟದಲ್ಲಿ ಉರುಳುಗಳನ್ನು ಹಾಕಿದ್ದರೆ ಸ್ವಯಂಪ್ರೇರಿತರಾಗಿ ಅವುಗಳನ್ನು ತೆಗೆಯುವಂತೆ ಅಧಿಕಾರಿಗಳು ಸೂಚಿಸಿದ್ದಾರೆ. ಯಾರಾದರು ಉರುಳು ಹಾಕುವ ಕಾರ್ಯದಲ್ಲಿ ನಿರತರಾಗಿದ್ದರೆ ಅಂತಹವರ ವಿವರಗಳನ್ನು ಹತ್ತಿರದ ಅರಣ್ಯ ಇಲಾಖೆ ಕಚೇರಿ ಅಥವಾ ಸಿಬ್ಬಂದಿಯ ಗಮನಕ್ಕೆ ತರಬೇಕೆಂದು ಕೋರಿದ್ದಾರೆ.

ಪವಿತ್ರ ಸ್ತುತಿ ಶಂಕರ ಸ್ತೋತ್ರ ಪಾರಾಯಣ

> ನಾವು ಸನಾತನ ಧರ್ಮದ ಪರಂಪರೆ ಬಗ್ಗೆ ವಿಶೇಷ ಶ್ರದ್ಧಾಭಕ್ತಿ, ಗೌರವ ಹೊಂದಿರಬೇಕು. ನಾವು ಆಚರಣೆ ಮಾಡುವ ಜೊತೆಗೆ ಮಕ್ಕಳಿಗೂ ತಿಳಿಸುವುದು ಪೋಷಕರ ಜವಾಬ್ದಾರಿ. ಮಕ್ಕಳಿಗೆ ನಮ್ಮ ಧರ್ಮ, ಸಂಸ್ಕಾರ ಹೇಳಿಕೊಡುವುದು ಮುಖ್ಯವಾಗಲಿದ್ದು, ಇದನ್ನು ತಿಳಿಸಿದಾಗ ಮಾತ್ರವೇ ಅವರಲ್ಲಿ ಒಳ್ಳೆಯ ಸ್ತುತಿ, ಸಾಮರ್ಥ್ಯ ಬೆಳೆಯಲಿದೆ. ಇದರ ಹೊರತಾಗಿ ಅವರಿಗೆ ಎಷ್ಟೇ ಆಸ್ತಿ ನೀಡಿದರೂ ಪ್ರಯೋಜನವಿಲ್ಲ.
> –ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು, ಶೃಂಗೇರಿ ಶಾರದಾಪೀಠ.

ಪ್ರತಿ ಪಾದಿತವಾದಂತಹ ಅದ್ವೈತ ಸಿದ್ಧಾಂತವನ್ನು ಈ ಜಗತ್ತಿಗೆ ಉಪದೇಶ ಮಾಡಿದರು. ಜೊತೆಗೆ ಅದ್ವೈತ ಸಿದ್ಧಾಂತವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಬೇಕಾದ ಸಾಧನಾ ಮಾರ್ಗಗಳನ್ನು ಉಪದೇಶ ಮಾಡಿದರು. ಸರ್ವಶಕ್ತನಾದ ಪರಮಾತ್ಮ ನಮಗೆ ಕೊಡಲಿಕ್ಕೆ ಸಾಧ್ಯವಾಗುವುದನ್ನು ಅವನಲ್ಲಿ ನಾವು ಕೇಳಬೇಕು. ಅದನ್ನೇ ಈ ಸ್ತೋತ್ರಗಳಲ್ಲಿ ಶಂಕರರರು ಉಪದೇಶ ಮಾಡಿದ್ದಾರೆ. ಇಂದು ಪಠಿಸಿದ ಕಲ್ಯಾಣ ವೃಷ್ಟಿಸ್ತವ, ಶಿವಪಂಚಾಕ್ಷರನಕ್ಷತ್ರಮಾಲಾ ಸ್ತೋತ್ರ, ಲಕ್ಷ್ಮೀನೃಸಿಂಹ ಕರುಣಾರಸ ಸ್ತೋತ್ರ ಸೇರಿದಂತೆ ಅನೇಕ ವಿಧವಾದ ಸ್ತೋತ್ರಗಳನ್ನು ರಚಿಸುವ ಮೂಲಕ ಆ ಪರಮಾತ್ಮನ ತತ್ವ ತಿಳಿಸುವುದಲ್ಲದೆ, ಆ ಪರಮಾತ್ಮನ ಹತ್ತಿರ ನಾವು ಏನನ್ನು ಪ್ರಾರ್ಥನೆ ಮಾಡಬೇಕೆಂಬುದನ್ನು ಸ್ತೋತ್ರಗಳಲ್ಲಿ ಆದಿಶಂಕರರು ಉಪದೇಶ ಮಾಡಿದ್ದಾರೆ. ಹಾಗಾಗಿ ಆ ಪರಮಾತ್ಮನ ಜೊತೆಗೆ ಮಾತನಾಡುವಂತಹ ಭಾಷೆಯೇ ಸ್ತೋತ್ರಗಳು.

ಮಹಾಕವಿಗಳೂ ನಮಿಸಬೇಕು: ದೇವರಲ್ಲಿ ಏನು ಪ್ರಾರ್ಥಿಸಬೇಕೆಂಬುದು ಶಂಕರರು ಸ್ತೋತ್ರಗಳ ಮೂಲಕ ಬೋಧಿಸಿದ್ದಾರೆ. ಅದರಂತೆ ಸ್ತೋತ್ರ ಪಠಿಸಿದರೆ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತೇವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದಿ ಶಂಕರಾಚಾರ್ಯ ವಿರಚಿತ ಸ್ತೋತ್ರಗಳಿಗೆ ಸಮಾನವಾದವು ಬೇರೆಯಿಲ್ಲ. ಅವರು ಸ್ತೋತ್ರದಲ್ಲೂ ಮಾಡಿರುವ ವರ್ಣನೆಗಳನ್ನು ಅವಲೋಕಿಸಿದರೆ ಕಾಳಿದಾಸ ಸೇರಿದಂತೆ ಮಹಾಕವಿಗಳು ಸಹ ಕೈ ಮುಗಿದು ನಮಸ್ಕಾರ ಮಾಡಲೇಬೇಕು. ಅವರ ಒಂದೊಂದು ಸ್ತೋತ್ರಗಳಲ್ಲಿ ಇರುವ ವೈಶಿಷ್ಟ್ಯ ಅನಂತವಾದುದು. ಅಂತಹ ಸ್ತೋತ್ರಗಳನ್ನು ಎಲ್ಲರೂ ಪಠಣ ಮಾಡಿ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕು ಎನ್ನುವ ಉದ್ದೇಶದಿಂದ ಈ ಸ್ತೋತ್ರ ಪರಾಯಣ ಅಭಿಯಾನವು ಪ್ರಾರಂಭವಾಯಿತು ಎಂದು ತಿಳಿಸಿದರು.

ರಾಜಮನೆತನದಿಂದ ಭಕ್ತಿ ಸಮರ್ಪಣೆ...



ಮೈಸೂರು ಅರಮನೆಗೆ ಆಗಮಿಸಿದ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರನ್ನು ಸ್ವಾಗತಿಸಿದ ಮೈಸೂರು ರಾಜಮನೆತನದವರು ಬಳಿಕ ಶ್ರೀಗಳ ಸಮ್ಮುಖದಲ್ಲಿ ಪೂಜಾ ವಿಧಿವಿಧಾನ ನೆರವೇರಿಸಿ ಭಕ್ತಿ ಸಮರ್ಪಿಸಿದರು.

ಸ್ತೋತ್ರ ಪಠಣದಿಂದ ಹಣೆಬರಹ ಬದಲು

> ನಮ್ಮ ಹಣೆಬರಹವನ್ನು ನಾವೇ ತಿದ್ದಬೇಕು. ಈ ಸ್ತೋತ್ರಗಳು ನಮ್ಮ ಹಣೆಬರಹ ಬದಲಿಸುತ್ತವೆ. ಈ ಮಾತನ್ನು ವೈದ್ಯರು ಸಹ ಹೇಳುತ್ತಾರೆ. ಸ್ವತಃ ಶಂಕರರು ಈ ಮಾತು ಹೇಳಿದ್ದಾರೆ. ನಕ್ಷತ್ರ ಮಾಲಿಕ ಸ್ತೋತ್ರಕ್ಕೆ ವಿಶಿಷ್ಟ ಮಹತ್ವವಿದೆ. ಒಂದು ಲಕ್ಷ ಜನಕ್ಕೆ ಇದನ್ನು ತಲುಪಿಸುವ ಗುರಿಯೊಂದಿಗೆ ಮೈಸೂರಿನಲ್ಲಿ ಕಾರ್ಯಕ್ರಮ ನಡೆಸಲಾಗಿದೆ. ಅರಮನೆ ಮೊದಲು ಗುರು ಮನೆಯಾಗಿತ್ತು. ಇಂದಿಗೂ ಗುರುಮನೆ ಆಗಿಯೇ ಉಳಿದಿದೆ. ಗುರುಗಳ ಬಗ್ಗೆ ರಾಜಮನೆತನಕ್ಕೆ ಅಪಾರ ಶ್ರದ್ಧಾ–ಭಕ್ತಿಯಿದೆ ಎಂಬುದಕ್ಕೆ ಇಂದಿನ ಕಾರ್ಯಕ್ರಮ ಸಾಕ್ಷಿಯಾಗಿದೆ. **–ಶ್ರೀ ಶಂಕರ ಭಾರತೀ ಮಹಾಸ್ವಾಮೀಜಿ.**

ಅರಮನೆ, ಶೃಂಗೇರಿ ಮಠಕ್ಕೂ ಅವಿನಾಭಾವ ನಂಟು

> ನಮ್ಮ ಅರಮನೆ ಹಾಗೂ ಶೃಂಗೇರಿ ಮಠಕ್ಕೂ ಅವಿನಾಭಾವ ಸಂಬಂಧವಿದೆ. ಇಂದು ಏನಾದರೂ ನಮ್ಮ ಮನೆತನ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಮುಂದುವರೆಯುತ್ತಿದೆ ಅಂದರೆ ಅದಕ್ಕೆ ಶೃಂಗೇರಿ ಮಠದ ಪ್ರಭಾವವೇ ಕಾರಣ. ನಮ್ಮ ಪೂರ್ವಜರು ಎಲ್ಲರೂ ಆಧ್ಯಾತ್ಮಿಕ ಚಿಂತನೆ ಹಾಗೂ ಧಾರ್ಮಿಕ ರಾಜ್ಯ ಸ್ಥಾಪನೆ ಮಾಡಲು ಪ್ರಯತ್ನಿಸಿದ್ದರು. ಅದೂ ಕೂಡ ಶೃಂಗೇರಿ ಮಠದ ಮಾರ್ಗದರ್ಶನದಿಂದ ಸಾಧ್ಯವಾಗಿದೆ. ಧರ್ಮ ರಕ್ಷಣೆಗಾಗಿ ಶೃಂಗೇರಿ ಮಠ ಮಾಡುತ್ತಿರುವ ಕೆಲಸ ನಮ್ಮೆಲ್ಲರಿಗೂ ಪ್ರೇರಣೆ. ಇಂದಿನ ಸುಂದರ ಕಾರ್ಯಕ್ರಮ ನಮ್ಮ ತಾಯಿ ಹಾಗೂ ನನ್ನ ಆಸೆಯಾಗಿತ್ತು, ಅದು ಈಡೇರಿದೆ. **–ಯದುವೀರ್ ಒಡೆಯರ್, ಮೈಸೂರು–ಕೊಡಗು ಸಂಸದರು.**

ಆದಿ ಶಂಕರರ ಸ್ತೋತ್ರಗಳ ಜೊತೆಗೆ 'ವಾಗ್ದೇವಿ ಸ್ತೋತ್ರ' ಸಹ ಪಠಣ ಮಾಡಿದ್ದೀರಿ. ಶೃಂಗೇರಿ ಪೀಠದ 33ನೇ ಪೀಠಾಧ್ಯಕ್ಷ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿ ಇದನ್ನು ರಚಿಸಿದ್ದು, ಅವರನ್ನು ಅಭಿನವ ಶಂಕರರು ಎಂದೇ ವರ್ಣಿಸಲಾಗಿದೆ. ಅವರು ಮಾಡಿದ ಅನೇಕ ಕಾರ್ಯಗಳಲ್ಲಿ ಸ್ತೋತ್ರ ರಚನೆಯೂ ಸೇರಿದೆ. ಅವರು ರಚಿಸಿದ ಸ್ತೋತ್ರ ಇಲ್ಲಿ ಪಠಣ ಮಾಡಲಿಕ್ಕೆ ಕಾರಣ ಅವರ ಅವ ತರಿಸಿದ್ದೇ ಈ ಮೈಸೂರು ಮಹಾನಗರದಲ್ಲಿ. ಇಲ್ಲಿ ಅಭಿನವ ಶಂಕರಾಲಯವೆಂದು ಶೃಂಗೇರಿ ಪೀಠದ ಶಾಖಾ ಮಠವೂ ಇದೆ. ಆದಿ ಶಂಕರರ ಜನ್ಮಸ್ಥಳವಾದ ಕಾಲಡಿ ಸ್ಥಳವನ್ನು ಜಗತ್ತಿಗೆ ತೋರಿಸಿ ಕೊಟ್ಟವರು ಇವರೇ ಎಂದರು. ಮೈಸೂರು ರಾಜವಂಶಸ್ಥರಾದ ಡಾ.ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ (ಯದುವೀರ ಒಡೆಯರ್) ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಯದುವೀರ ಒಡೆಯರ್ ಅವರ ಪತ್ನಿ ತ್ರಿಷಿಕಾ ಕುಮಾರಿ, ಶಾಸಕ ಟಿ.ಎಸ್. ಶ್ರೀವತ್ಸ, ಸ್ತುತಿಶಂಕರ ಸಂಚಾಲನ ಸಮಿತಿಯ ಕಾರ್ಯಾಧ್ಯಕ್ಷ ಸುಧಾಕರಶೆಟ್ಟಿ, ಸಂಚಾಲಕ ಹಾಗೂ ಎಂಐಟಿ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಮುರುಳಿ, ಜಿಎಸ್‌ಎಸ್ ಸಮೂಹ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ಮುಖಂಡ ರಘು ಕೌಟಿಲ್ಯ, ವಿಪಿಎಫ್ ಘಟಕದ ಸುಧೀಂದ್ರ, ಕೆ.ಆರ್.ಸತ್ಯನಾರಾಯಣ, ಮಂಜುನಾಥ್, ನಿರ್ದೇಶಕರಾದ ಗಣೇಶ್, ಚಂದ್ರಶೇಖರ್, ಸತ್ಯಪ್ರಕಾಶ್, ಕಾರ್ತಿಕ್ ಪಂಡಿತ್, ಶ್ರೀರಾಮ್ ಇದ್ದರು.

ಮೃಗಾಲಯದಲ್ಲಿ ಕಟ್ಟೆಚ್ಚರ

ಮೃಗಾಲಯದಲ್ಲಿ 6 ಜೀಬ್ರಾಗಳಿದ್ದು, 6ಕ್ಕೂ ಹೆಚ್ಚು ಜಿರಾಫೆಗಳಿವೆ. ಅವುಗಳಿಗೆ ಮಾರಕ ಸೋಂಕು ಸುಳಿಯದಂತೆ ಮೃಗಾಲಯದ ಅಧಿಕಾರಿಗಳು ಎಚ್ಚರ ವಹಿಸಿದ್ದಾರೆ.

ಸ್ಯಾನಿಟೈಸ್ ಸಿಂಪಡಣೆ: ಈಗಾಗಲೇ ಜೀಬ್ರಾ ಹಾಗೂ ಜಿರಾಫೆಗಳಿರುವ ಆವರಣದ ಬಳಿ ಸೋಂಕು ನಿವಾರಕ ದ್ರಾವಣ ಸಿಂಪಡಿಸಲಾಗುತ್ತಿದೆ. ಪ್ರತಿದಿನ 3–4 ಬಾರಿ ಕಾಂಪೌಂಡ್, ಗೋಡೆ, ಪ್ರವೇಶ ದ್ವಾರದಲ್ಲೂ ಸ್ಯಾನಿಟೈಸ್ ಮಾಡಲಾಗುತ್ತಿದೆ. ಅಲ್ಲದೆ, ಪ್ರಾಣಿಗಳ ಚಲನವಲನದ ಮೇಲೆ ನಿಗಾ ಇಡಲಾಗಿದೆ. ಮೃಗಾಲಯದ ಪ್ರಾಣಿಗಳಿಗೆ ಆಹಾರ ಪೂರೈಕೆ ಟೆಂಡರ್ ಪಡೆದಿರುವ ಗುತ್ತಿಗೆದಾರರಿಗೆ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷ ಸೂಚನೆ ನೀಡಿ, ಪ್ರತ್ಯೇಕ ವಾಹನ ಬಳಸುವಂತೆ ಸೂಚನೆ ನೀಡಿದ್ದಾರೆ. ಮೃಗಾಲಯ ಪ್ರವೇಶ ದ್ವಾರದಲ್ಲಿಯೇ ಈ ವಾಹನಕ್ಕೂ ಸ್ಯಾನಿಟೈಸ್ ಮಾಡಿದ ನಂತರ ಒಳಗೆ ಬಿಡಲಾಗುತ್ತಿದೆ. ಕುದುರೆ ಸಾವಿಗೆ ಕಾರಣವಾದ ಮಾರಕ ಸೋಂಕು ಮೃಗಾಲಯಕ್ಕೆ ಹರಡದಂತೆ ಎಚ್ಚರ ವಹಿಸುವ ಸಂಬಂಧ ಶುಕ್ರವಾರ(ಡಿ.19) ವಿಡಿಯೋ ಕಾನ್ಫರೆನ್ಸ್ ಮೂಲಕ ತಜ್ಞವೈದ್ಯರು, ಪರಿಣಿತರು, ವನ್ಯಜೀವಿ ತಜ್ಞರು ಸಭೆ ನಡೆಸಿದ್ದು, ಮೈಸೂರು ಸೇರಿದಂತೆ ರಾಜ್ಯದಲ್ಲಿರುವ 9 ಮೃಗಾಲಯಗಳಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಿದ್ದಾರೆ. ಈ ಕುರಿತಂತೆ ಮಾರ್ಗಸೂಚಿ ನೀಡಲಾಗಿದೆ.

ರೇಸಿಂಗ್ ಚಟುವಟಿಕೆ ಸ್ಥಗಿತ

ಸುತ್ತಲಿನ 2 ಕಿಲೋ ಮೀಟರ್ ವ್ಯಾಪ್ತಿಯನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಲಾಗಿದೆ. ಕುದುರೆಗಳ ಮೂಲಕ ಈ ರೋಗ ಮನುಷ್ಯರು ಹಾಗೂ ಇತರೆ ಸಸ್ತನಿಗಳಿಗೆ ಹರಡುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಕುದುರೆ, ಕತ್ತೆ, ಹೇಸರಕತ್ತೆಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದನ್ನು, ಅವುಗಳನ್ನು ಮನರಂಜನೆಗೆ ಬಳಸಿಕೊಳ್ಳುವುದನ್ನು ಸರ್ಕಾರ ನಿರ್ಬಂಧಿಸಿದೆ. ಅಲ್ಲದೆ ಮುಂದಿನ ಸೂಚನೆ ಬರುವವರೆಗೆ ಎಲ್ಲಾ ರೀತಿಯ ಕುದುರೆ ರೇಸ್‌ಗಳನ್ನು ರದ್ದುಪಡಿಸಿದೆ. ರೇಸ್ ಕ್ಲಬ್‌ನಲ್ಲಿರುವ ಕುದುರೆಗಳ ಆರೋಗ್ಯ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಗ್ಲಾಂಡರ್ಸ್ ಬ್ಯಾಕ್ಟೀರಿಯಾ ಗುಣಲಕ್ಷಣ ಕಂಡು ಬಂದರೆ ಕೂಡಲೇ ಅದರ ರಕ್ತದ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲು ನಿರ್ಧರಿಸಲಾಗಿದೆ. ಅಲ್ಲದೆ ಮೂರು ತಿಂಗಳ ಕಾಲ ಪ್ರತಿ 21 ದಿನಗಳಿಗೊಮ್ಮೆ ಕಡ್ಡಾಯವಾಗಿ ಎಲ್ಲಾ ಕುದುರೆಗಳ ರಕ್ತದ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲು ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಅಲ್ಲದೆ ಕುದುರೆಗಳೆಲ್ಲಾ ಸುಸ್ಥಿತಿಯಲ್ಲಿವೆ ಎಂದು ಪ್ರಯೋಗಾಲಯದ ಪರೀಕ್ಷೆಯಿಂದ ಖಾತರಿಯಾದ ಬಳಿಕವಷ್ಟೇ ರೇಸ್ ಚಟುವಟಿಕೆ ಆರಂಭಿಸಲು ಸರ್ಕಾರ ಅನುಮತಿ ನೀಡಲಿದೆ.

ಇಂದಿನಿಂದ ಪ್ರವಾಸಿಗರಿಗೆ ಟಾಂಗಾ ಸವಾರಿ ಸಿಗುವುದಿಲ್ಲ

ಮೈಸೂರು: ಗ್ಲಾಂಡರ್ ಸೋಂಕಿನ ಭೀತಿ ಹಿನ್ನೆಲೆಯಲ್ಲಿ ಟಾಂಗಾದವರು ಕುದುರೆಗಳನ್ನು ಬಳಸುವಂತಿಲ್ಲ ಎಂದು ನಿರ್ಬಂಧ ಹೇರಲಾಗಿದೆ. ಇದರಿಂದ ಮೈಸೂರಿಗೆ ಬರುವ ಪ್ರವಾಸಿಗರಿಗೆ ಇನ್ನು ಟಾಂಗಾದಲ್ಲಿ ಸುತ್ತಾಡುವ ಅವಕಾಶ ಸಿಗುವುದಿಲ್ಲ. ಮೈಸೂರಿನಲ್ಲಿ ಅಗ್ರಹಾರ, ಪೀಪಲ್ಸ್ ಪಾರ್ಕ್, ಕುಕ್ಕರಹಳ್ಳಿ ಕೆರೆ ಹಾಗೂ ಅರಮನೆ ಬಳಿ ಕುದುರೆ ಸ್ಟ್ಯಾಂಡ್‌ಗಳಿವೆ. ಪಶು ಸಂಗೋಪನಾ ಇಲಾಖೆ ಆದೇಶ ನೀಡುವ ತನಕ ಯಾವುದೇ ಕುದುರೆಗಳನ್ನು ಬಳಕೆ ಮಾಡುವಂತಿಲ್ಲ ಎಂದು ಅಧಿಕಾರಿಗಳು ತಾಕೀತು ಮಾಡಿದ್ದಾರೆ. ಯಾವ ಕುದುರೆಯನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಕರೆದುಕೊಂಡು ಹೋಗಬಾರದು. ಕುದುರೆಗಳು ಸ್ಟ್ಯಾಂಡ್‌ನಲ್ಲೇ ಇರಬೇಕು, ಅಲ್ಲದೆ ಆಹಾರ ನೀಡಬೇಕು ಎಂದು ಸೂಚನೆ ನೀಡಲಾಗಿದೆ. ಮೈಸೂರಿಗೆ ಬರುವ ಪ್ರವಾಸಿಗರು ಟಾಂಗಾ ಏರಿ ಅರಮನೆ ಸುತ್ತಾಕುವುದು ಕ್ರೇಜ್ ಆಗಿತ್ತು. ಆದರೆ ಗ್ಲಾಂಡರ್ಸ್ ರೋಗದ ಹಿನ್ನೆಲೆ ಟಾಂಗಾ ಬಳಕೆ ಮಾಡಬಾರದೆಂದು ಆದೇಶ ನೀಡಿರುವ ಹಿನ್ನೆಲೆ ಟಾಂಗಾವಾಲಾಗಳು ಕುದುರೆ ಬಳಕೆ ಮಾಡುವುದಿಲ್ಲ. ಇದರಿಂದ ಟಾಂಗಾದಲ್ಲಿ ಸುತ್ತುವ ಅವಕಾಶವಿಲ್ಲದೆ ಪ್ರವಾಸಿಗರಿಗೆ ನಿರಾಸೆಯಾಗಲಿದೆ. ಟಾಂಗಾ ಆದಾಯದಲ್ಲೆ ಜೀವನ ಮಾಡುವ ಟಾಂಗಾವಾಲಾಗಳಿಗೆ ಈಗ ಆರ್ಥಿಕ ಸಂಕಷ್ಟ ಎದುರಾಗಲಿದೆ.

ಹರೀಶ್ ನಿಧನ



ಭೇರ್ಯ: ಚುಂಚನಕಟ್ಟೆ ಗ್ರಾಮದ ಶ್ರೀರಾಮ ಲಿಕ್ಕರ್ ಸೆಂಟರ್ ಮಾಲೀಕರಾದ ಮಿರ್ಲೆ ಗ್ರಾಮದ ಬಾರ್ ಹರೀಶ್ (54) ಇಂದು ನಿಧನರಾದರು. ದಿವಂಗತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ಮಿರ್ಲೆ ಗ್ರಾಮದ ದೇವಾಂಗಶೆಟ್ಟರ ಸ್ಮಶಾನದಲ್ಲಿ ಅಪಾರ ಜನಸ್ತೋಮದೊಂದಿಗೆ ನಡೆಯಿತು. ಇವರ ನಿಧನಕ್ಕೆ ಮಾಜಿ ಸಚಿವ ಸಾ.ರಾ.ಮಹೇಶ್, ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಉಪ ತಹಸೀಲ್ದಾರ್ ಅರುಣ್ ಇನ್ನಿತರರು ಸಂತಾಪ ಸೂಚಿಸಿದ್ದಾರೆ.

ಆರೋಗ್ಯಕರ ಜೀವನಕ್ಕೆ ಗುಣಮಟ್ಟದ ಆಹಾರ ಅಗತ್ಯ

ಏಳು ದಿನಗಳ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯ



ಮಾನಸ ಗಂಗೋತ್ರಿಯ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದಲ್ಲಿ ಏರ್ಪಡಿಸಿರುವ ಏಳು ದಿನಗಳ ಶಿಕ್ಷಕರ ಸುಧಾರಣಾ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿದರು.

ಮೈಸೂರು, ಡಿ.20(ಜಿಎ)–ಜೀವನಕ್ಕೆ ಆಹಾರ ಪದ್ಧತಿ ಅತಿ ಮುಖ್ಯ. ಆಹಾರ ಮತ್ತು ಆರೋಗ್ಯ ಉತ್ತಮ ಹಾಗೂ ಗುಣಮಟ್ಟದ್ದಾಗಿದ್ದರೆ ಮಾತ್ರ ಆರೋಗ್ಯಕರ ಜೀವನ. ಆದ್ದರಿಂದ ಆಹಾರದ ಗುಣಮಟ್ಟ ಅತೀ ಅವಶ್ಯಕ ಎಂದು ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ತಿಳಿಸಿದರು.

ಮಾನಸ ಗಂಗೋತ್ರಿಯ ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದಲ್ಲಿ ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ 2.0 ಮತ್ತು ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಏಳು ದಿನಗಳ ಶಿಕ್ಷಕರ ಸುಧಾರಣಾ ಕಾರ್ಯಾಗಾರ 'ಸ್ಥಿತಿ ಸ್ಥಾಪಕತ್ವ ಮತ್ತು ಜವಬ್ದಾರಿಯುತ ಯುವಕರನ್ನು ನಿರ್ಮಿಸುವುದು: 'ಆರೋಗ್ಯಕರ ಮನಸ್ಸು ಮತ್ತು ಸಂಬಂಧಕ್ಕಾಗಿ ಜೀವನ ಕೌಶಲ್ಯಗಳು' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಒಂದು ಬಾರಿ ಆರೋಗ್ಯ ಹದಗೆಟ್ಟರೆ ಅದನ್ನು ಸರಿಪಡಿಸಿಕೊಳ್ಳುವುದು ಕಷ್ಟಕರ. ಈ ದೃಷ್ಟಿಯಿಂದ ಆರೋಗ್ಯದ ಕಾಳಜಿ ವಹಿಸಬೇಕು. ಆಹಾರ ನಮ್ಮ ನಾಲಿಗೆಗೆ ರುಚಿಸುವುದಕ್ಕಲ್ಲ, ಆರೋಗ್ಯಕರ ಬದುಕಿಗಾಗಿ. ಇಂದು ಕರಿದ ಆಹಾರ ಪದಾರ್ಥಗಳಿಗೆ ಹೆಚ್ಚು ಮುಗಿ ಬೀಳುತ್ತಾರೆ. ಅದು ಆರೋಗ್ಯಕ್ಕೆ ವಿಷಕಾರಿ ಎಂದು ಅವರು ಎಚ್ಚರಿಸಿದರು.

ಯುವಕರು, ಮಕ್ಕಳು ಊಟದ ಸಮಯದಲ್ಲೂ ಮೊಬೈಲ್ ಬಳಸುತ್ತಾ, ಆಹಾರ ಸೇವಿಸುವ ಚಾಳಿ ಬೆಳೆಸಿಕೊಂಡಿದ್ದಾರೆ. ಇದು ಅಪಾಯಕಾರಿ. ಮೊಬೈಲ್ ಕಡಿಮೆ ಬಳಸಬೇಕಿದೆ. ಅದು ನಮ್ಮನ್ನು ಗೊಂದಲಕ್ಕೀಡಾಗಿಸುತ್ತದೆ ಇದರಿಂದ ಯುವಕರು ಗುರಿ ಕಡೆಗಿನ ಹಾದಿ ತಪ್ಪುತಿದ್ದಾರೆ. ಯುವಕರಲ್ಲಿ ಇಂದು ಶಿಸ್ತು, ಬದ್ಧತೆ, ಸಮರ್ಪಣೆಯ ಮನೋಭಾವ ಬೆಳೆಯಬೇಕಿದೆ ಎಂದು ಕಿವಿಮಾತು ಹೇಳಿದರು.

ಜಪಾನ್ ದೇಶದಲ್ಲಿ ಶಿಸ್ತಿನ ಜೀವನ ಶೈಲಿ, ಆಹಾರ ಪದ್ಧತಿಯಿಂದ ನೂರಾರು ವರ್ಷಗಳು ಜನ ಜೀವಿಸುತ್ತಿದ್ದಾರೆ. ಅವರಲ್ಲಿ ಇವತ್ತಿಗೂ, ಮಾನಸಿಕ ಒತ್ತಡ, ಮಧುಮೇಹ, ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳಿಲ್ಲ. ಭಾರತದಲ್ಲಿ ಆಹಾರಕ್ರಮ, ಜೀವನ ಶೈಲಿ ಹದಗೆಟ್ಟಿದ್ದು, ಯುವಕರಲ್ಲೂ ಹಲವಾರು ಮಾರಣಾಂತಿಕ ಕಾಯಿಲೆ, ಮಾನಸಿಕ ಒತ್ತಡ, ಮಧುಮೇಹ, ಅಧಿಕ ರಕ್ತದೊತ್ತಡ ಕಾಣಿಸುತ್ತಿವೆ. ಹಾಗಾಗಿ ಆಹಾರಪದ್ಧತಿ ಅತ್ಯಂತ ಅವಶ್ಯಕ ಎಂದು ತಿಳಿಸಿದರು.

ನಮ್ಮ ವ್ಯವಸ್ಥೆಯಲ್ಲಿ ಬಹಳ ಶಿಸ್ತು ಈಗಾಗಲೇ ಇದೆ. ಅದಕ್ಕೆ ತಾಯಿಯೇ ಉದಾಹರಣೆ, ಸಮಾಜದಲ್ಲಿ ಒಬ್ಬಳೇ ಹಲವು ಪಾತ್ರವನ್ನು ನಿರ್ವಹಿಸುತ್ತಾಳೆ. ಬಹುಕಾರ್ಯ ಸಮಾಜಲ್ಲಿ ಮುನ್ನಡೆಯುತ್ತಿದೆ. ಅದನ್ನ ನಾವು ಕಂಡುಕೊಂಡು ಅದರ ಸರಿಯಾದ ಮಾರ್ಗ ಕಂಡುಕೊಳ್ಳಬೇಕಿದೆ. ಜೀವನ ಶೈಲಿ ಬದಲಾದ ಯುಗದಲ್ಲಿ, ನಮ್ಮ ಜ್ಞಾನ ವೃದ್ಧಿಗಾಗಿ ಶಿಕ್ಷಣವೊಂದೆ ಒಳ್ಳೆಯ ಹಾದಿ ಅದರ ಹೊರತು, ಜ್ಞಾನದ ವೃದ್ಧಿಯಲ್ಲಿ ಯಾವುದೇ ಬದಲಾವಣೆಯಾಗದು ಎಂದರು.

ಪ್ರತಿಯೊಬ್ಬರಿಂದಲೂ ಸಾಧನೆ ಸಾಧ್ಯವಿದೆ. ಹಾಗಾಗಿ ಶಿಕ್ಷಣವನ್ನು ಸಮರ್ಥವಾಗಿ ಬಳಸಿಕೊಂಡು ಭವಿಷ್ಯವನ್ನು ರೂಪಿಸಕೊಳ್ಳಬೇಕಿದೆ. ಶಿಕ್ಷಣ ಮತ್ತು ಕೌಶಲ್ಯ ಇಲ್ಲವಾದರೆ ಮಾನವೀಯ ಮೌಲ್ಯಗಳು ಕಣ್ಮರೆಯಾಗುತ್ತವೆ. ಉತ್ತಮ ಸಮಾಜಕ್ಕಾಗಿ ಶಿಕ್ಷಣ, ಕೌಶಲ್ಯ ಮತ್ತು ಮೌಲ್ಯಗಳು ಅತೀ ಮುಖ್ಯ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಉದ್ಯೋಗಗಳು ಬಹಳ ಮುಖ್ಯವಾಗಿದ್ದು, ಉದ್ಯೋಗ ದೊರೆಯುವುದು ಕಷ್ಟವಾಗುತ್ತಿದೆ. ಸ್ಪರ್ಧೆಗಳಿಲ್ಲದೇ ಏನನ್ನು ಸಾಧಿಸಲು ಸಾಧ್ಯವಿಲ್ಲ. ಅದಕ್ಕಾಗಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕೌಶಲ್ಯಗಳನ್ನು ಹೆಚ್ಚಾಗಿ ಅಳವಡಿಸಿಕೊಳ್ಳಬೇಕು. ಹಾಗಾಗಿ ಶಿಕ್ಷಣ ಜ್ಞಾನ ಹೆಚ್ಚಿಸಿದರೆ, ಕೌಶಲ್ಯ ಬದುಕು ರೂಪಿಸಬಲ್ಲದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಕಾಲೇಜು ಶಿಕ್ಷಣ ವಿಭಾಗ ಬೆಂಗಳೂರು ನಿರ್ದೇಶಕಿ ಪ್ರೊ.ಜಿ. ಶೋಭಾ, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಕೋಮಲಾ, ಸಂಶೋಧಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಡೆಯಪ್ಪ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅವತಾರ್ 3ಡಿ (ಕ–1 + ಇಂ–2)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಸವಿತಾ ಸಮಾಜದ ಯುವಕನಿಗೆ ಜಾತಿ ನಿಂದನೆ, ಹಲ್ಲೆ; ಆರೋಪಿಗಳ ಬಂಧನಕ್ಕೆ ಆಗ್ರಹ



ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಐಲಾಪುರ ಗ್ರಾಮದ ಸವಿತಾ ಸಮಾಜದ ಯುವಕನಿಗೆ ಜಾತಿನಿಂದನೆ ಮಾಡಿ ಹಲ್ಲೆ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

ಮೈಸೂರು, ಡಿ.20(ಜಿಎ)–ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕಿನ ಐಲಾಪುರ ಗ್ರಾಮದ ಸವಿತಾ ಸಮಾಜದ ಯುವಕನಿಗೆ ಜಾತಿನಿಂದನೆ ಮಾಡಿ ಹಲ್ಲೆ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದ್ದಾರೆ.

ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿಗೆ ಭೇಟಿ ನೀಡಿದ ಮುತ್ತುರಾಜ್ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕರನ್ನು ಭೇಟಿ ಮಾಡಿ, ಸವಿತಾ ಸಮಾಜ ಸಮುದಾಯದ ಯುವಕನಿಗೆ ಜಾತಿನಿಂದನೆ ಮಾಡಿ ಹಲ್ಲೆ ಮಾಡಿರುವ ಕಿಡಿಕೇಡಿಗಳ ಬಗ್ಗೆ ಮಾಹಿತಿ ನೀಡಿ ಕೂಡಲೇ ಅವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಐಲಾಪುರ ಗ್ರಾಮದ ಎನ್.ರಾಜು ಹಾಗೂ ಪತ್ನಿಗೆ ಕೆಲ ಕಿಡಗೇಡಿಗಳು ಜಾತಿ ನಿಂದನೆ ಮಾಡುವ ಮೂಲಕ ದೈಹಿಕವಾಗಿ ಹಲ್ಲೆ ಮಾಡಿದ್ದಾರೆ. ಈಗಾಗಲೇ ದೂರು ಸಲ್ಲಿಸಿದ್ದು, ದೂರು ನೀಡಿದ್ದನ್ನು ಪ್ರಶ್ನಿಸಿ, ಮತ್ತೆ ಕೊಲೆ ಮಾಡುವುದಾಗಿ ಧಮ್ಕಿ ಹಾಕಿದ್ದಾರೆ. ಈ ಹಿನ್ನೆಲೆಯಲ್ಲಿ ಹೆದರಿ ಆ ಯುವಕನ ಕುಟುಂಬದವರು ಮೈಸೂರಿಗೆ ಬಂದು ನೆಲಸಿದ್ದಾರೆ.

ರಾಜ್ಯದಲ್ಲಿ ಪದೇ ಪದೆ ಇದೇ ರೀತಿ ಜಾತಿ ನಿಂದನೆ ಮಾಡುತ್ತಿರುವುದರಿಂದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ದಲಿತ ಸಮುದಾಯ ನಿಂದನೆ ಅಟ್ರಾಸಿಟಿ ಕೇಸ್ ದಾಖಲಿಸುವಂತೆ ಸವಿತಾ ಸಮಾಜ ನಿಂದಿಸುವವರ ವಿರುದ್ಧ ಕಠಿಣ ಕಾನೂನು ಜಾರಿ ಮಾಡುವಂತೆ ಮನವಿ ಸಲ್ಲಿಸುತ್ತೇನೆ ಎಂದರು.

ಈ ವೇಳೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎ.ಎಂ.ನಾಗರಾಜು ಮಾತನಾಡಿ, ಜಿಲ್ಲಾಧಿಕಾರಿಗಳು ಮತ್ತು ಎಸ್‌ಪಿ ಅವರು ನೀಡಿರುವ ಭರವಸೆಯಂತೆ ಕಿಡಿಕೇಡಿಗಳನ್ನು ಬಂಧಿಸಬೇಕು. ಬಂಧಿಸದಿದ್ದರೆ ಸಮುದಾಯದ ವತಿಯಿಂದ ಎಸ್‌ಪಿ ಕಚೇರಿ ಮುಂಭಾಗ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಹಲ್ಲೆಗೊಳಗಾದ ಎನ್.ರಾಜು ಮಾತನಾಡಿ, ಬೈಕ್ ನಿಲ್ಲಿಸಿರುವ ಕ್ಷುಲಕ ಕಾರಣಕ್ಕೆ ಜಗಳ ಆರಂಭಿಸಿ, ಅವಾಚ್ಯ ಶಬ್ಧಗಳಿಂದ ನಿಂದಿಸಿ, ನನಗೆ ಹಾಗೂ ನನ್ನ ಪತ್ನಿ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಂ.ಡಿ.ರಾಜೇಶ್, ಮಂಜುನಾಥ್, ಧನರಾಜ್, ಅಶೋಕ್ ಶ್ರೀನಿವಾಸ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಷ್ಠಾಪನೆಗೆ ತಂದಿಟ್ಟ ರೈತ ನಾಯಕ ದಿವಂಗತ ಪುಟ್ಟಣ್ಣಯ್ಯ ಪ್ರತಿಮೆ ನಾಪತ್ತೆ ಗೊಂದಲ

● ಇಲವಾಲ ಠಾಣೆಯಲ್ಲಿ ಪ್ರತಿಮೆ ಪತ್ತೆ! ● ಅನುಮತಿ ಇಲ್ಲದೆ ಪ್ರತಿಷ್ಠಾಪನೆಗೆ ಅವಕಾಶ ಇಲ್ಲ ● ರೈತರ ಅಹೋರಾತ್ರಿ ಧರಣಿ; ತಹಶೀಲ್ದಾರ್ ಭರವಸೆ

ಮೈಸೂರು, ಡಿ.20(ವಿವಿಹೆಚ್)– ರೈತ ನಾಯಕ ದಿ. ಕೆ.ಎಸ್.ಪುಟ್ಟಣ್ಣಯ್ಯ ಅವರ ಪ್ರತಿಮೆ ನಾಪತ್ತೆ ಪ್ರಕರಣ ಸುಖಾಂತ್ಯ ಕಂಡಿದೆ.

ಇದೇ ಡಿ.23ರಂದು ಇಲವಾಲದಲ್ಲಿ ಕೆ.ಎಸ್.ಪುಟ್ಟಣ್ಣಯ್ಯ ಅವರ ಪ್ರತಿಮೆ ಅನಾವರಣ ಆಗಬೇಕಿತ್ತು. ಆದರೆ ದಿಢೀರ್ ಪ್ರತಿಮೆ ಕಾಣೆಯಾಗಿದ್ದು, ಕೆಲಕಾಲ ಗೊಂದಲ ಉಂಟಾಗಿತ್ತು.

ಹೀಗೆ ನಾಪತ್ತೆಯಾಗಿದ್ದ ಪುಟ್ಟಣ್ಣಯ್ಯ ಪ್ರತಿಮೆ ಪೊಲೀಸ್ ಠಾಣೆಯಲಿತ್ತು. ಇಲವಾಲ ಠಾಣೆ ಪೊಲೀಸರೇ ಪ್ರತಿಮೆಯನ್ನು ತೆಗೆದುಕೊಂಡು ಹೋಗಿ ಇಟ್ಟುಕೊಂಡಿದ್ದರು. ಇದನ್ನು ಪ್ರಶ್ನಿಸಿದ ರೈತರಿಗೆ ಅನುಮತಿ ಪಡೆಯದೆ ಅನಾವರಣ ಮಾಡುತ್ತೀರಿ ಎಂದು ತಂದಿಟ್ಟುಕೊಂಡಿದ್ದೆವು. ಸರ್ಕಾರಿ ಸ್ಥಳದಲ್ಲಿ ಅನಾವರಣ ಮಾಡಲು ಅವಕಾಶವಿಲ್ಲ ಎಂದು ಪ್ರತಿಮೆ ವಶಪಡಿಸಿಕೊಂಡಿರುವುದಾಗಿ ಪೊಲೀಸರು ಹೇಳಿದ್ದಾರೆ.

ಪೊಲೀಸರ ನಡೆಯನ್ನು ಖಂಡಿಸಿ ರೈತ ಮುಖಂಡರು ನಗರದಲ್ಲಿ ಅಹೋರಾತ್ರಿ ಧರಣಿ ನಡೆಸಿದರು. ಪ್ರತಿಮೆ ಅನಾವರಣಕ್ಕೆ ಜಿಲ್ಲಾಡಳಿತ ಅನುಮತಿ ನೀಡುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆದರು.

ಕರ್ನಾಟಕ ರಾಜ್ಯ ರೈತ ಸಂಘದಿಂದ ತಾಲೂಕಿನ ಇಲವಾಲದ ಸಂತೆಮಾಳದಲ್ಲಿ ಡಿ.23ರಂದು ಆಯೋಜಿಸಿರುವ ಬೃಹತ್ ಜಿಲ್ಲಾ ರೈತ ಸಮಾವೇಶದಲ್ಲಿ ಪುಟ್ಟಣ್ಣಯ್ಯ ಪ್ರತಿಮೆ ಅನಾವರಣ ಮಾಡಲು ಉದ್ದೇಶಿಸಲಾಗಿತ್ತು. ಆದರೆ ಗುರುವಾರ ಪ್ರತಿಮೆ ಕಾಣೆಯಾಗಿತ್ತು.

ಪೊಲೀಸರ ನಡೆ ಖಂಡಿಸಿ ರೈತರು ಪ್ರತಿಭಟಿಸಿದರು. ಸ್ಥಳಕ್ಕೆ ಬಂದ ತಹಶೀಲ್ದಾರ್ ಮಹೇಶ್‌ಕುಮಾರ್, ಇಲವಾಲದ ಸರ್ಕಾರಿ ಸ್ಥಳದಲ್ಲಿ ಪುಟ್ಟಣ್ಣಯ್ಯ ಪ್ರತಿಮೆ ಸ್ಥಾಪನೆಗೆ ಅನುಮತಿ ನೀಡುವುದಾಗಿ ಭರವಸೆ ನೀಡಿದರು. ಬಳಿಕ ರೈತರು ಪ್ರತಿಭಟನೆ ಹಿಂಪಡೆದರು.



ದಿ. ಕೆ.ಎಸ್.ಪುಟ್ಟಣ್ಣಯ್ಯ ಅವರ ಪ್ರತಿಮೆ

ಬೆಂಕಿ ಹಚ್ಚಿಕೊಂಡು ಬಿಜೆಪಿ ಕಾರ್ಯಕರ್ತೆ ಆತ್ಮಹತ್ಯೆ



ಜ್ಯೋತಿ

ಕಲಬುರಗಿ, ಡಿ.20– ಕಲಬುರಗಿ ಜಿಲ್ಲೆ ನಂದಿಕೂರ ಗ್ರಾಮದ ಬಳಿ ಬಿಜೆಪಿ ಕಾರ್ಯಕರ್ತೆಯೊಬ್ಬರು ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಭೀಕರ ಘಟನೆ ವರದಿಯಾಗಿದೆ.

ಮೃತರನ್ನು ಕಲಬುರಗಿಯ ಬ್ರಹ್ಮಪೂರ ಬಡಾವಣೆಯ ನಿವಾಸಿ ಜ್ಯೋತಿ ಪಾಟೀಲ್ (35) ಎಂದು ಗುರುತಿಸಲಾಗಿದೆ. ನಿನ್ನೆ (ಡಿ.19) ರಾತ್ರಿ ಜ್ಯೋತಿ ಪಾಟೀಲ್ ಅವರು ನಂದಿಕೂರ ಗ್ರಾಮದ ನಿವಾಸಿ ಹಾಗೂ ರಿಯಲ್ ಎಸ್ಟೇಟ್ ಉದ್ಯಮಿ ಮಲ್ಲಿನಾಥ್ ಬಿರಾದಾರ್ ಮನೆಗೆ ತೆರಳಿದ್ದರು.

ಮಲ್ಲಿನಾಥ್ ಬಿರಾದಾರ್ ಕೂಡ ಬಿಜೆಪಿ ಕಾರ್ಯಕರ್ತನಾಗಿದ್ದು, ಆತ ಮನೆಯಲ್ಲಿ ಇಲ್ಲದ ಸಮಯದಲ್ಲಿ ಜ್ಯೋತಿ ಮನೆಗೆ ಹೋಗಿ ಬಾಗಿಲು ಬಡಿದಿದ್ದಾರೆ. ಮಲ್ಲಿನಾಥ್ ಪತ್ನಿ ಬಾಗಿಲು ತೆರೆದ ತಕ್ಷಣ ಜ್ಯೋತಿ ಪಾಟೀಲ್ ಮೊದಲೇ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಿದ್ದಾರೆ ಎನ್ನಲಾಗಿದೆ.

ಮೃತ ಜ್ಯೋತಿ ಪಾಟೀಲ್ ವಿವಾಹಿತೆ. ಇತ್ತ ಮಲ್ಲಿನಾಥ್ ಬಿರಾದಾರ್ ಕೂಡ ವಿವಾಹಿತನಾಗಿದ್ದು, ಹೆಂಡತಿ ಮಕ್ಕಳೊಂದಿಗೆ ವಾಸಿಸುತ್ತಿದ್ದನು. ಜ್ಯೋತಿ ಪಾಟೀಲ್ ಅವರು ರಾತ್ರಿ ವೇಳೆ ಮಲ್ಲಿನಾಥ್ ಮನೆಗೆ ಏಕೆ ಹೋಗಿದ್ದರು ಎನ್ನುವುದು ಸದ್ಯಕ್ಕೆ ನಿಗೂಢವಾಗಿದೆ.

ಈ ಸಾವಿನ ಹಿಂದೆ ಅಕ್ರಮ ಸಂಬಂಧದ ಶಂಕೆ ವ್ಯಕ್ತವಾಗುತ್ತಿದ್ದು, ಇದು ವ್ಯವಸ್ಥಿತ ಕೊಲೆ ಎಂದು ಜ್ಯೋತಿಯ ಕುಟುಂಬಸ್ಥರು ದೂರಿದ್ದಾರೆ. ಈ ಘಟನೆ ಸಂಭವಿಸಿದ ವಿಷಯ ತಿಳಿಯುತ್ತಿದ್ದಂತೆ ಫರಹತಾಬಾದ್ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಕನಕ ಜಯಂತಿಯಲ್ಲಿ ಸಾಧಕರಿಗೆ ಸನ್ಮಾನ

ವಾಲ್ಮೀಕಿ, ಬುದ್ಧ, ಬಸವಣ್ಣ, ಕನಕದಾಸರ ಪುಸ್ತಕ ಓದಿ



ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಪ್ರೌಢಶಾಲೆಯಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.20(ಜಿಎ)–ಮಕ್ಕಳು ವಾಲ್ಮೀಕಿ, ಬುದ್ದ, ಬಸವಣ್ಣ, ಕನಕದಾಸರ ಪುಸ್ತಕಗಳನ್ನು ಓದಬೇಕು. ರಾಮಾಯಣದ ಮಹತ್ವ ಮತ್ತು ಕರ್ತವ್ಯಗಳನ್ನು ಅರಿಯಬೇಕು ಎಂದು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಂ.ಜಿ. ಆರ್.ಅರಸ್ ಸಲಹೆ ನೀಡಿದರು.

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಪ್ರೌಢಶಾಲೆಯಲ್ಲಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಆಯೋಜಿಸಿದ್ದ ಕನಕದಾಸ ಜಯಂತಿ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಾಲ್ಮೀಕಿ, ಬುದ್ದ, ಬಸವಣ್ಣ, ಕನಕದಾಸರು ಯಾರು ಸಹ ಹೆಚ್ಚು ಓದಿದವರಲ್ಲ. ಸಂಶೋಧನೆ ನಡೆಸಿ ಪಿಎಚ್.ಡಿ ಮಾಡಿದವರಲ್ಲ. ಆದರೆ, ಇವರ ಹೆಸರಿನಲ್ಲಿ ಈ ದಿನ ನಾವೆಲ್ಲ ಪಿಎಚ್.ಡಿ ಮಾಡುತ್ತಿದ್ದೇವೆ ಎಂದರು.

ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ನರರೋಗ ತಜ್ಞ ಡಾ.ಸುಶ್ರುತ್ ಗೌಡ ಮಾತನಾಡಿ, ಮಹಾನೀಯರು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ. ನಾನು ವೃತ್ತಿಯಲ್ಲಿ ವೈದ್ಯನಾದರೂ ಇತ್ತೀಚೆಗೆ ಜನಸೇವೆ ಮಾಡಬೇಕೆಂದು ಬಯಸಿ ರಾಜಕಾರಣಕ್ಕೆ ಬರುತ್ತಿದ್ದೇನೆ. ನನಗೆ ಹಣ ಮಾಡುವ ಗುರಿ ಇಲ್ಲ. ನಮ್ಮಲ್ಲಿ ಬರುವಂತಹ ಎಷ್ಟೋ ರೋಗಿಗಳು ಚಿಕಿತ್ಸೆ ಪಡೆಯಲು ಹಣ ಇರುವುದಿಲ್ಲ ಇದನ್ನೆಲ್ಲಾ ನೋಡಿ ಕೆಆರ್.ಆಸ್ಪತ್ರೆ ಮಾದರಿಯಲ್ಲೇ ಮೈಸೂರಿನಲ್ಲಿ ಮತ್ತೊಂದು ಆಸ್ಪತ್ರೆ ನಿರ್ಮಿಸುವ ಗುರಿ ಇದೆ ಎಂದು ತಿಳಿಸಿದರು.

ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಶೋಭಾ ಮಾತನಾಡಿ, ಮಹಾಪುರುಷರಿಂದ ನಾನು ಈ ದಿನ ವೈದ್ಯನಾಗಿದ್ದೇನೆ. ವಾಲ್ಮೀಕಿ, ಕನಕದಾಸರು, ಬಸವಣ್ಣ, ಬುದ್ಧ ನಮ್ಮ ಜಗತ್ತಿಗೆ ಆದರ್ಶವಾಗಿದ್ದಾರೆ ಅವರನ್ನು ಪಾಲನೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ ಪತ್ರಕರ್ತ ಕೆ.ಬಿ. ರಮೇಶ್ ನಾಯಕ್, ಪತ್ರಿಕಾ ಛಾಯಾಗ್ರಾಹಕ ಎಂ.ಎ.ಶ್ರೀರಾಮ್ ಪೌರಕಾರ್ಮಿಕರಾದ ಆರತಿ, ಸಾಹಿತಿ ಆದಿಲ್ ಪಾಶ, ಕಲಾವಿದ ಅಂಬಳೆ ಶಿವಣ್ಣ, ಸಮಾಜ ಸೇವಕರಾದ ಶ್ರೀಶಭಟ್, ಎಸ್.ವೆಂಕಟೇಶ, ರತ್ನ ಹಾಲಪ್ಪಗೌಡ, ಮಮತಶ್ರೀ, ಸಮಾಜ ಸೇವಕ ಬಿ.ಆರ್.ನಟರಾಜ್ ಜೋಯಿಸ್ ಅವರನ್ನು ಸನ್ಮಾನಿಸಲಾಯಿತು.

ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿ ರವಿ ಮನೋಹರ್, ಪದಾಧಿಕಾರಿಗಳಾದ ಗುರುಬಸಪ್ಪ, ವಾದಪ್ಪ ಚಂದ್ರು ಭವಾನಿ, ನಾಗರಾಜು, ಹರೀಶ್, ಚಿನ್ನಪ, ಎಲ್‌ಐಸಿ ಸಿದ್ದಪ್ಪ, ಸ್ವಾಮಿ ಅನೆಕೆರೆ, ಶಿವೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಒಳಮೀಸಲಾತಿ ಜಾರಿ ಮಾಡುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಇತಿಹಾಸ ಬರೆದರು

ಎಂಎಲ್‌ಸಿ ಡಾ. ತಿಮ್ಮಯ್ಯ ಬಣ್ಣನೆ



ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನ್ ರಾಮ್ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ ಆಯೋಜಿಸಿದ್ದ 'ಭಾರತದ ರಾಜಕಾರಣದಲ್ಲಿ ಬಾಬೂ ಜಗಜೀವನ್ ರಾಮ್‌ರ ಕೊಡುಗೆಗಳು' ವಿಷಯ ಕುರಿತು ಒಂದು ದಿನದ ವಿಚಾರ ಸಂಕಿರಣಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

ಮೈಸೂರು, ಡಿ.20(ಎಂಟಿವೈ)– ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸುವಂತೆ ಕಳೆದ ಮೂವತ್ತು ವರ್ಷಗಳಿಂದ ನಡೆಯುತ್ತಿದ್ದ ನಿರಂತರ ಹೋರಾಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಂದಿಸಿ ಒಳ ಮೀಸಲಾತಿ ಕಲ್ಪಿಸಿಕೊಟ್ಟಿರುವುದರಿಂದ ಅವರ ಹೆಸರು ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ದಾಖಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಾಬೂ ಜಗಜೀವನ್ ರಾಮ್ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ 'ಭಾರತದ ರಾಜಕಾರಣದಲ್ಲಿ ಬಾಬೂ ಜಗಜೀವನ್ ರಾಮ್‌ರ ಕೊಡುಗೆ'ಗಳು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನವನ್ನು ಕೊಡುಗೆಯಾಗಿ ನೀಡುವ ಮೂಲಕ ಎಲ್ಲರಿಗೂ ಸಮಾನತೆ ತಂದು ಕೊಟ್ಟರು. ಬಳಿಕ ಮೀಸಲಾತಿ ನೀಡಿದ್ದರಿಂದ ಧ್ವನಿ ಇಲ್ಲದವರಿಗೆ ಶಕ್ತಿ ದೊರಕಿತು. ಅದೇ ರೀತಿ ಡಿ.ದೇವರಾಜ ಅರಸು ಮುಖ್ಯಮಂತ್ರಿ ಆಗಿದ್ದಾಗ ಜೀತ ಪದ್ಧತಿ ನಿರ್ಮೂಲನೆ, ಮಲ ಹೊರುವ ಪದ್ಧತಿ ನಿಷೇಧ ಮಾಡಿದ್ದಲ್ಲದೆ, ಉಳುವವನಿಗೇ ಭೂಮಿ ಹಂಚಿದರು. ಈಗ ಮುಖ್ಯಮಂತ್ರಿ ಸಿದ್ಧರಾಮಯ್ಯ, ಮೂವತ್ತು ವರ್ಷಗಳ ಬೇಡಿಕೆಯನ್ನು ಈಡೇರಿಸಿ ಒಳ ಮೀಸಲಾತಿಯನ್ನು ಜಾರಿಗೆ ತಂದು ಲಕ್ಷಾಂತರ ಕುಟುಂಬಗಳಿಗೆ ನೆರವಾಗಿದ್ದಾರೆ. ಇದೊಂದು ಐತಿಹಾಸಿಕ ತೀರ್ಮಾನ ಆಗಿದ್ದರಿಂದ ಇತಿಹಾಸದ ಪುಟ ಸೇರಿದೆ ಎಂದರು.

ಭಾರತಕ್ಕೆ ಬಾಬೂಜಿ ನೀಡಿದ ಕೊಡುಗೆ ಅಪಾರ. ಒಬ್ಬ ವ್ಯಕ್ತಿ ಶಕ್ತಿಯಾಗಬೇಕಾದರೆ ಚೈತನ್ಯ ಇರಬೇಕು. ಡಾ.ಬಿ.ಆರ್.ಅಂಬೇಡ್ಕರ್, ಬಾಬೂಜಿ, ನೆಹರು ಅವರನ್ನು ತೆಗೆದುಕೊಂಡರೆ ಸಾಧನೆಗಳು ಕಣ್ಣ ಮುಂದೆ ಬರುತ್ತದೆ. ಬಾಬೂಜಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ತಂದೆಯನ್ನು ಕಳೆದುಕೊಳ್ಳುತ್ತಾರೆ. ನಂತರ ಗಾಂಧೀಜಿ ಅವರೊಂದಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಳ್ಳುತ್ತಾರೆ. ಸ್ವಾತಂತ್ರ್ಯ ಪೂರ್ವದ ಆಡಳಿತದಲ್ಲಿ ಅಂಚೆ ವ್ಯವಸ್ಥೆಯನ್ನು ತಂದು ಸಂಪರ್ಕ ಕಲ್ಪಿಸಿದರು. ರೈಲ್ವೆ ಸಚಿವರಾಗಿ ಸಾಕಷ್ಟು ಕೆಲಸ ಮಾಡಿದರು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಬಾಬೂ ಜಗಜೀವನ್ ರಾಮ್ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಕೆ.ಸದಾಶಿವ ಮಾತನಾಡಿ, ಈ ಪೀಠ ಸ್ಥಾಪನೆಯಾಗಿ 25 ವರ್ಷಗಳಾಗಿದೆ. ಎಂಟು ಪುಸ್ತಕಗಳು ಪ್ರಕಟವಾಗಿದ್ದು, ಏಳು ಪುಸ್ತಕಗಳು ಸಿದ್ಧಗೊಂಡಿವೆ. ಜಗಜೀವನ್ ರಾಮ್ ಅವರ ಸಾಹಿತ್ಯ ರಚನೆ ಅವರ ಬಗ್ಗೆ ಹೆಚ್ಚು ಪ್ರಚಾರ ಮಾಡುವ ಕೆಲಸ ಮಾಡಲಾಗುತ್ತಿದೆ. ಪಿಹೆಚ್‌ಡಿ ಗ್ರೈಡ್ ಶಿಪ್ ಕೊಡುವಂತೆ ಪ್ರಸ್ತಾವನೆ ಕೂಡ ಸಲ್ಲಿಸಲಾಗಿದೆ ಎಂದರು.

ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ನಾಗರಾಜು ಮಾತನಾಡಿ, ಕೃಷಿ ಕ್ಷೇತ್ರದಲ್ಲಿ ಅಮೂಲಾಗ್ರ ಬದಲಾವಣೆ ತಂದು ಹಸಿರು ಕ್ರಾಂತಿಗೆ ಕಾರಣರಾದರು. ಕಾರ್ಮಿಕ ಸಚಿವರಾಗಿದ್ದಾಗ ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದಲ್ಲಿ ಕನಿಷ್ಠ ವೇತನ ಜಾರಿಗೆ ಬರುವಂತೆ ನೋಡಿಕೊಂಡರು. ಮುಂದಿನ ದಿನಗಳಲ್ಲಿ ಪೀಠಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನು ಒದಗಿಸಿ ಕೊಡಲಾಗುವುದು ಎಂದು ಭರವಸೆ ನೀಡಿದರು.

ಬಾಬೂ ಜಗಜೀವನರಾಮ್–ಸ್ವಾತಂತ್ರ್ಯ ಹೋರಾಟಗಾರ ಮತ್ತು ರಾಜನೀತಜ್ಞ ಕುರಿತು ಸಂದರ್ಶಕ ಪ್ರಾಧ್ಯಾಪಕ ಎಚ್.ಆರ್.ಭೀಮಾಶಂಕರ್, ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣ ಮತ್ತು ಬಾಬೂ ಜಗಜೀವನರಾಮ್ ಕುರಿತು ಸಂಶೋಧನ ಅಧಿಕಾರಿ ಡಾ.ಎಂ.ಶ್ರೀನಿವಾಸಮೂರ್ತಿ, ಕಾಂಗ್ರೆಸ್ಸೇತರ ರಾಜಕಾರಣದ ರೂವಾರಿ ಬಾಬೂ ಜಗಜೀವನರಾಮ್ ಕುರಿತು ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಆರ್.ಐಶ್ವರ್ಯ ವಿಷಯ ಮಂಡಿಸಿದರು.

ಭಾರತದ ಗಡಿಯತ್ತ ನುಗ್ಗಿದ ಮೂಲಭೂತವಾದಿ ಪ್ರತಿಭಟನಾಕಾರರು

ನಿಯಂತ್ರಣ ತಪ್ಪುತ್ತಿದೆ ಬಾಂಗ್ಲಾದೇಶ



ಢಾಕಾ, ಡಿ.20– ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿ ನಾಯಕ ಷರೀಫ್ ಉಸ್ಮಾನ್ ಹಾದಿ ಹತ್ಯೆ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ, ಅಕ್ಷರಶಃ ನಿಯಂತ್ರಣ ತಪ್ಪುತ್ತಿದೆ. ಇಂಕ್ವಿಲಾಬ್ ಫೋರಂ ಮತ್ತು ಜಮಾತ್ ಉಗ್ರಗಾಮಿಗಳು ನಿನ್ನೆ (ಡಿ.19) ಬಾಂಗ್ಲಾದೇಶದ ಬೆನಪೋಲ್‌ನಿಂದ ಭಾರತದ ಗಡಿಯವರೆಗೆ ಮೆರವಣಿಗೆ ನಡೆಸಿ ಪ್ರತಿಭಟಿಸಿದ್ದಾರೆ. ಪ್ರತಿಭಟನಾಕಾರರು ಗಡಿ ಭಾಗಕ್ಕೆ ನುಗ್ಗುತ್ತಿರುವುದರಿಂದ, ಸೇನೆ ಹೈ ಅಲರ್ಟ್ ಘೋಷಣೆ ಮಾಡಿದೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವಂತೆ ಭಾರತವನ್ನು ಒತ್ತಾಯಿಸಿದ ಪ್ರತಿಭಟನಾಕಾರರು, ಭಾರತ ವಿರೋಧಿ ಘೋಷಣೆಗಳನ್ನು ಕೂಗಿದ್ದಾರೆ. ಏತನ್ಮಧ್ಯೆ, ಚಟ್ಟೋಗ್ರಾಮ್‌ನಲ್ಲಿರುವ ಚಂದ್ರನಾಥ ದೇವಸ್ಥಾನದ ಹೊರಗೆ, ಧಾರ್ಮಿಕ ಘೋಷಣೆಗಳನ್ನು ಕೂಗುತ್ತಾ, ಕೋಮುದ್ವೇಷವನ್ನು ಹರಡುವ ವ್ಯವಸ್ಥಿತ ಷಡ್ಯಂತ್ರ ಕೂಡ ನಡೆದಿದೆ.

ಪ್ರತಿಭಟನಾಕಾರರು ರಾಜಧಾನಿ ಢಾಕಾದ ಪ್ರಮುಖ ಢಾಕೇಶ್ವರಿ ದೇವಸ್ಥಾನದ ಮೇಲೆ ದಾಳಿ ನಡೆಸುವ ಗುರಿ ಹೊಂದಿದ್ದರಿಂದ ದೇವಸ್ಥಾನವನ್ನು ರಕ್ಷಿಸಲು ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದೆ. ಢಾಕಾದ ಟೋಪ್ಖಾನಾ ರಸ್ತೆಯಲ್ಲಿರುವ ಶಿಲ್ಪಿ ಗೋಷ್ಠಿ ಸಾಂಸ್ಕೃತಿಕ ಕೇಂದ್ರವನ್ನು ಸುತ್ತುವರೆದಿದ್ದ ಪ್ರತಿಭಟನಾಕಾರರು, ಕಟ್ಟಡವನ್ನು ಧ್ವಂಸಗೊಳಿಸುವ ವಿಫಲ ಪ್ರಯತ್ನ ನಡೆಸಿದ್ದಾರೆ.

ಹತ್ಯೆಗೀಡಾದ ಷರೀಫ್ ಉಸ್ಮಾನ್ ಹಾದಿ ಅವರ ಮೃತದೇಹವನ್ನು ನಿನ್ನೆ ಸಂಜೆ ಸಿಂಗಾಪುರದಿಂದ ಢಾಕಾಗೆ ತರಲಾಯಿತು. ಹಾದಿ ನಿಧನಕ್ಕೆ ಮೊಹಮ್ಮದ್ ಯೂನಸ್ ನೇತೃತ್ವದ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ಇಂದು ರಾಷ್ಟ್ರೀಯ ಶೋಕಾಚರಣೆ ದಿನವನ್ನು ಘೋಷಿಸಿದೆ. ಇಂದು ಸಂಜೆ ವೇಳೆಗೆ ಹಾದಿ ಅಂತ್ಯಕ್ರಿಯೆ ನೆರವೇರಿದೆ.

ಆದರೆ ಪ್ರತಿಭಟನಾಕಾರರು ಭಾರತದ ಗಡಿ ಭಾಗಕ್ಕೆ ನುಗ್ಗುತ್ತಿರುವುದು ಆತಂಕವನ್ನು ಹೆಚ್ಚಿಸಿದ್ದು, ಭಾರತೀಯ ಸೇನೆ ಗಡಿಯಲ್ಲಿ ಹೈ ಅಲರ್ಟ್ ಆಗಿದೆ. ಕಳೆದ ಗುರುವಾರ (ಡಿ.18) ಭಾರತ–ಬಾಂಗ್ಲಾದೇಶ ಗಡಿಗೆ ಭೇಟಿ ನೀಡಿದ್ದ ಭಾರತೀಯ ಸೇನೆಯ ಪೂರ್ವ ಕಮಾಂಡ್ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಆರ್ ಸಿ ತಿವಾರಿ, ಬಾಂಗ್ಲಾದೇಶದ ಪರಿಸ್ಥಿತಿಯನ್ನು ಸೇನೆಯು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ ಎಂದು ಹೇಳಿದ್ದರು.

ಗಲಭೆಕೋರರಿಗೆ ಮುಕ್ತ ಅವಕಾಶ ನೀಡಿರುವ ಯೂನಸ್ ಸರ್ಕಾರ, ಉದ್ದೇಶಪೂರ್ವಕವಾಗಿ ಭಾರತ ವಿರೋಧಿ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿದೆ. ಭಾರತದಲ್ಲಿ ಆಶ್ರಯ ಪಡೆದಿರುವ ಶೇಖ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಹಸ್ತಾಂತರಿಸುವಂತೆ ಒತ್ತಡ ಹೇರುವುದಕ್ಕಾಗಿ, ಪ್ರಸ್ತುತ ನಡೆಯುತ್ತಿರುವ ಹಿಂಸಾತ್ಮಕ ಪ್ರತಿಭಟನೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

ಒಟ್ಟಿನಲ್ಲಿ ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಪ್ರತಿಭಟನೆಗಳು ನಿಯಂತ್ರಣ ತಪ್ಪುತ್ತಿದ್ದು, ಪ್ರತಿಭಟನೆಗಳ ನೇತೃತ್ವ ವಹಿಸಿರುವವರು ಮತ್ತು ಮೊಹಮ್ಮದ್ ಯೂನಸ್ ಸರ್ಕಾರ ಭಾರತ ವಿರೋಧಿ ಭಾವನೆಯನ್ನು ಪ್ರಚಾರ ಮಾಡುವಲ್ಲಿ ನಿರತರಾಗಿದ್ದಾರೆ ಎಂದು ಹೇಳಬಹುದು.

ಧರ್ಮಸ್ಥಳ ಬುರುಡೆ ಪ್ರಕರಣ

ಹೋರಾಟಗಾರರ ವಿರುದ್ಧವೇ ಜೀವ ಬೆದರಿಕೆ ದೂರು ನೀಡಿದ ಮಾಸ್ಕ್ ಮ್ಯಾನ್ ಚಿನ್ನಯ್ಯ



ಹೋರಾಟಗಾರರು ಚಿನ್ನಯ್ಯ

ಬೆಳ್ತಂಗಡಿ, ಡಿ.20– ಧರ್ಮಸ್ಥಳ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಮಾಸ್ಕ್ ಮ್ಯಾನ್ ಚಿನ್ನಯ್ಯ ಜೈಲಿನಿಂದ ಹೊರ ಬಂದ ಕೂಡಲೇ ಪೊಲೀಸ್ ಠಾಣೆಗೆ ತೆರಳಿದ ಚಿನ್ನಯ್ಯ, ತನಗೆ ಹಾಗೂ ಪತ್ನಿಗೆ ಜೀವ ಬೆದರಿಕೆ ಇರುವುದಾಗಿ ಹೋರಾಟಗಾರರ ವಿರುದ್ಧವೇ ದೂರು ನೀಡಿದ್ದಾನೆ.

ನಾಲ್ಕು ತಿಂಗಳಿಂದ ಶಿವಮೊಗ್ಗ ಜೈಲಿನಲ್ಲಿದ್ದ ಚಿನ್ನಯ್ಯನಿಗೆ ನ.24ರಂದು 1 ಲಕ್ಷ ರೂ. ಬಾಂಡ್, ಇಬ್ಬರ ಶ್ಯೂರಿಟಿಯೊಂದಿಗೆ 12 ಷರತ್ತು ವಿಧಿಸಿ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಆದರೆ, ಜಾಮೀನು ಸಿಕ್ಕಿದರೂ ಚಿನ್ನಯ್ಯನಿಗೆ ಶ್ಯೂರಿಟಿ ನೀಡಲು ಯಾರೂ ಮುಂದೆ ಬಂದಿರಲಿಲ್ಲ. ಇದೀಗ ಜಾಮೀನಿನಿಂದ ಹೊರಬಂದಿರುವ ಮಾಸ್ಕ್ ಮ್ಯಾನ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠಲಗೌಡ, ಜಯಂತ್ ಹಾಗೂ ಸಮೀರ್ ಎಂ.ಡಿ. ವಿರುದ್ಧವೇ ಜೀವ ಬೆದರಿಕೆಯ ದೂರು ನೀಡಿದ್ದಾನೆ.

ಧರ್ಮಸ್ಥಳ ಪೊಲೀಸ್ ಠಾಣೆಗೆ ನೀಡಿದ ದೂರಿನಲ್ಲಿ ಈ ಐವರು ಹೋರಾಟಗಾರರು ತನಗೆ ಹಾಗೂ ತನ್ನ ಹೆಂಡತಿಯ ಜೀವಕ್ಕೆ ಕುತ್ತು ತರಬಹುದು. ಹೀಗಾಗಿ ನಮಗೆ ರಕ್ಷಣೆ ನೀಡಿ ಎಂದು ಉಲ್ಲೇಖಿಸಿದ್ದಾನೆ. ಈ ಬಗ್ಗೆ ಧರ್ಮಸ್ಥಳ ಪೊಲೀಸರು ಬೆಳ್ತಂಗಡಿ ಠಾಣೆಯಲ್ಲಿ ಮನವಿ ಸಲ್ಲಿಸಲು ಸೂಚಿಸಿದ್ದು, ಅದರಂತೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ದೂರನ್ನು ಸ್ವೀಕರಿಸಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಚಿನ್ನಯ್ಯನಿಗೆ ಗನ್‌ಮ್ಯಾನ್ ನೀಡಿ: ಬುರುಡೆ ಗ್ಯಾಂಗ್ ಸದಸ್ಯರ ವಿರುದ್ಧ ಚಿನ್ನಯ್ಯ ದೂರು ನೀಡಿದ ಬೆನ್ನಲ್ಲೇ ಚಿನ್ನಯ್ಯನಿಗೆ ಗನ್‌ಮ್ಯಾನ್ ನೀಡುವಂತೆ ಟಿ. ಜಯಂತ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮನವಿ ಮಾಡಿದ್ದಾರೆ.

ಚಿನ್ನಯ್ಯನನ್ನು ಬಳಸಿಕೊಂಡು ದೊಡ್ಡ ಪಿತೂರಿ ನಡೆಯುತ್ತಿದೆ. ಹೀಗಾಗಿ ಚಿನ್ನಯ್ಯನಿಗೆ ಕೂಡಲೇ ಗನ್ ಮ್ಯಾನ್ ಒದಗಿಸಬೇಕು ಮತ್ತು ಆತನ ಕುಟುಂಬಕ್ಕೂ ಸೂಕ್ತ ಬಂದೋಬಸ್ತ್ ಕಲ್ಪಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ಚಿನ್ನಯ್ಯನಿಗೆ ಯಾರಿಂದಲಾದರೂ ಅಪಾಯ ಉಂಟು ಮಾಡಿ, ಅದನ್ನು ಹೋರಾಟಗಾರರಾದ ನಮ್ಮ ಮೇಲೆ ಹಾಕಿ, ಆ ಮೂಲಕ ಅನ್ಯಾಯವಾಗಿ ನಮ್ಮನ್ನು ಜೈಲಲ್ಲಿ ಇರಿಸಿ ಸಾಕ್ಷಿ ನಾಶ ಮಾಡಲು ಹಾಗೂ ಪ್ರಕರಣದ ತನಿಖೆಯನ್ನು ಬೇರೆ ದಿಕ್ಕಿಗೆ ತಿರುಗಿಸಲು, ದೊಡ್ಡ ಮಟ್ಟದಲ್ಲಿ ಪಿತೂರಿ ನಡೆಯುತ್ತಿರುವುದರಿಂದ ದೂರುದಾರ ಚಿನ್ನಯ್ಯ ನೀಡಿರುವ ದೂರಿನ ಉದ್ದೇಶ ಹಾಗೂ ಇದರ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕು. ಹಾಗೆಯೇ ದೂರು ನೀಡಲು ಇವರಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಒತ್ತಡ ಹಾಕಿ ಅಪರಾಧಿಕ ಪಿತೂರಿ ನಡೆಸಿದವರ ಬಗ್ಗೆ ತನಿಖೆ ನಡೆಸಬೇಕೆಂದು ಜಯಂತ್ ಮನವಿ ಮಾಡಿದ್ದಾರೆ.

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ವಿಜಯೇಂದ್ರ ಕುಮಾರ್

(KSRTC) ಶಾರದಾದೇವಿನಗರ, ಮೈಸೂರು

ನೀವು ನಮ್ಮನಗಲಿ ಇಂದಿಗೆ 1 ವರ್ಷಗಳು ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ವೀಣಾ ಎ.ಎಸ್, ಶಿಲ್ಪಶ್ರೀ ವಿ, ಆದರ್ಶ್ ಬಾಬು ಬಿ, ಪ್ರಜ್ಞಾ ಪಿ, ರುದ್ರಾಕ್ಷ್ ಪಿ.

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821-2474475, ಫ್ಯಾಕ್ಸ್ ಸಂ.0821-2474476,
ಇ-ಮೇಲ್ : purmymul@gmail.com

IFT No: KMF/2025-26/SE4038/CALL-2 Date: 20.12.2025

ಟೆಂಡರ್ ಪ್ರಕಟಣೆ (ಇ-ಟೆಂಡರ್ ಮೂಲಕ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟವು ಚೈನ್ನನಲ್ಲಿ ವಿವಿಧ ಮಾದರಿಯ ಹಾಲಿನ ಹಾಗೂ ಮೊಸರಿನ ಪ್ಯಾಕೆಟ್‌ಗಳನ್ನು ಕೋ ಪ್ಯಾಕಿಂಗ್ ಮಾಡುವ ಬಗ್ಗೆ (ಕೋ ಪ್ಯಾಕಿಂಗ್ ಶುಲ್ಕದಲ್ಲಿ ಸಂಸ್ಕರಣಾ, ಪಾಶ್ಚರೈಜಿಂಗ್,ಸ್ಟ್ಯಾಂಡರ್ಡೈಜಿಂಗ್, ಕ್ಲಾರಿಫೈಯಿಂಗ್, ಹೋಮೋಜಿನೈಜೇಷನ್, ಪ್ಯಾಕಿಂಗ್, ರೆಫ್ರಿಜರೇಷನ್ ಹಾಗೂ ರವಾನೆ ಒಳಗೊಂಡಂತೆ) ಇ-ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಆದ https://kppp.karnataka.gov.in ವೆಬ್‌ಸೈಟ್‌ನಲ್ಲಿ ದಿನಾಂಕ:03.01.2026, ಸಂಜೆ 5.00 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430821, 9482231739) ಸಂಪರ್ಕಿಸಬಹುದಾಗಿದೆ.

ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

(ಕಂದಾಯ ಇಲಾಖೆ)
ತಹಶೀಲ್ದಾರ್ ರವರ ಕಾರ್ಯಾಲಯ, ಸರಗೂರು ತಾಲ್ಲೂಕು, ಸರಗೂರು–571121 ಮೈಸೂರು ಜಿಲ್ಲೆ
Ph: 08228-296100 Email: tahsaraguru@gmail.com
ನಂ.ಡಿ.ವಿ.ಎಸ್./ಸಿ.ಆರ್.26/2025–26 ದಿನಾಂಕ: 11.12.2025

ಹರಾಜು ಪ್ರಕಟಣೆ

ಮೈಸೂರು ಜಿಲ್ಲೆ ಸರಗೂರು ತಾಲ್ಲೂಕು ಚಿಕ್ಕದೇವಮ್ಮ ಬೆಟ್ಟದ ಮೇಲಿರುವ ಶ್ರೀ ಚಿಕ್ಕದೇವಮ್ಮ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವವು ದಿ: 02.01.2026 ರಿಂದ 05.01.2026ರ ವರೆಗೆ ನಡೆಯಲಿದ್ದು, ಸದರಿ ಜಾತ್ರಾ ಮಹೋತ್ಸವದ ಅಂಗವಾಗಿ ಜಾತ್ರಾ ಮಾಳದಲ್ಲಿನ ಅಂಗಡಿ ಮುಂಗಟ್ಟುಗಳ ಸುಂಕ ವಸೂಲಾತಿ ಮಾಡುವ ಹಕ್ಕನ್ನು ಉಲ್ಲೇಖದ ನಿರ್ಣಯದಂತೆ ದಿ: 23.12.2025 ರಂದು ಸರಗೂರು ತಾಲ್ಲೂಕು ಕಛೇರಿಯಲ್ಲಿ ಬೆಳಿಗ್ಗೆ 12.00 ಗಂಟೆಗೆ ತಹಶೀಲ್ದಾರ್, ಸರಗೂರು ರವರ ಸಮಕ್ಷಮದಲ್ಲಿ ಬಹಿರಂಗಹರಾಜು ಪ್ರಕ್ರಿಯೆ ನಡೆಯುವುದರಿಂದ ಹರಾಜಿನಲ್ಲಿ ಭಾಗವಹಿಸುವವರು ಸಂಬಂಧಿಸಿದ ದಾಖಲೆಗಳೊಂದಿಗೆ ನಿಗಧಿತ ಸಮಯಕ್ಕೆ ಸರಿಯಾಗಿ ಹಾಜರಾಗಲು ಕೋರಿದೆ. ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು. ದೂ.ಸಂ.9379015003

ಸಹಿ/– ತಹಶೀಲ್ದಾರ್, ಸರಗೂರು ತಾಲ್ಲೂಕು

DIPR/DDMYS/1388/KSMCA/795/2025-26

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್. ಅಹ್ಮದ್ ಷರೀಫ್ ರವರ ಮಗ ಶ್ರೀ. ನದೀಮ್ ಅಹ್ಮದ್ ಷರೀಫ್ – ಮೆ. ತಾಜ್ ಸ್ಟೀಲ್ಸ್ ಮತ್ತು ಅಲಾಯ್ಸ್ ಇವರು ನನ್ನ ಕಕ್ಷಿದಾರರಿಗೆ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳು, ಖಾಸಗಿ ವ್ಯಕ್ತಿಗಳು, ಶಾಸನಬದ್ಧ ಅಧಿಕಾರ ಉಳ್ಳ ಕಛೇರಿಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 15 (ಹದಿನೈದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ, ಕೂರ್ಗಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕಿನಲ್ಲಿರುವ ಕೈಗಾರಿಕಾ ನಿವೇಶನದ ಸಂಖ್ಯೆ : 18 & 19, ಪ್ರಸ್ತುತ ಹೂಟಗಳ್ಳಿ ನಗರ ಸಭೆ ವ್ಯಾಪ್ತಿಗೆ ಒಳಪಟ್ಟ ಇ–ಖಾತೆಯಂತೆ ಸ್ವತ್ತಿನ ಸಂಖ್ಯೆ : 8544731933, ಸ್ವತ್ತಿನ ಹಳೇ ಸಂಖ್ಯೆ ಹಾಗೂ ನಿರ್ಧರಣಾ ಸಂಖ್ಯೆ: 66/ಪ್ಲಾಟ್ 18, 19 ಉಳ್ಳ ಸ್ವತ್ತಿನ ಒಟ್ಟು ವಿಸ್ತೀರ್ಣ : 8069 ಚದರ ಮೀಟರ್‌ಗಳು. ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ – ಪ್ಲಾಟ್ ನಂ. 17, ಪಶ್ಚಿಮಕ್ಕೆ – ಪ್ಲಾಟ್ ನಂ. 20, ಉತ್ತರಕ್ಕೆ – ಕೆ.ಐ.ಎ.ಡಿ.ಬಿ. ರಸ್ತೆ ಮತ್ತು ದಕ್ಷಿಣಕ್ಕೆ ಪ್ಲಾಟ್ ನಂ. 10 & 11.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641

ದಿನಾಂಕ : 20–12–2025 email: sldlawfirm2021@gmail.com

PUBLIC NOTICE

My client intends to purchase the below mentioned properties from its present owner in possession **Smt. M. Malligea Cariappa.**

The general public, banks, lenders, relatives, heirs apparent etc., are hereby called upon to lodge their objections if any with me with regard to the **land bearing Sy.No.126/1 measuring 27 Guntas, land bearing Sy.No.126/2 measuring 7 Acres 3 Guntas and land bearing Sy.No.127 measuring 36 Guntas excluding kharab of 1 Gunta in all measuring 8 Acres 27 Guntas all situated at Hampapura Village, Kasaba Hobli, Srirangapatna Taluka and Mandya district.**

In case if anyone have any claim or rights over the said property/properties, they can lodge their objections/ claims with cogent documents/records so as to reach me ***within 3 weeks*** from today, failing which, my client may proceed to purchase the said property/ properties and any objections/claims raised later on will not be conceded/ entertained.

Eashwar Prasad. B., Advocate,
No.15, 4th floor, Grand Majestic,
Gandhinagar 2nd Cross Road,
Bengaluru-560009.
Mob: 9448690314 / 8310039482 / 9945699995
Bengaluru Date: 20.12.2025

ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ

ಇಲವಾಲ, ಮೈಸೂರು ತಾಲ್ಲೂಕು

ರಿ.ನಂ: ಡಿ.ಆರ್.ಎಂ/ಆರ್.ಜಿ.ಎನ್./ಎಸ್./1580/77–78 ತಾ॥ 8–9–77

ಬಹಿರಂಗ ಹರಾಜು ಪ್ರಕಟಣೆ

ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮೊದಲ ಅಂತಸ್ತಿನ 05 ವಾಣಿಜ್ಯ ಮಳಿಗೆಗಳನ್ನು ಸಂಘದ ಆಡಳಿತ ಮಂಡಳಿ ಹಾಗೂ ಅಧ್ಯಕ್ಷರ ಸಮ್ಮುಖದಲ್ಲಿ ದಿನಾಂಕ: 30–12–2025 ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಬಹಿರಂಗ ಹರಾಜು ಹಾಕಲಾಗುವುದು ಆಸಕ್ತಿಯುಳ್ಳ ಸಂಘದ ಷೇರುದಾರ ಸದಸ್ಯರು ಬಿಡ್ ನಲ್ಲಿ ಭಾಗವಹಿಸಿ ಮಳಿಗೆಗಳನ್ನು ಬಾಡಿಗೆಗೆ ಪಡೆಯಬಹುದು.

ಹರಾಜು ವಿವರ

ಕ್ರಸಂ.	ಮಳಿಗೆಗಳ ವಿವರ	ಹರಾಜು ಮುಂಗಡ ಹಣ	ಕನಿಷ್ಠ ಬಿಡ್ ದರ	ಪ್ರತಿ ಮಾಹೆ ಬಾಡಿಗೆ
1	ಮಳಿಗೆ ನಂ 1	50,000	2,00,000	5000
2	ಮಳಿಗೆ ನಂ 2	50,000	2,00,000	5000
3	ಮಳಿಗೆ ನಂ 3	50,000	2,00,000	5000
4	ಮಳಿಗೆ ನಂ 4	50,000	2,00,000	5000
5	ಮಳಿಗೆ ನಂ 5	50,000	2,00,000	5000

ಸ್ಥಳ : ಸಹಕಾರ ಸಂಘದ ಕಛೇರಿ ಆವರಣ

ಹರಾಜಿನ ನಿಬಂಧನೆಗಳು

1. ಕ್ರಸಂ 1 ರಿಂದ 5 ರವರೆಗಿನ ಮಳಿಗೆಗಳು ಮಾತ್ರ ಬಹಿರಂಗ ಹರಾಜಿಗೆ ಒಳಪಟ್ಟಿರುತ್ತದೆ.
2. ಮಳಿಗೆ ಹರಾಜಿನಲ್ಲಿ ಭಾಗವಹಿಸಲು ಹರಾಜಿನ ದಿನಾಂಕಕ್ಕೆ (ಸಂಘದ ಸದಸ್ಯತ್ವ) ವರ್ಷ ತುಂಬಿದ ಸದಸ್ಯರಿಗೆ ಅವಕಾಶವಿರುತ್ತದೆ.
3. ಹರಾಜಿನಲ್ಲಿ ಭಾಗವಹಿಸುವ ಷೇರುದಾರ ಸದಸ್ಯರು ಮುಂಗಡ ಠೇವಣಿ 50,000/– ರೂ ಗಳನ್ನು ಹರಾಜು ನಡೆಯುವ ದಿನಾಂಕ ಹಿಂದಿನ ದಿನ ಅಂದರೆ ತಾ॥ 29–12–2025ರ ಸಂಜೆ 5–00 ಗಂಟೆಯ ಒಳಗೆ ಮುಂಚಿತವಾಗಿ ಸಂಘಕ್ಕೆ ಪಾವತಿಸಬೇಕು.
4. ಹರಾಜಿನಲ್ಲಿ 05 ಮಳಿಗೆಗಳಿದ್ದು ಪ್ರತಿಯೊಂದು ಮಳಿಗೆಗು ಪ್ರತ್ಯೇಕ ಹರಾಜು ಇದ್ದು ಪ್ರತ್ಯೇಕ ಮುಂಗಡ ಹಣ ಪಾವತಿಸಬೇಕಾಗಿರುತ್ತದೆ.
5. ಒಂದು ಮಳಿಗೆಯ ಹರಾಜಿನ ಮುಂಗಡ ಹಣ ಒಂದೇ ಮಳಿಗೆಗೆ ಮಾತ್ರ ಅವಕಾಶ ಇರುತ್ತದೆ.
6. ಬಿಡ್‌ನಿಂದ ಬಿಡ್‌ದಾರರು ಮುಂಗಡಹಣ ಸೇರಿ ಬಿಡ್ ಮೊಬಲಗು ಶೇ50% ಹಣವನ್ನು ಹರಾಜಿನ ದಿನವೇ ಸಂಜೆ 5.00 ಗಂಟೆಯೊಳಗೆ ಪಾವತಿಸಬೇಕು ಉಳಿದ ಹಣವನ್ನು 15 ದಿನಗಳೊಳಗಾಗಿ ಸಂಘಕ್ಕೆ ಪಾವತಿಸಬೇಕು.
7. ಠೇವಣಿ ಬಿಡ್ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದಿದ್ದರೆ ಹರಾಜು ಮುಂಗಡ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
8. ಮಾಸಿಕ ಬಾಡಿಗೆ ಹಣವನ್ನು ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಪಾವತಿಸಬೇಕು.
9. ಬಾಡಿಗೆ ಹಣವನ್ನು ಪ್ರತಿ 03 ವರ್ಷಕ್ಕೊಮ್ಮೆ ಶೇ 20% ರಷ್ಟು ಹೆಚ್ಚಿಸಲಾಗುತ್ತದೆ.
10. ಬಾಡಿಗೆದಾರರು ಮತ್ತು ಆಡಳಿತ ಮಂಡಳಿ ಕಾರ್ಯಾಲಯದ ಮಧ್ಯೆ ಒಪ್ಪಿಗೆ ಕರಾರು ಪತ್ರ ಮಾಡಲಾಗುವುದು. ಈ ಒಪ್ಪಿಗೆ ಕರಾರು ಪತ್ರ 03 ವರ್ಷಗಳ ವರೆಗೆ ಚಾಲ್ತಿಯಲ್ಲಿರುತ್ತದೆ. ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸಿಕೊಳ್ಳತಕ್ಕದ್ದು.
11. ಈ ಕೆಳಗಿನ ವ್ಯಾಪಾರಗಳಿಗೆ ಮಳಿಗೆಗಳನ್ನು ಕೊಡಲಾಗುವುದಿಲ್ಲ.
* ಮಾಂಸಹಾರಕ್ಕೆ ಸಂಬಂಧಪಟ್ಟ ವ್ಯಾಪಾರ,
* ಮದ್ಯದ ಅಂಗಡಿ,
* ಶಬ್ದ ಮಾಲಿನ್ಯ ಮಾಡುವ ವ್ಯಾಪಾರ,
12. ಹರಾಜು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಸಂಘದ ಆಡಳಿತ ಮಂಡಳಿಯ ಅಧಿಕಾರಕ್ಕೆ ಒಳಪಟ್ಟಿರುತ್ತದೆ.
13. ಹೆಚ್ಚಿನ ಮಾಹಿತಿಗಾಗಿ ಸಂಘದ ಕಛೇರಿಯಲ್ಲಿ ಬೆಳಿಗ್ಗೆ 10–30ರಿಂದ 3–00 ಗಂಟೆವರೆಗೆ ಸಂಪರ್ಕಿಸಬಹುದು.

ಅಧ್ಯಕ್ಷರು — ಶ್ರೀ ನಟೇಶ್
ಉಪಾಧ್ಯಕ್ಷರು — ಶ್ರೀ ರಮೇಶ್
ಮುಖ್ಯಕಾರ್ಯ ನಿರ್ವಹಣಾಧಿಕಾರಿ — ಪ್ರಕಾಶ್ ಎಂ. ಎನ್.

॥ ಶ್ರೀ ಚಾಮುಂಡೇಶ್ವರಿ ತಾಯಿ ಕೃಪೆ ॥


ದಿ॥ ಶ್ರೀಮತಿ ರಾಧಮಣಿ ಚಂದ್ರೇಗೌಡ್ರು ಮತ್ತು ಶ್ರೀ ಚಂದ್ರೇಗೌಡ ರವರ

63 ಮತ್ತು 69ನೇ ಜನ್ಮದಿನದ ಸವಿಸ್ಮರಣೆ ಹಾಗೂ ಮಂಟಪ ಉದ್ಘಾಟನೆ 21-12-2025ನೇ ಭಾನುವಾರ



ಮಾಜಿ ನಿರ್ದೇಶಕರು, ಹಾಪ್‌ಕಾಮ್ಸ್, ಲಾಲ್‌ಬಾಗ್, ಬೆಂಗಳೂರು
ಮಾಜಿ ಸದಸ್ಯರು, ಮೈಸೂರು ತಾಲ್ಲೂಕು ಪಂಚಾಯಿತಿ, ಮಾಲೀಕರು
ಶ್ರೀ ಚಾಮುಂಡೇಶ್ವರಿ ಬಾರ್ ಮತ್ತು ರೆಸ್ಟೋರೆಂಟ್, PWD ಗುತ್ತಿಗೆದಾರರು ಹಾಗೂ ಉದ್ಯಮಿಗಳು

ಸವಿನೆನಪಿನಲ್ಲಿ : ಶ್ರೀ ಕೃಷ್ಣಕುಮಾರ್ ಸಿ., ಸಹನಾ ಕೃಷ್ಣಕುಮಾರ್, ಶ್ರೀ ಶಿವೇಗೌಡ್ರು ಮಣಿಯಮ್ಮ ಶಿವೇಗೌಡ್ರು, ಶ್ರೀ ಪುಟ್ಟೇಗೌಡ್ರು ಎನ್.ಪಿ, ನೇತ್ರಾವತಿ ಪುಟ್ಟೇಗೌಡ, ಚೈತ್ರಾವತಿ G ಕುಮಾರ್, ರೇಖಾ ಮಧುದರ್ಶನ್, ಶಕುಂತಲಾ ಮಹದೇವು, ಪವಿತ್ರ ಲೋಕೇಶ್ ಹಾಗೂ ಮೊಮ್ಮಕ್ಕಳು ಮತ್ತು ಬಂಧು ಮಿತ್ರರು.



ಸ್ಥಳ : ಚಿಕ್ಕೇಗೌಡನ ಕೊಪ್ಪಲು, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು

